JULY 82

ಬೆಲೆ : ರೂ. 1-50

ಶೂದ್ರ

ಈ ಸಂಚಿಕೆಯಲ್ಲಿ

ಅಲೆಗ್ಸಾಂಡರ್ ಸೋಲ್ಜೆನಿಟ್ಸನ್—ಡಾ॥ ಯು. ಆರ್. ಅನಂತಮೂರ್ತಿ
ಕುಂ. ವೀರಭದ್ರಪ್ಪ—ಕಾಳೇಗೌಡ ನಾಗವಾರ—ಚಿ. ಶ್ರೀನಿವಾಸರಾಜು
ಯೆನ್. ಜಿ. ರಾವ್—ಕ್ರಿಪಿನ್‌ರಾಹಿ—ಪಿ. ಆರ್. ತಿಪ್ಪೇಸ್ವಾಮಿ
ಡಾ॥ ಡಿ. ಆರ್. ನಾಗರಾಜ್—ಕನಸಿಗೊಂದು ಕಣ್ಣು ಇತ್ಯಾದಿ



ಶೂದ್ರ-ಪ್ರಕಟಣೆಯ ಹತ್ತನೇ ವರ್ಷ—ಹೊಸ ಚಿಂತನೆಗೆ

ಸಂಚಿಕೆ 9 ಜುಲೈ 82 ಸಂಪುಟ 7

ಸಹಾಯಕ ಸಂಪಾದಕರು : ಪದ್ಮರಾಜ ದಂಡಾವತಿ–ನಿರ್ಮಲರೆಡ್ಡಿ–ಶಶಿಕಲಾ ವಸ್ತ್ರದ
ಆನಂದಮೂರ್ತಿ

ಮುಖಪುಟ ಚಿತ್ರ : ಶಕುಂತಲಾ ಪತ್ರಲೇಖ–ರವಿವರ್ಮ

(ಎನ್. ಮರಿಶಾಮಾಚಾರ್ : ಸಮಕಾಲೀನ ಕಲೆ)

ಚಂದಾ ಕಳಿಸಿ, ಚಂದಾ ಕಳಿಸದೆ ಶೂದ್ರ ತರಿಸಿಕೊಳ್ಳಬೇಡಿ,
ಪತ್ರ ಬರೆಯಿರಿ

ಆಜೀವ ಚಂದಾ : 200 ರೂ. (ಐದು ಕಂತುಗಳು)
ವಾರ್ಷಿಕ ಚಂದಾ : 17 ರೂ.

ಶೂದ್ರ ಶ್ರೀನಿವಾಸ್. ಸುದ್ದುಗುಂಟೇಪಾಳ್ಯ ಡಿ.ಆರ್. ಕಾಲೇಜು ಅಂಚೆ
ಬೆಂಗಳೂರು-560 029

ನಾನು ಸೃಜನಶೀಲ ಲೇಖಕ ಆದರೆ......

ಮೇ 16, 1967 —ಅಲೆಗ್ಸಾಂಡರ್ ಸೋಲ್ಜೆನಿಟ್ಸನ್.

ಪ್ರೆಸಿಡಿಯಂ, ಕಾಂಗ್ರೆಸ್ಸಿನ ಪ್ರತಿನಿಧಿಗಳು, ಸೋವಿಯತ್ ಬರಹಗಾರರ ಒಕ್ಕೂಟದ ಸದಸ್ಯರು, ಸಾಹಿತ್ಯ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಸಂಪಾದಕರಿಗೆ :

ಈ ಕಾಂಗ್ರೆಸ್‌ನ ವೇದಿಕೆ ನನಗೆ ಎಟುಕುವಂತಿಲ್ಲವಾದ್ದರಿಂದ ಕಾಂಗ್ರೆಸ್ ಇವನ್ನು ಚರ್ಚಿಸಬೇಕೆಂದು ಸೂಚಿಸುತ್ತೇನೆ.

1. ಸೆನ್ಸಾರ್‌ಶಿಪ್ ರೂಪದಲ್ಲಿ ನಮ್ಮ ಸಾಹಿತ್ಯ ಅನೇಕ ವರ್ಷಗಳಿಂದ ಅನುಭವಿಸುತ್ತಿರುವ ಸಹಿಸಲಸಾಧ್ಯವಾದ ದಬ್ಬಾಳಿಕೆ ಮತ್ತು ಬರಹಗಾರರ ಒಕ್ಕೂಟದಿಂದ ಇಂತಹ ತುಳಿತದ ನಿರಾಕರಣೆ.

ಬರವಣಿಗೆಯ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವಂತಹ ಇಂಥ ಕ್ರಮ ರಾಜ್ಯಾಂಗದಲ್ಲಿ ಸೇರಿಸಲ್ಪಟ್ಟಿಲ್ಲ. ಈ ಕಾರಣಕ್ಕಾಗಿ ಸೆನ್ಸಾರ್ ಕಾನೂನು ಬಾಹಿರವಾಗಿದ್ದರೂ ಹಾಗೆಂದು ಬಹಿರಂಗವಾಗಿ ಒಪ್ಪಿಕೊಳ್ಳದಿರುವುದರಿಂದ ಅದು ನೊಗದೋಪಾದಿಯಲ್ಲಿ ನಮ್ಮ ಸಾಹಿತ್ಯದ ಮೇಲೆ ಹೇರಿಕೊಂಡಿದೆ. ಸಾಹಿತ್ಯದಲ್ಲಿ ಯಾವ ಪರಿಣಿತಿಯನ್ನು ಸಾಧಿಸಿರದ ಬರಹಗಾರರಿಗೆ ಇತರರ ಬರಹಗಳನ್ನು ನಿಯಂತ್ರಿಸುವ ಹಕ್ಕನ್ನು ನೀಡಿರುವುದು ಅನ್ಯಾಯವಾಗಿದೆ. ಮಧ್ಯಯುಗದ ಅವಶೇಷವಾದ ಈ ನಿಯಂತ್ರಣ ಇಪ್ಪತ್ತೊಂದನೆ ಶತಮಾನದ ಸಮೀಪದವರೆಗೂ ತನ್ನ ಅಸ್ತಿತ್ವವನ್ನು ಯಶಸ್ವಿಯಾಗಿ ಎಳೆದಾಡುತ್ತ ಬಂದಿದೆ. ಅದು ಪಡೆದುಕೊಂಡಿರುವ ತಾತ್ಕಾಲಿಕ ಮಹತ್ವ

ಅಲೆಗ್ಸಾಂಡರ್ ಸೋಲ್ಜೆನಿಟ್ಸನ್ ನಮಗೆಲ್ಲ ಪರಿಚಿತರಾಗಿರುವುದು ಒಬ್ಬ ನೋಬೆಲ್ ಪಾರಿತೋಷಕ ಸಾಹಿತಿಯಾಗಿಯೇ ಅಲ್ಲ. ಆತನು ಸಾಹಿತಿಯಾಗಿ ಸಾಂಸ್ಕೃತಿಕ ಸಂಬಂಧಗಳು ಯಾವಾಗಲೂ ಕಲುಷಿತಗೊಳ್ಳಬಾರದು ಮತ್ತು ಮಾನವೀಯ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬರಬಾರದೆಂದು ಭಾವಿಸಿ ಹೋರಾಡುತ್ತಿರುವುದರಿಂದ ವಿಶ್ವದ ಓದುಗರಿಗೆ ಸುಪರಿಚಿತ. ಪ್ರಸ್ತುತ ಎರಡು ಪತ್ರಗಳು ಸೋವಿಯತ್ ಬರಹಗಾರರ ಒಕ್ಕೂಟದ ಮುಂದಿಟ್ಟ ಪತ್ರಗಳು. ತನಗೆ ನ್ಯಾಯ ದೊರಕಿಸಿ ಕೊಡಿ ಎಂದು ಹೋರಾಟದ ಮುಂಚೂಣಿಗೆ ಇಳಿಸಿದ ಪತ್ರಗಳು. ಇಂಥ ಸಂಬಂಧಗಳು ಕೇವಲ ರಷ್ಯಾಗೆ ಸಂಬಂಧಿಸಿದವುಗಳಲ್ಲ ; ಭಾರತೀಯ ಸಂದರ್ಭದಲ್ಲೂ ಅರ್ಥಪೂರ್ಣ. —ಸಂ.

ಮೆದರೆ ತನಗೆ ತಾನೇ ಒಂದು ಖಾಯಂ ಪ್ರತಿಷ್ಠೆಯನ್ನು ಕೊಟ್ಟುಕೊಂಡು, ಒಳ್ಳೆಯ ಸಾಹಿತ್ಯವನ್ನು ಕೆಟ್ಟ ಸಾಹಿತ್ಯದಿಂದ ಬೇರ್ಪಡಿಸುವ ಪ್ರಯತ್ನ ನಡೆಸುತ್ತಿದ್ದೇನೆಂಬ ಸೋಗು ಹಾಕಿರುವುದು.

ವ್ಯಕ್ತಿ ಹಾಗೂ ಸಮಾಜದ ನೈತಿಕ ಜೀವನವನ್ನು ಕುರಿತು ಸುದೀರ್ಘ ಆಲೋಚನೆಯಿಂದೊಡಗೂಡಿದ ಅನ್ನಿಸಿಕೆಗಳನ್ನು ವ್ಯಕ್ತಪಡಿಸಲು ನಮ್ಮ ದೇಶ ತೀವ್ರ ರೀತಿಯಲ್ಲಿ ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳು ಮತ್ತು ಐತಿಹಾಸಿಕ ಅನುಭವವನ್ನು ವಿವರಿಸುವ ಹಕ್ಕನ್ನು ಅದು ನಮ್ಮ ಬರಹಗಾರರಿಂದ ಕಸಿದುಕೊಂಡಿದೆ. ಕ್ಷುಲ್ಲಕವಾದ, ಅಹಂಭಾವದಿಂದೊಡಗೂಡಿದ ಮತ್ತು ರಾಷ್ಟ್ರದ ದೃಷ್ಟಿಯಿಂದ ಅಗತ್ಯವೆನಿಸಿದ ಕಾರಣಗಳ ಆಧಾರದ ಮೇಲೆ ರೂಪಿತಗೊಂಡಿರುವ ಈ ನಿಷೇದ ಮಾನವಿಯ ಉತ್ಸಾಹದ ವಲಯದಲ್ಲಿ ಅಥವಾ ಸಾಮಾಜಿಕ ಪ್ರಜ್ಞೆಯ ಬೆಳವಣಿಗೆಯ ಪ್ರಕಾರದಲ್ಲಿ ಸಕಾಲಿಕವಾಗಿ ಹಾಗೂ ಸತ್ಪರಿಣಾಮವಾಗಿ ಅಭಿವ್ಯಕ್ತಗೊಳ್ಳಬಹುದಾಗಿದ್ದ ಜನರ ಪ್ರಬುದ್ಧ ಆಲೋಚನೆಯನ್ನು ನಾಶಪಡಿಸಿದೆ. ತರುಣ ಬರಹಗಾರರಿಂದ ರಚಿತವಾದ ಅತ್ಯಂತ ಉತ್ತಮವಾದ ಹಸ್ತಪ್ರತಿಗಳೂ ಸಹ ಸಾರ್ವಜನಿಕರಿಗೆ ಪ್ರಿಯವಾದುದಲ್ಲ ಎಂಬ ಕಾರಣಕ್ಕಾಗಿ ತಿರಸ್ಕರಿಸಲ್ಪಟ್ಟಿವೆ. ತಮ್ಮ ಪುಸ್ತಕಗಳು ವಿಕೃತಗೊಂಡರೂ ಸಹ ಅವನ್ನು ಮುದ್ರಣದಲ್ಲಿ ಕಾಣಬೇಕೆಂಬ ಒಂದೇ ಹಂಬಲದಿಂದ ಸೆನ್ಸಾರ್‌ಶಿಪ್‌ನ ಒತ್ತಡಕ್ಕೆ ತಲೆಬಾಗಿ, ಅಧ್ಯಾಯಗಳನ್ನು, ಪುಟಗಳನ್ನು, ಪ್ಯಾರಾ-ವಾಕ್ಯಗಳನ್ನು ಬದಲಿಸಿ, ಅರ್ಥವಿಲ್ಲದ ಶಿರೋನಾಮೆಗಳನ್ನು ಅವಕ್ಕೆ ನೀಡಿ ಪುಸ್ತಕದ ರಚನೆ ಹಾಗೂ ತತ್ವವನ್ನು ಹೇಗೆ ಬದಲಿಸಬೇಕಾಯ್ತು ಎಂಬುದು ಈ ಅಧಿವೇಶನದ ಅನೇಕ ಪ್ರತಿನಿಧಿಗಳಿಗೆ ಗೊತ್ತಿದೆ. ಇಂತಹ ವಿರೂಪಗೊಳಿಸುವಿಕೆಯಿಂದಾಗಿ ಅತ್ಯಂತ ಉತ್ತಮ ಕೃತಿಗಳೂ ತೀವ್ರ ವಿನಾಶಕ್ಕೆ ಒಳಗಾಗುತ್ತವೆ. ಯಾವ ಉತ್ತಮ ಗುಣವೂ ಇಲ್ಲದ ಕೃತಿ ಎಂತಹ ಹಾನಿಯನ್ನೂ ಅನುಭವಿಸುವುದಿಲ್ಲ ಎನ್ನುವುದು ಈಗಾಗಲೇ ಗೊತ್ತಿರುವಂತಹ ಸಾಹಿತ್ಯದ ಗುಣ. ಏನೇ ಆಗಲಿ ವಿಕೃತಗೊಂಡ ಯಾವುದೇ ಸಾಹಿತ್ಯ ಪ್ರಕಟನೆಗೆ ಅತ್ಯಂತ ಉತ್ತಮ ಎಂಬ ಮನ್ನಣೆ. ಈ ಮಧ್ಯೆ ಅತ್ಯಂತ ರೋಧಕ ಶಕ್ತಿಯ "ತಾತ್ವಿಕವಾಗಿ ಹಾನಿಕಾರಕ" "ಭ್ರಷ್ಟತೆಯಿಂದ ಕೂಡಿದೆ" ಮುಂತಾದ ಗುರುತು ಪಟ್ಟಿಗಳು ಹಂಟ್ಟಿಕೊಂಡಿದ್ದರೂ ಅವು ಅಲ್ಪಕಾಲದಲ್ಲಿ ಮಾಸಿಹೋಗುತ್ತವೆ ಎನ್ನುವುದು ಸಾಬೀತಾಗಿದೆ. ವಿಶ್ವಸಾಹಿತ್ಯದಲ್ಲೆ ಹೆಮ್ಮೆಯ ಹೆಸರಾದ ಡಾಸ್ಟೋವೆಸ್ಕಿಯ ಪುಸ್ತಕಗಳೂ ಸಹ ಹಿಂದೊಮ್ಮೆ ಸೋವಿಯಟ್ ದೇಶದಲ್ಲಿ ಪ್ರಕಟಗೊಳ್ಳುತ್ತಿರಲಿಲ್ಲ (ಇಂದೂ ಸಹ ಆತನ ಕೃತಿಗಳು ಪೂರ್ಣವಾಗಿ ಪ್ರಕಟಗೊಳ್ಳುತ್ತಿಲ್ಲ) : ಶಾಲಾಪಠ್ಯಕ್ರಮದಿಂದ ಆತನ ಪುಸ್ತಕಗಳನ್ನು ದೂರವಾಗಿಡಲಾಗುತ್ತಿತ್ತು. ಅವು ಓದಲು ಲಭ್ಯವಾಗುತ್ತಿರಲಿಲ್ಲ. ಯೆಸೆನಿನನ್ನು ಅದೆಷ್ಟು ವರ್ಷಗಳ ಕಾಲ "ಕ್ರಾಂತಿ ವಿರೋಧಿ" ಎಂದು ಪರಿಗಣಿಸಲಾಗಿತ್ತು ?-ಪುಸ್ತಕದ ಸಲುವಾಗಿ ಆತನನ್ನು ಬಂಧಿಸಿಯೂ ಆಗಿತ್ತು. ಮಾಯ

ಕೊವೆಸ್ಕಿಯನ್ನು "ಕ್ರಾಂತಿಕಾರಿ ರಾಜಕೀಯ ಪುಂಡ" ಎಂದು ಕರೆಯಲಿಲ್ಲವೇ ? ದಶಕಗಳ ಕಾಲ ಅಕಮಟೋವಾನನ ಅಮರ ಕಾವ್ಯವನ್ನು ಸೋವಿಯಟ್ ವಿರೋಧಿ ಎಂದು ಪರಿಗಣಿಸಲಾಗಿತ್ತು. ಹತ್ತು ವರ್ಷಗಳ ಕೆಳಗೆ ಮುದ್ರಣಗೊಂಡ ಪ್ರಕಾಶಯುತ ಸ್ಟೆಬೆನಾನನ್ನು ಒಂದು "ಸಂಪೂರ್ಣ ರಾಜಕೀಯ ದೋಷ" ವೆಂದು ಘೋಷಿಸಲಾಯಿತು. ಇಪ್ಪತ್ತು ಅಥವಾ ಮೂವತ್ತು ವರ್ಷಗಳ ವಿಳಂಬದ ನಂತರ ಬ್ಯೂನಿನ್, ಬಲ್ಗಕೋಕ್ ಮತ್ತು ಪ್ಲೆಟೊನೊವ್ ನಮ್ಮಲ್ಲಿಗೆ ಹಿಂತಿರುಗಿದರು.

ಈ ರೀತಿ ಸಾಹಿತ್ಯ ಪರಿಷ್ಕಾರಗೊಳ್ಳುತ್ತಿರುವಾಗ ತೊಂದರೆಯೊಡ್ಡುವ ಬರಹಗಾರನೊಬ್ಬನ ಸಾವಿನಿಂದಾಗಿ ಒಂದು ನಿರ್ದಿಷ್ಟ ಮುಹೂರ್ತ ಒದಗಿ ಬರುತ್ತದೆ. ಆದಾದ ನಂತರ ಬೇಗಲೊ ನಿಧಾನವಾಗಿಯೋ ಅವನನ್ನು "ಆತನ ತಪ್ಪುಗಳನ್ನು ಕುರಿತ ವಿವರಣೆ" ಯೊಂದಿಗೆ ನಮಗೆ ಕಾಣಿಸಲಾಗುತ್ತವೆ. ಅನೇಕ ಕಾಲ ಪಾಸ್ಟರ್‌ನ್ಯಾಕ್‌ನ ಹೆಸರನ್ನು ಗಟ್ಟಿಯಾಗಿ ಉಚ್ಚರಿಸಲಾಗುತ್ತಿರಲಿಲ್ಲ ; ಆದರೆ ಆತ ಸತ್ತ ನಂತರ ಆತನ ಪುಸ್ತಕಗಳು ಕಾಣಿಸಿಕೊಂಡವು. ಆತನ ಪದ್ಯದ ಪಂಕ್ತಿಗಳನ್ನು ಅಧಿಕೃತ ಸಮಾರಂಭಗಳಲ್ಲಿಯೂ ಸಹ ಉಲ್ಲೇಖಿಸಲಾಯ್ತು.

ಪುಶ್ಕಿನ್‌ನ ಮಾತು ನಿಜವಾಗಿಯೂ ಸತ್ಯವಾಗುತ್ತಿದೆ : "ಅವರು ಸತ್ತವರನ್ನು ಪ್ರೀತಿಸಲು ಮಾತ್ರ ಸಮರ್ಥರು."

ಈ ರಾಕ್ಷಸೀ ವಿಳಂಬಗಳು ಮತ್ತು ಕಲಾವಂತಿಕೆಯ ಪ್ರಜ್ಞೆಯ ತುಳಿತದ ಪರಿಣಾಮವಾಗಿ ಸಂಭವಿಸಿದ ಪುಸ್ತಕಗಳ ಪ್ರಕಟನೆ ಮತ್ತು ಹೆಸರುಗಳ ಸೇರ್ಪಡೆ ನಮ್ಮ ಜನರು ಅನುಭವಿಸಿದ ಸಾಮಾಜಿಕ ಅಥವಾ ಕಲಾತ್ಮಕ ನಷ್ಟವನ್ನು ತುಂಬಿಕೊಡುವುದಿಲ್ಲ. (ವಾಸ್ತವವಾಗಿ 1920 ರಲ್ಲಿ ಕೆಲವು ಬರಹಗಾರರಿದ್ದರು–ಪಿಲ್ನಿಯಕ್, ಪ್ಲೇಟೊನೋವ್, ಮಂಡೇಲ್‌ಶ್ಯಂ-ತೀರಾ ಮೊದಲ ಹಂತದಲ್ಲೆ ವ್ಯಕ್ತಿಪೂಜೆಯ ಉಗಮ ಮತ್ತು ಸ್ಟಾಲಿನ್‌ನ ಸ್ವಭಾವದ ಬಗ್ಗೆ ಗಮನ ಸೆಳೆದವರು ; ಆದರೆ ಈ ಬರಹಗಾರರ ಮಾತಿಗೆ ಕಿವಿಯೊಡ್ಡುವುದಕ್ಕೆ ಬದಲಾಗಿ ಅವರನ್ನು ಸ್ತಬ್ಧಗೊಳಿಸಲಾಯಿತು, ವಿನಾಶದತ್ತ ಒಯ್ಯಲಾಯ್ತು). ಸಾಹಿತ್ಯ "ಅನುಮತಿಯುಳ್ಳದ್ದು" ಮತ್ತು "ಅನುಮತಿ ಇಲ್ಲದ್ದು", "ಈ ಬಗ್ಗೆ ನೀನು ಬರೆಯುವುದು" ಮತ್ತು "ಈ ಬಗ್ಗೆ ನೀನು ಬರೆಯಕೂಡದು" ಎಂಬ ಚೌಕಟ್ಟಿನೊಳಗೆ ವಿಕಾಸ ಹೊಂದುವುದಿಲ್ಲ. ಸಮಕಾಲೀನ ಸಮಾಜದ ಉಸಿರಾಗಿರದ, ಸಮಾಜದ ನೋವು ಮತ್ತು ಹೆದರಿಕೆಗಳನ್ನು ಪ್ರಕಟಿಸಲು ಧೈರ್ಯ-ವಹಿಸದ ಭಯ ಹುಟ್ಟಿಸುವ ನೈತಿಕ ಮತ್ತು ಸಾಮಾಜಿಕ ಅಪಾಯಗಳ ವಿರುದ್ಧ ಸಕಾಲದಲ್ಲಿ ಎಚ್ಚರಿಕೆ ನೀಡದ ಸಾಹಿತ್ಯ—ಇವಕ್ಕೆ ಸಾಹಿತ್ಯ ಎಂದು ಕರೆಯಿಸಿಕೊಳ್ಳುವ ಅರ್ಹತೆಯಿಲ್ಲ ; ಅದು ಕೇವಲ ಒಂದು ಮುಂಭಾಗವನ್ನು ಮಾತ್ರ ಹೊಂದಿರುವ ನಿರ್ಮಾಣ. ಅಂತಹ ಸಾಹಿತ್ಯ ತನ್ನ ಜನರ ಆತ್ಮವಿಶ್ವಾಸವನ್ನೇ ಕಳೆದುಬಿಡುತ್ತದೆ....

ಮುದ್ರಿತ ಕೃತಿಯಂತೆ ಓದಿಸಿಕೊಳ್ಳುವುದಕ್ಕೆ ಬದಲಾಗಿ ವ್ಯರ್ಥವಾಗದವಾಗಿ ಬಳಸಲ್ಪಡುತ್ತದೆ. ನಮ್ಮ ಸಾಹಿತ್ಯ ಕಳೆದ ಶತಮಾನದಲ್ಲಿ ಮತ್ತು ಈ ಶತಮಾನದ ಮೊದಲಲ್ಲಿ ವಹಿಸಿದ ಮುಂಚೂಣಿಯ ಪಾತ್ರವನ್ನು ಕಳೆದುಕೊಂಡಿದೆ. 1920 ರಲ್ಲಿ ಅದನ್ನು ಯಾವ ಪ್ರಯೋಗಾತ್ಮಕ ಔನ್ನತ್ಯದಿಂದ ಗುರುತಿಸಲಾಗಿತ್ತೋ ಅದೀಗ ಕಾಣೆಯಾಗಿದೆ. ಇಡೀ ಪ್ರಪಂಚಕ್ಕೆ ನಮ್ಮ ದೇಶದ ಸಾಹಿತ್ಯದ ಜೀವನ ವರ್ಣರಹಿತ, ಕ್ಷುಲ್ಲಕ ಮತ್ತು ಕೀಳಾಗಿ ಕಾಣುತ್ತಿವೆ. ಇಂತಹ ಪರಿಸ್ಥಿತಿಯನ್ನು ನಿಯಂತ್ರಿಸದಿದ್ದರೆ ನಮ್ಮ ದೇಶಕ್ಕೆ ಮಾತ್ರ ನಷ್ಟವಲ್ಲ, ವಿಶ್ವಸಾಹಿತ್ಯಕ್ಕೂ ತುಂಬಲಾರದ ಕೊರತೆ. ಪೂರ್ವಗ್ರಹ ಪೀಡಿತವಲ್ಲದ ನಮ್ಮ ಸಾಹಿತ್ಯದ ಎಲ್ಲ ಫಲಕಗಳು ಎಟುಕುವಂತಿದ್ದರೆ, ನಮ್ಮದೇ ಆದ ಅಧ್ಯಾತ್ಮಿಕ ಅನುಭವದಿಂದ ಅದು ಶ್ರೀಮಂತಗೊಂಡಿದ್ದರೆ, ಜಗತ್ತಿನ ಇಡೀ ಕಲಾತ್ಮಕ ಚಲನೆ ಬೇರೆಯೇ ಆದ ರೀತಿಯಲ್ಲಿ ಒಂದು ಹೊಸ ಸ್ಥಿತಿಯನ್ನು ಕಂಡುಕೊಂಡು ಹೊಸ ಕಲಾತ್ಮಕ ಆಯಾಮಗಳನ್ನು ಗಳಿಸಿಕೊಳ್ಳುತ್ತ ಮುನ್ನಡೆಯಬಲ್ಲದು.

ಸೋವಿಯಟ್ ಬರಹಗಾರರ ಒಕ್ಕೂಟ ಮುಕ್ತರಾದ ಅಥವಾ ಬಚ್ಚಿಟ್ಟಂತಹ ಎಲ್ಲ ಬಗೆಯ ಕಥಾನಕ ಬರಹಗಳ ಮೇಲೆ ಹೊರೆಸಿರುವ ನಿಷೇಧವನ್ನು ತೆಗೆದು ಹಾಕಬೇಕೆಂದು ಸೂಚಿಸುವ ನಿರ್ಣಯವನ್ನು ಮಂಡಿಸಲಿ ಮತ್ತು ಪ್ರತಿಯೊಂದು ಮುದ್ರಿತ ಪುಟವನ್ನು ಬಿಡುಗಡೆ ಮಾಡಲು ಅನುಮತಿ ಪಡೆಯಲೇಬೇಕೆಂಬ ನಿಯಮದಿಂದ ಮುದ್ರಣಾಲಯಗಳಿಗೆ ವಿನಾಯಿತಿ ನೀಡಲಿ ಎಂದು ನಾನು ತಿಳಿಸುತ್ತೇನೆ.

2. ತನ್ನ ಸದಸ್ಯರ ಬಗ್ಗೆ ಒಕ್ಕೂಟದ ಕರ್ತವ್ಯಗಳು

ಈ ಕರ್ತವ್ಯಗಳನ್ನು ಸೋವಿಯಟ್ ಬರಹಗಾರರ ಒಕ್ಕೂಟದ ನ್ಯಾಯಾಂಗಗಳಲ್ಲಿ (ಹಕ್ಕುಗಳ ರಕ್ಷಣೆ ಮತ್ತು ಬರಹಗಾರರ ಇತರ ಹಕ್ಕುಗಳನ್ನು ರಕ್ಷಿಸುವ ಕ್ರಮಗಳು) ಸ್ಪಷ್ಟವಾಗಿ ರೂಪಿಸಿಲ್ಲ. "ಇತರ" ಹಕ್ಕುಗಳನ್ನಾಗಲಿ ಅಥವಾ ಕಿರುಕುಳಕ್ಕೆ ಒಳಗಾಗಿರುವ ಬರಹಗಾರರ ಹಕ್ಕುಗಳನ್ನಾಗಲಿ ಸಮರ್ಥಿಸಿಕೊಂಡಿಲ್ಲ.

ಅನೇಕ ಬರಹಗಾರರು ತಮ್ಮ ಜೀವಿತಕಾಲದಲ್ಲಿ ಪತ್ರಿಕೆಗಳಲ್ಲಿ, ಅಧಿವೇಶನ ಹಾಗೂ ಸಮ್ಮೇಳನಗಳಲ್ಲಿ ಉತ್ತರವನ್ನು ನೀಡುವ ಸಾಧ್ಯತೆಯನ್ನು ತಡೆಯಂದೆ ಬೈಗಳ ಮತ್ತು ಅವಮಾನಕ್ಕೆ ಗುರಿಯಾಗಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ, ಅವರನು ದಬ್ಬಾಳಿಕೆ ಮತ್ತು ವೈಯಕ್ತಿಕ ಶಿಕ್ಷೆಗೆ ಗುರಿಯಾಗಿಸಲಾಗಿದೆ (ಬುಲ್ಗಕೋವ್, ಆತಮ ರೋವ, ಸ್ವೆಟೇಇರ, ಪಾಸ್ಟರ್‌ನ್ಯಾಕ್, ಜೋಶ್‌ಚೆಂಕೋ, ಪ್ಲೇಟೋನೋವ್, ಅಲೆಗ್ಸಾಂಡರ್ ಗ್ರಿನ್, ವ್ಯಾಸಿಲಿ ಗ್ರಾಸ್‌ಮನ್). ಬರಹಗಾರರ ಒಕ್ಕೂಟ ತನ್ನ ಸ್ವಂತ ನಿಯತಕಾಲಿಕೆಗಳನ್ನು ಸಮರ್ಥನೆಯ ಈ ಉದ್ದೇಶಕ್ಕಾಗಿ ಬರಹಗಾರರಿಗೆ ಒದಗಿಸಲಿಲ್ಲ, ಅವರನ್ನು ಸಮರ್ಥಿಸಲು ಮುಂದೆ ಬರಲೂ ಇಲ್ಲ. ಆದರೆ ತನ್ನ

ಮುಖಂಡರ ಮೂಲಕ ಯಾವಾಗಲೂ ಶಿಕ್ಷೆಯನ್ನು ವಿಧಿಸುವುದರಲ್ಲಿ ಮುಂದಿದ್ದಿತು. ಇಪ್ಪತ್ತನೆ ಶತಮಾನದ ನಮ್ಮ ಕಾವ್ಯವನ್ನು ಅಲಂಕರಿಸಿದ ಹೆಸರುಗಳು ಒಕ್ಕೂಟದಿಂದ ಉಚ್ಛಾಟಿಸಲ್ಪಟ್ಟವರ ಪಟ್ಟಿಯಲ್ಲಿ ಅಥವಾ ಪ್ರವೇಶಕ್ಕೆ ಅನರ್ಹರಾದ ಸಾಲಿನಲ್ಲಿ ಕಾಣಿಸಿಕೊಂಡವು. ಪಕ್ಷದ ಇಪ್ಪತ್ತನೆ ಅಧಿವೇಶನದ ನಂತರ ಆರು ನೂರಕ್ಕೂ ಹೆಚ್ಚು ಬರಹಗಾರರನ್ನು ಒಕ್ಕೂಟ ಬಂದೀಖಾನೆಗಳಲ್ಲಿ ಮತ್ತು ಕ್ಯಾಂಪುಗಳಲ್ಲಿ ಶಿಕ್ಷೆಯನ್ನು ಅನುಭವಿಸಲು ಕೂಡಿದೆ ಎನ್ನುವುದು ನಮಗೆ ತಿಳಿಯಿತು. ಏನೇ ಆಗಲಿ ಈ ಪ್ರಸಂಗದ ಸುರುಳಿ ಸುತ್ತಿರುವ ಅಂತ್ಯವನ್ನು ನಮ್ಮ ಕಣ್ಣುಗಳು ಓದಲಾಗದು ; ಎಂದೆಂದೂ ಓದಲಾಗದು. ವೈಯುಕ್ತಿಕ ಭೇಟಿಯ ಸಮಯದಲ್ಲಿ ನಮ್ಮ ಗಮನಕ್ಕೆ ಬಂದಂತೆ ವಿಕಸನ ಶಕ್ತಿಯನ್ನು ಪಡೆಯುವುದಕ್ಕೆ ಮುಂಚೆಯೇ ಕ್ಯಾಂಪುಗಳಲ್ಲಿ ಕಮರಿಹೋದಂತಹ ಯಂಗೋಡಾ, ಮೆಸೋವ್, ಬೆರಿಯ ಮತ್ತು ಅಬಕುನೋನ್‌ನ ದಿನಗಳಲ್ಲಿನ ಬರಹಗಳು ರಾಜ್ಯಶಿಕ್ಷಣ ಸೇವೆ ಕಛೇರಿಗಳನ್ನು ಎಂದೂ ದಾಟಲಿಲ್ಲ. ಅವೆಲ್ಲವೂ ತರುಣ ಬರಹಗಾರರಿಂದ ರಚಿತವಾದವುಗಳಾಗಿವೆ.

ಒಕ್ಕೂಟಕ್ಕೆ ಹೊಸದಾಗಿ ಆಯ್ಕೆಯಾದ ಮುಖಂಡರಿಗೆ ಜವಾಬ್ದಾರಿಗಳ ಬಗ್ಗೆ ತಮಗಿಂತ ಮೊದಲು ಅಲ್ಲಿದ್ದವರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವಂತಹ ಯಾವ ಐತಿಹಾಸಿಕ ಅವಶ್ಯಕತೆಯೂ ಕಂಡುಬಂದಿಲ್ಲ. ಅವಹೇಳನಕ್ಕೆ ಮತ್ತು ಅನ್ಯಾಯವಾದ ಹಿಂಸೆಗೆ ಗುರಿಯಾದ ಒಕ್ಕೂಟದ ಸದಸ್ಯರನ್ನು ಸಮರ್ಥಿಸುವಂತಹ ಗ್ಯಾರಂಟಿಗಳು ರಾಜ್ಯಾಂಗದ 22ನೇ ಪ್ಯಾರಾದಲ್ಲಿ ಸೇರಿಸಲ್ಪಟ್ಟು, ಕಾನೂನನ್ನು ಉಲ್ಲಂಘಿಸುವಂತಹ ವರ್ತನೆಗಳು ಪುನರಾವರ್ತನೆ ಆಗುವುದು ನಿಲ್ಲಲಿ ಎಂದು ನಾನು ಸೂಚಿಸುತ್ತೇನೆ.

ನಾನು ಹೇಳುವುದನ್ನು ಅಧಿವೇಶನ ಅನ್ಯಮನಸ್ಕತೆಯಿಂದ ಪರಿಗಣಿಸಿದೆ, ನಾನೇ ಅನುಭವಿಸಿದಂತಹ ಹಿಂಸೆಯನ್ನು ಗಮನಕ್ಕೆ ತಂದುಕೊಳ್ಳಬೇಕೆಂದು ತಿಳಿಯಬಯಸುತ್ತೇನೆ.

1) ರಾಜ್ಯ ರಕ್ಷಣ ಅಧಿಕಾರಿಗಳು ನನ್ನ ಕಾದಂಬರಿ, "ದಿ ಫಸ್ಟ್ ಸರ್ಕಲ್"ನ್ನು ಪ್ರಕಟಣೆಗೆ ಅಡ್ಡಿಯುಂಟು ಮಾಡುವ ಸಲುವಾಗಿ ತೆಗೆದುಕೊಂಡು ಹೋಗಿ ಎರಡು ವರ್ಷಗಳಾಗುತ್ತ ಬಂದಿದೆ. ಅದಕ್ಕೆ ಬದಲಾಗಿ ನನ್ನ ಜೀವಿತ ಕಾಲದಲ್ಲಿಯೇ ನನ್ನ ಒಪ್ಪಿಗೆಗೆ ವಿರುದ್ಧವಾಗಿ ಮತ್ತು ನನಗೆ ಅರಿವಿಲ್ಲದೆಯೇ ಈ ಕಾದಂಬರಿ ಅಸಹಜವಾದ "ನಿಯಂತ್ರಿತ" ಮುದ್ರಣವಾಗಿ ಬಿಡುಗಡೆಯಾಗುತ್ತಲಿದೆ. ನನ್ನ ಕಾದಂಬರಿ ಹೀಗೆ ಸಾಹಿತ್ಯ ಅಧಿಕಾರಿಗಳಿಗೆ ದೊರೆಯುತ್ತಿದೆಯಾದರೂ ಅನೇಕ ಬರಹಗಾರರ ಕೈಗೆ ಸಿಗದಂತೆ ಜಾಗ್ರತೆಯನ್ನು ವಹಿಸಲಾಗಿದೆ. ಬರಹಗಾರರ ಸಂಘಗಳಲ್ಲಿ ಕಾದಂಬರಿಯನ್ನು ಮುಕ್ತವಾಗಿ ಚರ್ಚಿಸುವುದಕ್ಕಾಗಲಿ ಅಥವಾ ಅಪಪ್ರಚಾರವನ್ನು ತಪ್ಪಿಸುವುದಕ್ಕಾಗಲಿ

ನಾನು ಅಸಮರ್ಥನಾಗಿದ್ದೇನೆ.

2) ಈ ಕಾದಂಬರಿಯೊಂದಿಗೇ ಹದಿನೈದು ಇಪ್ಪತ್ತು ವರ್ಷಗಳಷ್ಟು ಹಳೆಯಂದಾದ ಮುದ್ರಣದ ಯಾವ ಉದ್ದೇಶವೂ ಇರದಿದ್ದ ನನ್ನ ಸಾಹಿತ್ಯ ಪ್ರತಿಗಳನ್ನು ರಾಜ್ಯ ಪೋಲೀಸರು ನನ್ನಿಂದ ಕಸಿದುಕೊಂಡಿದ್ದಾರೆ. ಈಗ ಇದರಿಂದ ಆಯ್ದ ಕೆಲವು ಭಾಗ ಗಳನ್ನು ಪ್ರಕಟಿಸಲಾಗಿದೆ. ಮೂರು ಅಂಕೆಯ ನಾಮಾಂಕಿತ ಹೊಂದಿ, ಉಪವಾಸ ದಿಂದ ಸಾಯುತ್ತಿದ್ದಾಗ ಸಮಾಜ ನನ್ನನ್ನು ಮರೆತು ನಾನು ಅನುಭವಿಸುತ್ತಿದ್ದ ತುಳಿತ ವನ್ನು ಪ್ರತಿಭಟಿಸಲು ಯಾರೂ ಮುಂದೆ ಬರದಿದ್ದ ಸಂದರ್ಭದಲ್ಲಿ ನಾನು ನನ್ನ ಸ್ಮರ ಣೆಯ ಮೂಲಕ ಬರೆದ ಎಷ್ಟೋ ವರ್ಷಗಳ ಹಿಂದಿನ "ಫೀಸ್ಟ್ ಆಫ್ ದಿ ಕಾಂಕರರ್ಸ್" ನಾಟಕ ಹಾಗೂ ಒಂದು ಪದ್ಯ ನನ್ನ ಇತ್ತೀಚಿನ ಕೃತಿಯೆಂದು ಹೇಳಲಾಗುತ್ತಿದೆ.

3) ಈಚಿನ ಮೂರು ವರ್ಷಗಳಿಂದಲಂತೂ ಬೇಜವಾಬ್ದಾರಿಯುತವಾದ ಅವ ಹೇಳನದ ಆಂದೋಲನವನ್ನೇ ನನ್ನ ವಿರುದ್ಧ ಪ್ರಾರಂಭಿಸಲಾಗಿದೆ. ಯಾವ ವ್ಯಕ್ತಿ ಯುದ್ಧದ ಉದ್ದಕ್ಕೂ ಬ್ಯಾಟರಿ ಕಮ್ಯಾಂಡರನಾಗಿ ಹೋರಾಡಿದನೊ, ಮಿಲಿಟರಿ ಮನ್ನಣೆಗಳನ್ನು ಗಳಿಸಿದ್ದನೊ, ಅಂತಹವನನ್ನು ಅಪರಾಧಿಯೆಂದು ಪರಿಗಣಿಸಿ ಕಾಲ ವನ್ನು ವ್ಯರ್ಥವಾಗಿ ಕಳೆದವನು, ಶತೃರಿಗೆ ಶರಣಾಗತನಾದವನು ಎಂದು ಅಪಪ್ರಚಾರ ಮಾಡಲಾಗಿದೆ. (ನಾನೆಂದೂ ಯುದ್ಧದ ಕೈದಿಯಾಗಿರಲಿಲ್ಲ). ನಾನು ನನ್ನ ದೇಶ ವನ್ನು "ವಂಚಿಸಿದೆ" ಮತ್ತು "ಜರ್ಮನರಿಗೆ ಸೇವೆ ಸಲ್ಲಿಸಿದೆ" ಎನ್ನಲಾಗಿದೆ. ಸ್ಟಾಲಿನ್ ನನ್ನು ಟೀಕಿಸಿದ್ದಕ್ಕಾಗಿ ನಾನು ಶಿಬಿರಗಳಲ್ಲಿ ಮತ್ತು ಬಂದೀಖಾನೆಗಳಲ್ಲಿ ಅನುಭವಿಸಿದ ಹನ್ನೊಂದು ವರ್ಷಗಳನ್ನು ಈಗ ಈ ರೀತಿ ವ್ಯಾಖ್ಯಾನಿಸಲಾಗುತ್ತಿವೆ. ಈ ಅವ ಹೇಳನವನ್ನು ರಹಸ್ಯ ಸೂಚನೆಗಳಲ್ಲಿ ಮತ್ತು ಅಧಿಕೃತ ಸ್ಥಾನಮಾನಗಳನ್ನು ಹೊಂದಿರುವ ಜನರ ಸಭೆಗಳಲ್ಲಿ ಪ್ರಚಾರ ಮಾಡಲಾಗುತ್ತಿದೆ. ಆರ್ ಎಸ್ ಎಪ್ ಆರ್ ನ ಬರಹ ಗಾರರ ಒಕ್ಕೂಟದ ಮಂಡಲಿಗೆ ಮತ್ತು ಪತ್ರಿಕೆಗಳಿಗೆ ಮನವಿ ಮಾಡಿಕೊಳ್ಳುವ ಮೂಲಕ ಈ ಅವಹೇಳನವನ್ನು ನಿಲ್ಲಿಸಲು ನಾನು ವ್ಯರ್ಥವಾಗಿ ಪ್ರಯತ್ನಿಸುತ್ತಿದ್ದೇನೆ. ಮಂಡಲಿ ಯಾವ ಪ್ರತಿಕ್ರಿಯೆಯನ್ನೂ ಸಹ ತೋರಿಸಿಲ್ಲ. ಒಂದೇ ಒಂದು ವೃತ್ತಪತ್ರಿ ಕೆಯೂ ನಾನು ನೀಡಿದ ಉತ್ತರವನ್ನು ಪ್ರಕಟಿಸಿಲ್ಲ. ಅದಕ್ಕೆ ಬದಲಾಗಿ ವೇದಿಕೆಗಳ ಮೂಲಕ ನನ್ನ ವಿರುದ್ಧದ ಅಪಪ್ರಚಾರವನ್ನು ತೀವ್ರಗೊಳಿಸಲಾಗಿದೆ. ಕಳೆದ ವರ್ಷ ದಿಂದೀಚೆಗೆ ನನ್ನಿಂದ ವಶಪಡಿಸಿಕೊಂಡ ಕಾಗದ ಪತ್ರಗಳ ವಿಕೃತ ರೂಪವನ್ನು ಬಳಸಿ ಕೊಳ್ಳಲಾಗಿದೆ. ನನಗೆ ಉತ್ತರಿಸುವ ಯಾವ ಮಾರ್ಗವನ್ನೂ ಉಳಿಸಿಲ್ಲ.

4) ನನ್ನ ಕಾದಂಬರಿ, ಕ್ಯಾನ್ಸರ್‌ವಾರ್ಡ್, ಮಾಸ್ಕೊ ಬರಹಗಾರರ ಸಂಘದ ಗ್ರಂಥ ಇಲಾಖೆಯಿಂದ ಪ್ರಕಟನೆಗಾಗಿ ಒಪ್ಪಿಗೆಯನ್ನು ಪಡೆದ ಮೊದಲ ಭಾಗ, ಐದು ಪತ್ರಿಕೆಗಳಿಂದ ತಿರಸ್ಕರಿಸಲ್ಪಟ್ಟಿದೆ. ನೋವಿಮಿರ್, ವೇಸ್ತಾ ಮತ್ತು ಪ್ರೊಸ್ಟೊರ್ ಅದರ ಪ್ರಕಟನೆಗೆ ಒಪ್ಪಿಗೆ ನೀಡಿಲ್ಲ.

5) ಸೋವ್ರೆಮೆನ್ನಿಕ್ ಥಿಯೇಟರ್‌ನಿಂದ 1962 ರಲ್ಲಿ ಅಂಗೀಕರಿಸಲ್ಪಟ್ಟಿದ್ದ "ದಿ–ರೆಯಿಂಡೀರ್ ಅಂಡ್ ದಿ ಲಿಟಲ್ ಹಟ್" ನಾಟಕ ಇದುವರೆಗೂ ಅಭಿನಯಿಸಲು ಅನುಮತಿಯನ್ನು ಪಡೆದಿಲ್ಲ.

6) ಚಿತ್ರ ನಾಟಕ ದಿ ಟ್ಯಾಂಕ್ಸ್ ನೋ ದಿ ಟ್ರೂತ್, ಪ್ರದರ್ಶಕ ನಾಟಕ ದಿ ಲೈಟ್ ದಟ್ ಈಸ್ ಇನ್ ಯು : ದಿ ರೈಟ್ ಹ್ಯಾಂಡ್ ಎಂಬ ಶೀರ್ಷಿಕೆಯ ಸಣ್ಣ ಕತೆಗಳು ; ಸ್ಮಾಲ್ ಲೈಟ್ ಎಂಬ ಪರಣಿ–ಇವಕ್ಕೆ ದಿಗ್ದರ್ಶಕರಾಗಲಿ ಪ್ರಕಾಶಕರಾಗಲಿ ಸಿಗಲಿಲ್ಲ.

7) ನೋವಿ ಮಿರ್‌ನಲ್ಲಿ ಪ್ರಕಟಗೊಂಡ ನನ್ನ ಕತೆಗಳು ಎಂದೂ ಪುಸ್ತಕ ರೂಪ ದಲ್ಲಿ ಪ್ರಕಟವಾಗಲಿಲ್ಲ. ಅವು ಎಲ್ಲೆಡೆಗಳಲ್ಲೂ—ಸೋವಿಯಟ್ ಲೇಖಕ ಪ್ರಕಾಶಕರು' ರಾಜ್ಯ ಸಾಹಿತ್ಯ ಪ್ರಕಟನೆ ಮಂದಿರ ಮತ್ತು ಅಗೊನಿಯಂಕ್ ಪುಸ್ತಕಭಂಡಾರ–ತಿರಸ್ಕರಿ ಸಲ್ಪಟ್ಟಿದ್ದರಿಂದಾಗಿ ಹೀಗೆ ಅವು ಸಾಮಾನ್ಯ ಓದುಗರಿಗೆ ಎಟುಕದೆಯೇ ಉಳಿದಿದೆ.

8) ನನ್ನ ಕೃತಿಗಳನ್ನು ಸಾರ್ವಜನಿಕರಿಗೆ ಓದುವ ಮೂಲಕವಾಗಲಿ (ನವೆಂಬರ್ 1966 ಲ್ಲಿ ನಡೆಯಬೇಕಾಗಿದ್ದ ಹನ್ನೊಂದು ಸಭೆಗಳಲ್ಲಿ ಒಂಭತ್ತು ಕೊನೆ ಗಳಿಗೆಯುಲ್ಲಿ ರದ್ದಾದವು) ಅಥವಾ ರೇಡಿಯೋದಲ್ಲಿ ಓದುವ ಮೂಲಕವಾಗಲಿ, ಓದುಗರೊಂದಿಗೆ ನಾನು ಇನ್ನಾವುದೇ ಸಂಪರ್ಕ ಬೆಳೆಸಿಕೊಳ್ಳಲೂ ಸಹ ನನಗೆ ತಡೆಯೊಡ್ಡಲಾಗಿದೆ. ಹಸ್ತಪ್ರತಿಯನ್ನು "ಓದಲು ಮತ್ತು ಪ್ರತಿ ಮಾಡಲು" ನೀಡುವಂತಹ ಸರಳ ಕ್ರಮವೂ ಸಹ ಈಗ ಒಂದು ಶಿಕ್ಷಾರ್ಹ ಕೆಲಸವಾಗಿದೆ. (ಐದು ಶತಮಾನಗಳ ಹಿಂದೆ ರಷ್ಯಾದ ಪುರಾತನ ಪತ್ರಕರ್ತರಿಗೆ ಇದನ್ನು ಮಾಡಲು ಅನುಮತಿ ಇತ್ತು).

ಹೇಗೆ ನನ್ನ ಕೆಲಸ ಅಂತಿಮವಾಗಿ ಕಡಿತಗೊಳ್ಳಲ್ಪಡುತ್ತಿದೆ.

ನನ್ನ ಹಕ್ಕನ್ನು ಮತ್ತು "ಇತರ" ಹಕ್ಕುಗಳನ್ನು ಉಲ್ಲಂಘನೆ ಮಾಡಿರುವ ಹಿನ್ನೆಲೆ ಯಲ್ಲಿ ನಾಲ್ಕನೆ ಅಧಿವೇಶನ ನನ್ನನ್ನು ಸಮರ್ಥಿಸುತ್ತದೆಯೇ ? ಹೌದು ಅಥವಾ ಇಲ್ಲವೇ ? ಅನೇಕ ಪ್ರತಿನಿಧಿಗಳ ಸಾಹಿತ್ಯಕ್ಕೆ ಭವಿಷ್ಯ ದೃಷ್ಟಿಯಿಂದ ಈ ಆಯ್ಕೆ ಅಮುಖ್ಯವೆಂದು ಕಾಣಿಸುವುದಿಲ್ಲ ಎಂದು ನನಗೆ ತೋರುತ್ತದೆ.

ಎಲ್ಲ ಪರಿಸ್ಥಿತಿಗಳಲ್ಲೂ ಸಹ ನಾನು ಬರಹಗಾರನಾಗಿ ನನ್ನ ಕರ್ತವ್ಯಗಳನ್ನು ಪೂರೈಸುತ್ತೇನೆಂಬ ಆತ್ಮವಿಶ್ವಾಸ ನನಗೆ ಹೇಗಾದರೂ ಇದೆ—ಇನ್ನೂ ಹೆಚ್ಚು ಯಶಸ್ವಿ ಯಾಗಿ. ಸತ್ಯದ ಹಾದಿಯನ್ನು ಯಾರೂ ಮುಟ್ಟಲಾರರು. ಮತ್ತು ಅವರ ಕಾರಣ ವನ್ನು ಮುಂದುವರಿಸಲು ನಾನು ಸಾವನ್ನು ಆಹ್ವಾನಿಸಲೂ ಸಹ ಸಿದ್ಧ. ಆದು ಬರು ವಾಗ ಈ ಪುನರಾವರ್ತನೆಗೊಳ್ಳುತ್ತಿರುವ ಉದಾಹರಣೆಗಳು ಬರಹಗಾರನ ಲೇಖನ ಆತನ ಜೀವಿತ-ಕಾಲದಲ್ಲಿ ನಿಲ್ಲಲಾರದೆಂಬುದನ್ನು ತೋರಿಸಲಿ.

ಯಾವ ಕಾಲದಲ್ಲಿ ಇದು ನಮ್ಮ ಇತಿಹಾಸದಲ್ಲಿ ಉಂಟಾಗಿದೆ. ●

ಸೋಲ್ಜೆನಿಟ್ಸಿನ್ನನ ಎರಡನೆಯ ಪತ್ರ: ಸೆಪ್ಟಂಬರ್ 12, 1967

ಸೋವಿಯತ್ ಯೂನಿಯನ್ನಿನ ಬರಹಗಾರರ ಒಕ್ಕೂಟ ಮಂಡಲಿಯ ಕಚೇರಿಗೆ
—ಎಲ್ಲ ಕಾರ್ಯದರ್ಶಿಗಳಿಗೆ :

ನೂರು ಬರಹಗಾರರ ಬೆಂಬಲವಿದ್ದಾಗ್ಯೂ ಸಹ ಬರಹಗಾರರ ಒಕ್ಕೂಟದ ನಾಲ್ಕನೆ ಅಧಿವೇಶನಕ್ಕೆ ನಾನು ಕಳುಹಿಸಿದ್ದ ಪತ್ರ ಪ್ರಕಟವೂ ಆಗಲಿಲ್ಲ, ಉತ್ತರವನ್ನೂ ಪಡೆದುಕೊಳ್ಳಲಿಲ್ಲ. ಇದರ ನಂತರ ಸಂಭವಿಸಿರುವ ಒಂದೇ ಘಟನೆಯೆಂದರೆ, ಗಾಬರಿಗೊಂಡಿರುವ ಸಾರ್ವಜನಿಕರನ್ನು ಸಮಾಧಾನ ಪಡಿಸುವ ಸಲುವಾಗಿ ಕೆಲವು ಸುಳ್ಳು ಸುದ್ದಿಗಳನ್ನು ಹಬ್ಬಿಸಿರುವುದು. ಈ ಸುಳ್ಳು ಸುದ್ದಿಗಳೆಲ್ಲವೂ ಒಂದೇ ಬಗೆಯದಾಗಿದ್ದು ಅವು ಸಹಜವಾಗಿ ಒಂದೇ ಮೂಲದಿಂದ ಹೊರಟಿದ್ದು, ಕ್ಯಾನ್ಸರ್ ವಾರ್ಡ್ ಮತ್ತು ನನ್ನ ಒಂದು ಕಥಾಸಂಕಲನ ಮುದ್ರಣಗೊಳ್ಳುತ್ತಿದೆ ಎಂದು ಪ್ರಚಾರ ಮಾಡುತ್ತಿದೆ. ನಿಮಗೆಲ್ಲ ತಿಳಿದಂತೆ ಇದು ಸತ್ಯಕ್ಕೆ ದೂರವಾದ್ದು.

ಜೂನ್ 12, 1967 ರಂದು ನನ್ನೊಡನೆ ನಡೆಸಿದ ಒಂದು ಸಂಭಾಷಣೆಯಲ್ಲಿ ಸೋವಿಯತ್ ದೇಶದ ಬರಹಗಾರರ ಒಕ್ಕೂಟ ಮಂಡಲಿಯ ಕಾರ್ಯದರ್ಶಿಗಳಲ್ಲಿ ಕೆಲವರು—ಜಿ. ಮೊರ್ಕೋವ್, ಕೆ. ವರೋನ್‌ಕೋವ್, ಎಸ್. ಸಾರ್ಥಕೋವ್ ಮತ್ತು ಎಲ್. ಸೊಬೊಲೆವ್—ಇವರುಗಳು ನನ್ನ ಬಗ್ಗೆ ಮತ್ತು ನನ್ನ ಸೈನಿಕ ಸೇವೆಯ ಬಗ್ಗೆ ಮಾಡಲಾಗುತ್ತಿರುವ ಅಪಪ್ರಚಾರವನ್ನು ಸಾರ್ವಜನಿಕರಿಗಾಗಿ ನಿರಾಕರಿಸುವುದು ಕರ್ತವ್ಯ ಎಂದು ಮಂಡಲಿ ಬಗೆದಿದೆ ಎಂದು ಘೋಷಿಸಿದರು. ಅದನ್ನು ನಿರಾಕರಿಸುವುದಿರಲಿ, ನನ್ನ ಅವಹೇಳನ ಮುಂದುವರಿಯುತ್ತಲೇ ಇರುವುದನ್ನು ನಾನು ಕಾಣುತ್ತಿದ್ದೇನೆ; ಸೂಚನಾ ಸಭೆಗಳಲ್ಲಿ, ಕಾರ್ಯಕರ್ತರ ಸಭೆಗಳಲ್ಲಿ ಮತ್ತು ಸಂಕಿರಣಗಳಲ್ಲಿ ಅದ್ಭುತ ರೀತಿಯಲ್ಲಿ ಅಸಂಬದ್ಧತೆಯ ಒಂದು ಹೊಸ ಕಂತೆಯನ್ನೇ ನನ್ನ ವಿರುದ್ಧವಾಗಿ ಹೊರಡಿಸಲಾಗುತ್ತಿದೆ—ಉದಾಹರಣೆಗೆ, ನಾನು ಅರೇಬಿಯಾಕ್ಕೋ ಇಂಗ್ಲೆಂಡಿಗೋ ಓಡಿ ಹೋಗಿದ್ದೇನೆ ಎನ್ನುವುದು. (ಹೀಗೆ ಅಪಪ್ರಚಾರ ಮಾಡುತ್ತಿರುವವರಿಗೆ ನಾನು ನೀಡುವ ಒಂದೇ ಭರವಸೆ ಎಂದರೆ ಹೀಗೆ ತಲೆ ತಪ್ಪಿಸಿಕೊಂಡು ಓಡಿ ಹೋಗುವವರು ಅವರಾಗಬಹುದೇ ಹೊರತು ನಾನೆಂದೂ ಆಗಲಾರೆ ಎನ್ನುವುದು.) ದೇಶದಲ್ಲಿನ ಪ್ರಮುಖ ವ್ಯಕ್ತಿಗಳೀಗ ನಾನು ಕ್ಯಾಂಪಿನಲ್ಲಿ ಸಾಯದೆ ಬಿಡುಗಡೆಯನ್ನೇಕೆ ಹೊಂದಿದೆ ಎಂಬುದಾಗಿ ಪಶ್ಚಾತ್ತಾಪ ಪಡುತ್ತಿದ್ದಾರೆ. (ಪ್ರಾಸಂಗಿಕವಾಗಿ ಹೇಳುವುದಾದರೆ ಇರಾನ್ ಡೆನಿಸೊವಿಚ್‌ನ ನಂತರವೂ ಇದೇ ಬಗೆಯ ಪಶ್ಚಾತಾಪವನ್ನು ಧ್ವನಿಸಲಾಗಿತ್ತು. ಈ ಪುಸ್ತಕವನ್ನು ಈಗ ಸಾರ್ವಜನಿಕ ಗ್ರಂಥಾಲಯಗಳಿಂದ ರಹಸ್ಯವಾಗಿ ತೆಗೆದು ಹಾಕಲಾಗುತ್ತಿದೆ).

ಮಂಡಲಿಯ ಇದೇ ಕಾರ್ಯದರ್ಶಿಗಳು ನನ್ನ ಇತ್ತೀಚಿನ ಕಾದಂಬರಿ ಕ್ಯಾನ್ಸರ್ ವಾರ್ಡ್‌ನ ಪ್ರಕಟನೆಗೆ ಒಪ್ಪಿಗೆ ನೀಡುವ "ಪ್ರಶ್ನೆಯನ್ನು ಪರಿಶೀಲಿಸುವುದಾಗಿ" ಭರವಸೆ ನೀಡಿದ್ದರು. ಆದರೆ ಮೂರು ತಿಂಗಳ ಅವಧಿಯಲ್ಲಿ—ಅಂದರೆ ವರ್ಷದ ಕಾಲು ಭಾಗದಲ್ಲಿ—ಈ ದಿಸೆಯಲ್ಲಿ ಯಾವ ಪ್ರಗತಿಯೂ ಇಲ್ಲ. ಈ ಮೂರು ತಿಂಗಳಲ್ಲಿ ಮಂಡಲಿಯ ನಲವತ್ತೈದು ಕಾರ್ಯದರ್ಶಿಗಳಿಗೆ ಕಾದಂಬರಿಯ ಮೌಲ್ಯಮಾಪನ ಮಾಡಲು ಸಾಧ್ಯವಾಗಿಲ್ಲ. ಅದು ಪ್ರಕಟವಾಗಬೇಕೇ ಎಂಬ ಬಗ್ಗೆ ಶಿಫಾರಸು ಮಾಡಲೂ ಅವರು ಅಸಮರ್ಥರಾಗಿದ್ದಾರೆ. ಕಾದಂಬರಿ ಇಂತಹ ವಿಚಿತ್ರ ರೀತಿಯ ಸಂದಿಗ್ಧ ಸ್ಥಿತಿಯಲ್ಲಿದೆ—ನೇರವಾದ ಯಾವ ನಿಷೇದವೂ ಇಲ್ಲ, ನೇರ ಅನುಮತಿಯೂ ಇಲ್ಲ—ಈ ಕಾದಂಬರಿಯನ್ನು ನೊವಿಮಿರ್ ಪತ್ರಿಕೆ 1966ರಲ್ಲಿರ ಬೇಸಿಗೆಯಿಂದ ಒಂದು ವರ್ಷದ ಕಾಲ ಪ್ರಕಟಿಸಲು ಇಚ್ಛಿಸಿದರೂ ಪ್ರಕಟಣೆಗೆ ಅನುಮತಿ ಇಲ್ಲ.

ಈ ಅಂತ್ಯರಹಿತ ವಿಳಂಬಗಳಿಂದಾಗಿ ನನ್ನ ಕಾದಂಬರಿ ಸ್ಥಬ್ಧಗೊಂಡು ಕ್ರಮೇಣ ಮರೆಯಾಗಿ ಬಿಡುತ್ತದೆ, ನಾನು ಜೀವಿತವಾಗಿರುವುದಿಲ್ಲ ಮತ್ತು ಈ ಕಾರಣಗಳಿಂದಾಗಿ ಸೋವಿಯತ್ ಸಾಹಿತ್ಯಕ್ಕೆ ಇದನ್ನು ಒಳಪಡಿಸಬೇಕೆ ಇಲ್ಲವೇ ಎಂಬ ಬಗ್ಗೆ ನಿರ್ಧರಿಸುವ ಅಗತ್ಯವಿಲ್ಲ ಎಂಬುದಾಗಿ ಸೆಕ್ರೆಟೇರಿಯೆಟ್ ನಂಬುತ್ತದೇನೋ. ಇಲ್ಲಿನ ಸ್ಥಿತಿಗತಿಗಳು ಹೀಗಿರುವಾಗ ನನ್ನ ಪುಸ್ತಕ ಎಲ್ಲೆಡೆಗಳಲ್ಲೂ ಆಸಕ್ತಿಯಿಂದ ಓದಿಕೊಳ್ಳುತ್ತಿವೆ. ಓದುಗರ ಅಪೇಕ್ಷೆಯ ಮೇರೆಗೆ, ಟೈಪ್ ಮಾಡಲ್ಪಟ್ಟ ಪುಸ್ತಕದ ನೂರಾರು ಪ್ರತಿಗಳು ಕಾಣಿಸಿಕೊಂಡಿವೆ. ಜೂನ್ 12ರ ಸಭೆಯಲ್ಲಿ ರಷ್ಯನ್ ಭಾಷೆಯಲ್ಲಿ ಅದು ಮೊದಲು ಕಾಣಿಸಿಕೊಳ್ಳಬೇಕೆಂಬ ಇಚ್ಛೆಯಿದ್ದರೆ ಅದನ್ನು ತ್ವರಿತವಾಗಿ ಪ್ರಕಟಿಸಬೇಕೆಂದೂ ಇಲ್ಲದಿದ್ದರೆ ಈ ಪರಿಸ್ಥಿತಿಯಲ್ಲಿ ಅದು ಪಾಶ್ಚಾತ್ಯ ದೇಶಗಳಲ್ಲಿ ಮುದ್ರಣಗೊಳ್ಳುವುದನ್ನು ತಪ್ಪಿಸಲಾಗುವುದಿಲ್ಲವೆಂದೂ ತಿಳಿಸಿದ್ದೆ.

ಅನೇಕ ತಿಂಗಳಿನ ಈ ಅರ್ಥರಹಿತ ವಿಳಂಬದಿಂದಾಗಿ ಪುಸ್ತಕ ಪಾಶ್ಚಾತ್ಯ ದೇಶದಲ್ಲಿ ಪ್ರಕಟವಾಗಿದ್ದರೆ ಅದು ಸೋವಿಯತ್ ಬರಹಗಾರರ ಒಕ್ಕೂಟ ಮಂಡಲಿ ಸೆಕ್ರೆಟೇರಿಯಟ್‌ನ ತಪ್ಪಿನಿಂದಾಗಿ ಆದದ್ದಾಗಿದೆ ಎಂದು ಹೇಳುವ ಕಾಲ ಬಂದಿದೆ. (ಅಥವಾ ಹಾಗಾಗಲೆಂಬುದೇ ಅವರ ಹಂಬಲವಾಗಿತ್ತೋ!)

ನನ್ನ ಕೃತಿ ಇನ್ನಾವ ವಿಳಂಬವೂ ಇಲ್ಲದೆ ಪ್ರಕಟಗೊಳ್ಳಲಿ ಎಂದು ನಾನು ಒತ್ತಾಯಿಸುತ್ತೇನೆ.

—ಅನು : ವೆಂಕಟಲಕ್ಷ್ಮಿ ಬಿ. ಎಸ್.

ಭಾಷೆ, ಶಿಕ್ಷಣ, ಸಮಾಜ, ಇತ್ಯಾದಿ

(ಒಂದು ಅಪೂರ್ಣ ಚಿಂತನೆ)

—ಕುಂ. ವೀರಭದ್ರಪ್ಪ

ಭಾಷೆಯೊಡನೆ ಜನಸಮುದಾಯದ ಸಂಬಂಧ ಎಂತದ್ದು ಎಂಬುದಕ್ಕೆ ವರ್ತಮಾನವೇ ಸಾಕ್ಷಿ. ಭಾಷೆಯ ಬಗ್ಗೆ ಇಷ್ಟು ಸಮಷ್ಟಿ ಪ್ರಜ್ಞೆ ವ್ಯಕ್ತಗೊಂಡಿದ್ದು ಇತಿಹಾಸದಲ್ಲಿ ಇದೇ ಮೊದಲನೆ ಸಲ ಅಂದರೂ ತಪ್ಪಿಲ್ಲ. ಒಂದೇ ಭಾಷೆಯ ಮೊಲೆಯುಂಡು ಬೆಳೆದವರ ನಡುವೆ ಉದ್ಭವಿಸಿರುವ ವಿರೋಧಾಭಾಸಗಳು ಕಾಲಾನುಕ್ರಮದಲ್ಲಿ ಬೆಳೆದುಕೊಂಡು ಬಂದಿವೆ. ಆರ್ಥಿಕ ಅಸಮಾನತೆಗಳು ಸಹ ಇದಕ್ಕೆ ಕಾರಣವಾಗಿರಬಹುದು. ಸಾಮಾಜಿಕ ಏರುಪೇರುಗಳ ನಡುವೆ ಕೊಚ್ಚಿ ಹೋಗುತ್ತಿರುವ ಸಂದರ್ಭದಲ್ಲಿ ನಿಶ್ಚಿತ ನೆಲೆಯನ್ನು ಕಂಡುಕೊಳ್ಳುವ ಕೆಲಸ ಇವತ್ತು ನಡೆದಿದೆ.

ಇದಕ್ಕೆ ಎಂಬತ್ತರ ದಶಕದ ಆದಿ ಯಾಕೆ ಬೇಕಾಯ್ತು ಎಂಬುದರ ಬಗ್ಗೆ ಚರ್ಚೆಯಾಗುವುದು ತೀರಾ ಅಗತ್ಯ. ಎಂಬತ್ತರೊಳಗಿನ ಸಂಘಟನೆಗಳು ಈ ನೆಲದ ಭಾಷೆಗಳ ಮೈಯೊಳಗೆ ಗೆದ್ದಲಂತೆ ಬೆಳೆಯಲು ಬೇರೊಂದು ಭಾಷೆಯನ್ನು ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಆಮದು ಮಾಡಿಕೊಂಡದ್ದು ನಿಜ. ಆಂಗ್ಲರ ಆಡಳಿತದ ಸಮಯದಲ್ಲಿ ಕೇವಲ ವ್ಯವಹಾರಿಕ ಮಟ್ಟದಲ್ಲಿದ್ದ ಕೆಂಪುಭಾಷೆ ಕೆಲವು ಮಂದಿಯನ್ನು ಮಾತ್ರ ಆಯ್ದುಕೊಂಡು ತನ್ನ ಸೊಬಗಿನ ಮೋಡಿಗೆ ಮರುಳಾಗಿಸಿಕೊಂಡು ನಾಯಕರನ್ನಾಗಿ ಮಾಡಿದ್ದು ವಾಸ್ತವ ಸಂಗತಿ. ಈ ನೆಲದ ಯಾವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಕೆಂಪುಭಾಷೆ ಅಂದರೆ ಇಂಗ್ಲೀಷು ಆಸ್ಪದ ಕೊಡಲಿಲ್ಲ. ತಾನು ಅರಗಿಸಿಕೊಂಡ ನೆಲದ ದುಃಖದುಮ್ಮಾನಗಳಿಗೆ ಅನುಗುಣವಾಗಿ ತನ್ನನ್ನು ಕಲಿತವರಲ್ಲಿ ಜ್ವಲಂತವಾಗಿ ಬೆಳಗಿತು. ಇಂಗ್ಲೀಷ್ ಕಲಿತ ಅವರಾರೂ ಹಳ್ಳಿಗಳ ಸಮಸ್ಯೆಗಳನ್ನು ರೈತರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಸ್ಪಂದಿಸಲಿಲ್ಲ. ಇಂಗ್ಲೀಷ್‌ನಿಂದ ಹಳ್ಳಿಗಳನ್ನು ಪ್ರೀತಿಸುವುದು ಇವತ್ತಿಗೂ ಸಾಧ್ಯವಾಗಿಲ್ಲ. ಜನರ ಭಾವನೆಗಳನ್ನು ಕೊಳ್ಳೆ ಹೊಡೆಯುತ್ತಿರುವ ಇಂಗ್ಲೀಷು ಕೈಗಾರಿಕೆಗಳನ್ನವಲಂಬಿಸಿ ಬೆಳೆಯುತ್ತಿರುವ ನಗರಗಳಲ್ಲಿ ದಟ್ಟವಾಗಿ ಕವಿಯುತ್ತಿದೆ ಎಂಬುದರ ಬಗ್ಗೆ ಚರ್ಚೆಯಾಗಲು ಇವತ್ತಿಗೂ ಸಾಧ್ಯವಾಗಿಲ್ಲ. ಅಲ್ಲಲ್ಲಿ ಇಂಗ್ಲೀಷು ಕಲಿತ ಕೆಲವರು ಇಂಗ್ಲೀಷ್‌ಗೆ ವಿರೋಧವಾಗಿ ಮಾತಾಡುವ ಸಂಭ್ರಮದಲ್ಲಿ ನೆಲಕ್ಕಂಟಿ ಬದುಕುವ ಜನತೆಯ ಮೂಲ ಆಶಯಗಳನ್ನು ಪ್ರೀತಿಯಿಂದ ನುಚ್ಚುನೂರು ಮಾಡತೊಡಗುವರು. ಆಕಾಶವೆತ್ತರದಲ್ಲಿ ವಿಹರಿಸುವ ಇಂಗ್ಲೀಷ್

ಕಲಿತ ಮಂದಿ ನೆಲದ ಬಗ್ಗೆ ಸಂವಾದಿಸುವ ಹಕ್ಕನ್ನು ಕಳೆದುಕೊಂಡಿರುತ್ತಾರೆ ಎಂಬುದನ್ನು ಮತ್ತೆ ಹೇಳಬೇಕಿಲ್ಲ. ಈ ದೇಶದ ಎಷ್ಟು ಜನ ವಿದ್ಯಾವಂತರು ಹಳ್ಳಿಗರ ಮೂಲ ಆಶಯಗಳಿಗೆ ಮಿಡಿಯುತ್ತಾರೆ ಎನ್ನುವುದಕ್ಕಿಂತ ಎಷ್ಟು ಲಕ್ಷ ಹಳ್ಳಿಗರು ಕೆಲವು ನೂರು ಮಂದಿ ಇಂಗ್ಲೀಷ್ ಬಲ್ಲವರನ್ನು ಅರ್ಥಮಾಡಿಕೊಳ್ಳುತ್ತಾರೆ ಎನ್ನುವುದು ಒಳ್ಳೆಯದು. ಕೆಲವೇ ಕೆಲವು ಇಂಗ್ಲೀಷ್ ಕಲಿತವರು ಲಕ್ಷಾಂತರ ಮಂದಿ ಹಳ್ಳಿಗರನ್ನು ಆಳುತ್ತಿದ್ದಾರೆ ಎನ್ನುವುದು ಇನ್ನೂ ಒಳ್ಳೆಯದು. ನಿಗೂಢವಾದ ಒಂಟಿ ತಿಳುವಳಿಕೆ ಆ ಭಾಷೆಗಿರುವುದೇ ಇದಕ್ಕೆ ಕಾರಣ. ಸಭ್ಯಸ್ತ ; ತಾಯಿ ನುಡಿ ಕಲಿತ ಹಳ್ಳಿ ಹುಡುಗ ಪಟ್ಟಣಕ್ಕೆ ಹೋಗಿ ನಾಕೈದು ವರ್ಷ ಕಾಲೇಜು ಕಲಿತು ಖಳನಾಯಕನಂತೆ ಊರಿಗೆ ಮರಳುತ್ತಾನೆ. ಮತ್ತು ಆ ಹಳ್ಳಿಗರಿಗಿಂತ ಬೇರೆ ತರಹ ಇರಲು ಬಯಸುತ್ತಾನೆ. ಅಥವಾ ತನ್ನ ನಡೆ ನುಡಿಗಳನ್ನು ಸಾಂಕ್ರಾಮಿಕವಾಗಿ ಹರಡುತ್ತಾನೆ. ಅಶಿಕ್ಷಿತ ಅದರಲ್ಲೂ ಹಿಂದುಳಿದ ವರ್ಗದಲ್ಲಿ ಒಬ್ಬೇ ಒಬ್ಬ ಸುಶಿಕ್ಷಿತ ಬಂದನೆಂದರೆ ಆಗುವುದೇ ಇಷ್ಟು. ಹಡೆದ ತಂದೆಯೇ ಕಲಿತು ಬಂದ ಮಗನಿಗೆ ಹೆದರುತ್ತಾನೆ. ಅಂದರೆ ತಾಯಿ ನುಡಿಯೂ ಎರವಲು ಭಾಷೆಯೂ ಮುಖಾಮುಖಿಯಾಗುತ್ತವೆ. ಮತ್ತು ಜಾತಿಗಿಂತಲೂ ಕ್ರೂರವಾದ ಇನ್ನೊಂದು ವರ್ಗವನ್ನು ಸೃಷ್ಟಿಸುತ್ತವೆ. ಬಣ್ಣದ ನೀರು ಚುಚ್ಚಿ ಹತ್ತು ರೂಪಾಯಿ ಕಕ್ಕಿಸುವ ವೈದ್ಯನೂ ಕನ್ನಡದಲ್ಲಿ ವಾದ ಮಂಡಿಸಿದರೆಲ್ಲಿ ತನ್ನ ದಡ್ಡತನ ಕಕ್ಷಿಗಾರನಿಗೆ ಗೊತ್ತಾಗಿ ಬಿಡುವುದೋ ಎಂಬ ಹಳಹಳಿಕೆಯಿಂದ ತಪ್ಪು ತಪ್ಪಾದ ಇಂಗ್ಲೀಷಿನಲ್ಲಿ ವಾದಿಸುವ ವಕೀಲನೂ ಈ ಶಿಕ್ಷಣ ವ್ಯವಸ್ಥೆಯ ಬಳುವಳಿಗಳು. ಪರಂಪರಾನುಗತವಾಗಿ ಬಂದಿರುವ ಜನಸಮುದಾಯದ ದಡ್ಡತನವನ್ನು ಕಾಪಾಡಿಕೊಂಡು ಬರುವುದು : ಆ ತಿಪ್ಪೆಯ ಮೇಲೆ ವೈಭವವಾಗಿ ಬದುಕುವುದು ತಮ್ಮ ಕರ್ತವ್ಯವೆಂಬಂತೆ ಸರಕಾರಿ ಸಂಬಳಕ್ಕೆ ಜೋತುಬಿದ್ದಿರುವ ಬಹುಪಾಲು ನೌಕರರು ಭಾವಿಸಿರುವಂತಿದೆ. ದಡ್ಡತನವನ್ನು ಲಾಭದಾಯಕವಾಗಿ ಬಳಸಿಕೊಳ್ಳುವಲ್ಲಿ ವಿಭಿನ್ನ ಇಲಾಖೆಯವರು ಪರಸ್ಪರ ಸಹಕರಿಸುತ್ತಾರೆಂಬುದು ಒಂದು ಕ್ರೂರ ಸತ್ಯ. ರೆವಿನ್ಯೂ ಇಲಾಖೆಯನ್ನು ಪೋಲೀಸ್ ಇಲಾಖೆ ತನ್ನ ಪ್ರೇಯಸಿ ಥರ ನೋಡಿಕೊಳ್ಳುವುದು ಈ ಅರ್ಥದಲ್ಲಿಯೇ. ಬ್ಯಾಂಕುಗಳಂತೂ ಉಳ್ಳವರ ಪಾಲಿಗೆ ನಶ್ಯೆ ಡಬ್ಬಿಗಳೇ ಸರಿ. ಈ ದಿಸೆಯಲ್ಲಿ ಬಹುಸಂಖ್ಯಾತ ದಂಡಿಮೆ ವರ್ಗ ಬದುಕಿನ ಗಾಣದಲ್ಲಿ ಅಸಹನೀಯವಾಗಿ ಬದುಕುಳಿದಿರುವುದಕ್ಕೆ ಶಿಕ್ಷಣ ವ್ಯವಸ್ಥೆ ಎಲ್ಲ ಅರ್ಥದಲ್ಲಿ ಪೂರಕವಾಗಿ ಕೆಲಸ ನಿರ್ವಹಿಸುತ್ತಿದೆ. ಪುಕ್ಕಲು ಮತ್ತು ಭ್ರಷ್ಟ ಹೃದಯಂಗಳನ್ನು ಸೃಷ್ಟಿಸುವುದೇ ಸದ್ಯದ ವಿಶ್ವವಿದ್ಯಾಲಯಗಳ ಗುರಿಯಾಗಿರುವಾಗ ತಾಯಿನುಡಿಯ ಗೂನು ಬೆನ್ನ ಮೇಲೆ ಸವಾರಿ ಮಾಡುವ ಎರವಲು ಬೊಜ್ಜು ಬಾಷೆಯ ಕ್ಷೇಮಸಮಾಚಾರವನ್ನೂ ವಿಚಾರಿಸಿಕೊಳ್ಳುವುದು ಅನಿವಾರ್ಯವೆಂಬಂತೆ ಗೋಣಲ್ಲಾಡಿಸುವ ಕೆಲವರು ಭ್ರಷ್ಟ ವ್ಯವಸ್ಥೆಯ ಏಜೆಂಟರಲ್ಲದೆ ಮತ್ತೇನೂ ಅಲ್ಲ. ಅಸಹನೀಯವಾದ ಟಿಪ್ಪಣಿಗಳಿಂದ ವೈಚಾರಿಕ ದಬ್ಬಾಳಿಕೆ ನಡೆಸುವ ಈ ಮಂದಿ ಆರು ಕೊಟ್ಟರೆ ಅತ್ತೆ ಕಡೆಗೂ ; ಮೂರು ಕೊಟ್ಟರೆ ಸೊಸೆ ಕಡೆಗೂ ವಾಲುವಂಥವರು.

ಇತ್ತೀಚೆಗಂತೂ ವಿಶ್ವವಿದ್ಯಾಲಯಗಳ ಹೃದಯಂಗಳು ನಿರ್ವಾತ ಪ್ರದೇಶವಾಗುತ್ತಿರುವ ಸಂದರ್ಭದಲ್ಲಿ ಯಾವ ಥರದ ಮಾತುಗಳಿಗೆ ಕೈ ಕಾಲು ಮೂಗುಗಳು ಇಲ್ಲವೇ ಇಲ್ಲ. ಆಮದು ಸಂಸ್ಕೃತಿಗೆ ನಲುಗಿರುವ ಬದುಕು ಜೀವಚ್ಛವವಾಗಿರುವಲ್ಲಿ ಎಲ್ಲ ಶಿಕ್ಷಣ ಸಂಸ್ಥೆಗಳು ಅಹರ್ನಿಶಿ ಶ್ರಮಿಸುತ್ತಿವೆ. ಹೊಟ್ಟೆಯೇ ಮುಖ್ಯ ಅಂಗವಾಗಿರುವಾಗ ತಲೆಯ ಪಾತ್ರ ತುಂಬ ಗೌಣ. ಹೋರಾಟರಹಿತ ಸಮಾಜ ಎಂದೂ ಚಲನಶೀಲವಾಗಲು ಸಾಧ್ಯವಿಲ್ಲ. ಚಲನ ರಹಿತ ಸಮಾಜದ ಮುಖಂಡರು ಹೊಟ್ಟೆಗೆ ಅನ್ನ ; ಮೈಗೆ ಬಟ್ಟೆ ಕೊಡುವಂಥ ಆದ್ರ ಭರವಸೆಗಳನ್ನು ನೀಡುವುದರ ಮೂಲಕ ಎಲ್ಲ ಲಗಾಮುಗಳನ್ನು ಹಸ್ತಗತ ಮಾಡುವುದನ್ನೂ ಸಹ ಭಾಷೆ ಮತ್ತು ಶಿಕ್ಷಣ ವ್ಯವಸ್ಥೆಯ ಹಿನ್ನೆಲೆಯಲ್ಲಿಯೇ ಯೋಚಿಸಬೇಕು. ನಿರಾಶದಾಯಕ ವಾತಾವರಣದಲ್ಲಿ ಸರ್ವಾಧಿಕಾರಿಗಳು ಹುಟ್ಟುವಂತೆ ಕ್ರಾಂತಿಕಾರಿಗಳೂ ಹುಟ್ಟುತ್ತಾರೆ. ಸರ್ವಾಧಿಕಾರಿಗಳ ಬಂಡವಾಳ ಜನತೆಯ ನಡುವೆ ನಿಷ್ಕ್ರಿಯವಾಗಿರುವ ಆರ್ಥಿಕ ಅಸಮಾನತೆ : ಕಂದಾಚಾರಗಳ ಪುನರ್‌ನಿರ್ಮಾಣವಾಗಿದ್ದರೆ ಕ್ರಾಂತಿಕಾರಗಳ ಬಂಡವಾಳ ; ಜನತೆಯ ಹೊಟ್ಟೆ ಮೆದುಳ ನಡುವೆ ಇರುವ ಸೇತುವೆಯ ಅಭದ್ರತೆ : ಕುಡಿತದ ಕೊನೆ ಬಿಂದು ಮುಟ್ಟುವ ಹಸಿವೆಗೆ ವೈಚಾರಿಕ ಸಾವಹನ ನೀಡುವುದು. ಇದಕ್ಕೆ ಪರಿಣಾಮಕಾರಿಯಾಗಿ ಸ್ಥಳೀಯ ಭಾಷೆಗಳ ಬಳಸಿಕೊಳ್ಳುವುದು ಎಷ್ಟು ಅಗತ್ಯವೆಂದರೆ ಸಿಟ್ಟು ; ಹೊಟ್ಟೆಕಿಚ್ಚು ; ಕಾಮದಂಥ ಅಗತ್ಯ ಸಂವೇದನೆಗಳು ಭಾಷೆಯ ತಳಹದಿಯಾದ ಮೌನದ ಸಹಾಯದಿಂದಲೇ ಅರ್ಥವಾಗಬಲ್ಲವು. ಮನುಷ್ಯತ್ವದೊಳಗಿನ ಪ್ರಾಣಿತನದ ಅರಿವು ಹೋರಾಟದ ಸಂದರ್ಭದಲ್ಲಿ ಅಗತ್ಯಕ್ಕೂ ಮೀರಿ ಸ್ಫೋಟಿಸುವುದರ ವಿರುದ್ಧ ಹೊಸ ತಳಿಯ ವೈಚಾರಿಕ ಶಕ್ತಿಯನ್ನು ಈ ನೆಲದ ಹವಾಮಾನಕ್ಕನುಗುಣವಾಗಿ ಸೃಷ್ಟಿಸುವುದು ಶಿಕ್ಷಣ ವ್ಯವಸ್ಥೆಯ ಗುರಿಯಾಗಿಲ್ಲ. ಬಾಷೆಯ ಅಗತ್ಯಗಳನ್ನು ಪೂರೈಸುವುದೆಂದರೆ ಹೋರಾಟದ ಮೊದಲ ಹಂತವಾಗಿ ಜನತೆಯನ್ನು ಸಜ್ಜುಗೊಳಿಸುವುದು. ಜನಸಮುದಾಯದ ಆಶಯಗಳಿಗನುಗುಣವಾಗಿ ಸ್ಪಂದಿಸುವತ್ತ ಅನಧಿಕೃತ ಶಿಕ್ಷಣವನ್ನು ಜನಪ್ರಿಯವಾಹಕಗಳ ಮೂಲಕ ಹರಿಬಿಡುವುದು. ಹಿಂಸೆಯ ನಡುವೆಯೂ ಮುಗುಳ್ನಗುತ್ತ ವ್ಯವಸ್ಥೆಯ ಬುಡಕ್ಕೆ ಸಿಡಿಮದ್ದಿಡುವುದು ; ಇವೆಲ್ಲ ಎಡಬಿಡಂಗಿ ಕ್ರಾಂತಿಕಾರಿಗಳಲ್ಲದವರಿಗೆ ಕಷ್ಟ ಸಾಧ್ಯವೇನಲ್ಲ. ಈ ನೆಲಕ್ಕೆ ಅನ್ವಯಿಸದ ಗೊಡ್ಡು ಸಿದ್ಧಾಂತಕ್ಕೆ ಸಿಕ್ಕಿಬಿದ್ದ ಕ್ರಾಂತಿಕಾರಿಗಳೂ ಮತ್ತು ವ್ಯವಸ್ಥೆಯ ಪೋಷಕರೂ ಇಬ್ಬರೂ ಕೂಡಿ ಪ್ರಜಾ ಸಮೂಹದ ಭಾವನೆಗಳನ್ನೂ ಯಶಸ್ವಿಯಾಗಿ ಕೊಳ್ಳೆ ಹೊಡೆಯುತ್ತಾರೆ ಎಂಬುದು ನಿರ್ವಿವಾದದ ಸಂಗತಿ. ಆದ್ದರಿಂದ ಬದಲಾವಣೆ ತರುವವರ ದೃಷ್ಟಿಯಲ್ಲಿ ವ್ಯವಸ್ಥೆಯ ಪೋಷಕ ಘಟಕ ಎಷ್ಟು ಡೇಂಜರ್ರೋ ಅಷ್ಟೇ ಡೇಂಜರ್ರು ನಕಲೀ ಕ್ರಾಂತಿಕಾರಿಗಳು. ಎರವಲು ಪಡೆದ ಸಿದ್ಧಾಂತಗಳಿಂದ ರೂಪಗೊಂಡ ಈ ಮಂದಿ ಈ ನೆಲವನ್ನು ಇಡಿಯಾಗಿ ಅರಗಿಸಿಕೊಳ್ಳಲಿಲ್ಲ. ಕ್ರಾಂತಿಕಾರಿ ಅಥವಾ ವಾದಿ ಎಂಬ ಶಬ್ದದ ವಿಶೇಷಣವೇ ತುಂಬ ಭಾವುಕವಾಗಿದೆ ಮತ್ತು ಸವಕಲಾಗಿದೆ. ಈ ವಿಶೇಷಣದ ಮಂದಿ ಬೇರೊಂದು

ಅರ್ಥದಲ್ಲಿ ಮೋಸಗಾರರು ಎಂಬುದಾಗಿ ಸಾಮಾನ್ಯ ಜನ ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಅರ್ಥಮಾಡಿಕೊಂಡಿರುವುದರಿಂದ ಬದಲಾವಣೆ ಸಾಧ್ಯವಿಲ್ಲ. ಮುಖವಾಗಿ ಬಂಡವಾಳಶಾಹಿಗಳೂ ; ನೌಕರಶಾಹಿಗಳೂ ಮತ್ತು ಕ್ರಾಂತಿಕಾರಿಗಳೂ ಒಂದೇ ನಮೂನೆಯ ಭಾಷೆಯ ಗರಡಿಯಲ್ಲಿ ಮುಖ ಮೂಗು ಪಡೆದವರೇ ಆಗಿರುತ್ತಾರೆ. ಕೆಂಪು ಭಾಷೆಯ ಜಾಯಮಾನ ಮುಖ್ಯವಾಗಿ ಶೋಷಣೆಯ ಪಟ್ಟುಗಳನ್ನು ಕಲಿಸುವುದೇ ಆಗಿದೆ. ಆರ್ಥಿಕವಾಗಿ ಸಾಮಾಜಿಕವಾಗಿ ನಡೆಯುವ ಶೋಷಣೆಗಿಂತ ಬೌದ್ಧಿಕವಾಗಿ ನಡೆಯುವ ಶೋಷಣೆ ತುಂಬಾ ಅಪಾಯಕಾರಿ. ಬೇರೊಬ್ಬರ ಆಲೋಚನೆಗಳ ಜೀತವನ್ನೊಪ್ಪಿಕೊಂಡವರು ಇಡೀ ಶೋಷಿತ ವರ್ಗದ ಕುತ್ತಿಗೆ ಕೊಯ್ಯುವಷ್ಟು ಮಟ್ಟಿಗೆ ಕ್ರೂರಿಗಳಾಗಿರುತ್ತಾರೆ. ತಮ್ಮ ರೂಪ ವೈಪರೀತ್ಯಗಳಿಂದ ಈಗಾಗಲೇ ಭಯಾನಕವಾಗಿ ಕಾಣಿಸತೊಡಗಿದ್ದಾರೆ. ಭಾಷೆಯ ಪಟ್ಟುಗಳ ಅನುದಾನವಾದ ರೂಪ ವೈಪರೀತ್ಯಗಳೂ ಸಹ ಒಂದು ವ್ಯವಸ್ಥೆಯ ಗುಲಾಮಿ ತನದ ಸಂಕೇತಗಳು, ಜನರು ನಮಗೆ ಅರ್ಥವಾಗಬೇಕಾದರೆ ಮುಖ್ಯವಾಗಿ ನಾವು ಜನರಿಗೆ ಅರ್ಥವಾಗಬೇಕು. ನಮ್ಮ ಅರ್ಥವಾಗದ ತಿಂಡಿ ತಿನಿಸು ತೀರ್ಥಗಳು ಉಡುಗೆ ತೊಡಂಗೆಗಳು ಆಲೋಚನೆಯ ಹಂದರದಲ್ಲಿ ರೂಪುಗೊಳ್ಳಬೇಕು. ಹೋಟೆಲಿನಲ್ಲಿ ನಾವು ಬಯಸುವ ಬೋಂಡಾ ಎಂಬ ಶಬ್ಧ ವಿಚಿತ್ರವೂ ಮತ್ತು ಒಂದು ನಮೂನೆಯ ಮಂದಿಯನ್ನು ಕಣ್ಣಿಗೆ ಕಟ್ಟಿಸುವಂಥದ್ದೂ ಆಗಿದೆ. ಅದನ್ನು ತಿನ್ನುವಾಗ ಯಾರೋ ನೆನಪಾಗಿಬಿಡುವ ಸಂಭವ ಹೆಚ್ಚು. ಅದೇ ರೀತಿ ಉಡುಪಿ ಹೋಟಲ್ಲಿನಲ್ಲಿ ಮಾಡುವ ವೆಜಿಟೆಬಲ್ ಪಲಾವ್ ಒಂದು ತಿಂಡಿಯ ಹೆಸರೂ ಕೂಡ ಕ್ರಿಯೆ ಮತ್ತು ವಿಶೇಷಣಗಳ ಗೊಂದಲ ಸೃಷ್ಟಿಸುವಂಥದ್ದು. ಉಡುಪಿ ಎಂಬ ಶಬ್ಧ ಮೂಲತಃ ಸಸ್ಯಹಾರಿ ನಾಮವಾಚಕ. ಸುಮಾರು ಒಂದೂವರೆ ದಶಕದ ಹಿಂದೆ ಚಾಲ್ತಿಯಲ್ಲಿದ್ದ ಕೋಳಿ ಪಲಾವ್ ಎಂಬ ತಿಂಡಿಯ ಹೆಸರನ್ನು ಉಡುಪೀಕರಿಸುವ ಹಿನ್ನೆಲೆಯಲ್ಲಿ ಹುದುಗಿರುವ ಮಾನಸಿಕ ಕ್ರೌರ್ಯ ಹಿಂಸೆಯನ್ನು ಒಪ್ಪಿಕೊಳ್ಳುವಂಥದ್ದು. ಕೋಳಿಯನ್ನು ತಿನ್ನಲು ಇಲ್ಲದ ಧೈರ್ಯವನ್ನು ಅಲ್ಲಗಳೆಯಲಾಗದಿದ್ದರೂ ಸಹ ಜನ್ಮಾಂತರದ ವಾಸನೆಗೆ ಮೂಲತಃ ಉಡುಪಿ ಎಂಬ ಶಬ್ದ ಬದ್ಧವಾಗಿದೆ ಎಂಬುದಂತೂ ಸತ್ಯ. ಪಲಾವ್ ಮಾಡುವಾಗ ಉಡುಪೀ ಮಂದಿ ಕಾಯಿಪಲ್ಯೆಯನ್ನು ಕೋಳಿಯ ಅಂಗೋಪಾಂಗದ ರೀತಿಯಲ್ಲಿ ಬಳಸುವುದು ಗರಂ ಮಸಾಲೆ ಹಾಕುವುದರ ಮೂಲಕ ನಾನ್ ವೆಜ್ ಶಾಂತಿಯನ್ನು ಅನುಭವಿಸುವುದು ಮತ್ತು ನಾನ್ ವೆಜ್ ಶಾಂತಿಯನ್ನು ಹಣಕ್ಕೆ ಇಂತಿಷ್ಟು ಅಂತ ಮಾರುವುದು ಇದೆಲ್ಲ ಒಂದು ಸುಂದರ ಸತ್ಯ. ಇದನ್ನೆಲ್ಲ ಯಾಕೆ ಹೇಳಬೇಕಾಯ್ತು ಅಂದರೆ ದೈನಂದಿನ ಬದುಕಿನಲ್ಲಿ ನಾವು ಬಳಸುವ ಕೃತಕ ಭಾಷೆ ಕಠೋರ ವಾಸ್ತವದ ಸಂತ್ತ ಸುಳ್ಳಿನ ಲೇಪನವನ್ನು ಹಚ್ಚುತ್ತದೆ ಎಂಬುದಕ್ಕಾಗಿ ನಾವು ಬಾಷೆಯನ್ನು ಎಷ್ಟು ನಾಟಕೀಯವಾಗಿ ; ಕೃತಕವಾಗಿ ; ಪೆದ್ದು ಪೆದ್ದಾಗಿ ಬಳಸುತ್ತೇವೆಯೋ ಅಷ್ಟು ಜನತೆಯಿಂದ ದೂರ ಹೋಗುತ್ತಿದ್ದೇವೆ ಎಂದೇ ಅರ್ಥ. ಅಂದರೆ ಜನತೆಯಿಂದ ದೂರವಿದ್ದ ಜನತೆಯ ಭಾವನೆಗಳು ಕ್ರೂರವಾಗಿ ನಿಯಂತ್ರಿಸುತ್ತೇವೆ ಸಹ. ●

ತಿಂಗಳಕಾವ್ಯ

ಗಾಳಿ ಬೆಳಕಿನ ಪಯಣ

ನನ್ನ
ನಿನ್ನ ಅಭಿಮಂತವೇನು
—ಎಂದು ಕೇಳುವ ನಮ್ಮ ಕೂದಲೆಳೆ ರೋದನ
ಆಗ ಹುಟ್ಟಿರಲಿಲ್ಲ :
ಅದು ಸತ್ತಿತ್ತೆ ? ಅಥವ
ಕಾಲ್ಕಸ ಮಾಡಿ ನೂಕಿದ್ದೆವೆ ?

ಇಲ್ಲ—ಇದ್ದು ಕಾಣಲು ಕದ್ದ ಅಡ್ಡಿಯೇನು ?
ದೂರ ಬೆಟ್ಟವಷ್ಟೇ ಅಲ್ಲ
ತುಳಿದ ಹಸಿವುಣ್ಣು ಸಹ ಹುಸಿಯಾಗಿ
ನುಣ್ಣಗೆ ಜಾರಿ
ಪರಸ್ಪರ
ವಸ್ತ್ರಾಪಹರಣದ ದಾರಿ ಹಸನಾಯಿತು.

ಈಗ ಮತ್ತೆ ಈ ಪೆತ್ತೆಯಲಿ ಎಲ್ಲ ಕಾಣುವ ಹೊತ್ತು
ಇಣುಕಿ ಚಾಚಿರುವಾಗ—ವರರುಚಿ ಸತ್ತು
ನರನಾಟಕದ ನಡುವಂಕ ರಂಗೇರಿತು.
ಅಷ್ಟು ಹತ್ತಿರ ಕಂಡ ಪರಿ
ಪರಿಚಯದ ನಿಜರೂಪ ಹಾರಿ
ಹತ್ತೆಂಟೆಡೆಗೆ ಮುಳುವಾಯಿತು.

ಆ ಅಗೋ ಬಾಗಿನವೆ ?
ಹಸಿದ ಕಂಗಳ ಚೆಲುವು ಚೆಲ್ಲುವರಿಯುತ್ತಿದೆ :
ಹೊಸ ಕಾತುರದಿ ಎಲ್ಲ ವಿಪರೀತಗಳ ಕಂಡು
ಲೆಕ್ಕ ಹಾಕುವ ಬಯಲು ಕಾಣಬೇಕು.

ಹಳೆಯ ಒತ್ತಾಸೆಗಳ ತಳ ಕೆದಕಿ ಶಂಕಿಸುವ
ಬೆಂಕಿ-ಬೆಳಕಿನ ಚಿಂತೆ ಯಾರ ಪಾಲು ?

ತುಳಿದ ಕಾಲ್ಕಸದಲ್ಲಿ ಎಳವೊಳಕೆ ಮೈದೋರಿ
ಇಂಥ ರಾಕ್ಷಸ ಕಾಡು ಬೇರ್ಪಡಿಸಿತು.

ನೇರ ನಿಟ್ಟಿಸು ನನ್ನ :
(ರೆಪ್ಪೆಯೊಳಗೂ ಈ ಅಸ್ಪಷ್ಟವೇ ಸ್ಪಷ್ಟ.)
ಹೇಳು, ಕಾಡು ಕರಗಲುಬಹುದೆ ?
ಹೊಸ ಮೋಡು ತತ್ತರಿಸಿ ಬದಿಯ ಹೆಮ್ಮರ ಹಾಡಿ
ಕರೆದು,
ಗಾಳಿ ಬೆಳಕಿನ ಪಯಣ ಬಂತೆ ಈಗ ? ಯಾಕೆ ?
ಆಗ—
ಇದ್ದ ಹೊಳೆ ಮಳಲು ದಡ ತೆಳು ನೆಳಲು
ಕಣ್ಣ ಕಾಂತಿಯ ಹೊನಲು ಸುಳ್ಳಲ್ಲವಲ್ಲ ?

—ಕಾಳೇಗೌಡ ನಾಗವಾರ

ಮುಸ್ಸಂಜೆ ಮುಡುಪಿನ ಸ್ವಗತ ಲಹರಿ

ಹೆತ್ತವಳ ಕಥೆಯೊಂದೆ ಉತ್ತವನ ಕಥೆಯೊಂದೆ
ಈ ನಾಡ ಒಳಗೆಲ್ಲ ಒಂದೇ ಥರ
ಅಕ್ಕರದ ಗೌರವ ಬದುಕೆಲ್ಲ ಒಣಮರ
ನಮ್ಮಲ್ಲಿ ಇದಕಿಲ್ಲ ಎಂದೂ ಬರ

ಬರಿಗೈಯ ಬಾಯಿಗೆ ಕೊರಳೆಲ್ಲ ಸಿಡಿಮಿಡಿ
ನಗುನಗುತ ಮಕ್ಕಳ ತೆನೆಕಟ್ಟಿದೆ
ಮನಂಪಾಶ ಸರಿಯಲು ಮಾಂಗಲ್ಯ ಮರಗಟ್ಟಿ
ಒಡಲಾಯಿತಾಗಲೆ ಹಿಡಿಬೂದಿ

ದುಃಖದ ಮಡಿಲಲ್ಲಿ ರವಳುತ್ತ ಹಾಡುತ್ತ

ನಗೆಹೂ ನಡೆಮುಡಿಯಾದವಳೆ
ಕೈ ಬಿಡದ ಮಕ್ಕಳು ಕೈ ಕೊಡವಿ ನಡೆದಾಗ
ಕರಿಬಟ್ಟೆ ತೌರೀಗೆ ನಡೆದವಳೆ

ಊಟ್ಟುಡಿಗೆ ಮುದ್ದಾಡಿ ಸುತ್ತಿರುಗಿ ಅತ್ತರು
ನೀ ಇತ್ತ ಪ್ರೀತಿಗೆ ಸರಿಸಾಟಿಯೆಂ ?
ಮನೆ ಮಠ ಬಂಗಾರ ಹಂಗೀಗೆ ಬೀಳದೆ
ಪಾವನಗೊಳಿಸಿದೆ ಅಗ್ನಿಯನಂ

ಇದ್ದಾಗ ಎಂದೂ ಮನೆದನಿಯಾಗದೆ
ಸತ್ತಾಗ ಮಾತ್ರ ಒಳದನಿಯಾದೆ
ಉಂಡವರು ಉಟ್ಟವರು ಕಸಬುಟ್ಟಿದಾಸರು
ಹೆಗಲಲ್ಲಿ ಎತ್ತಲು ಹೆಳವಾದರು

ಕಂಜಾಕ್ಷಿಯಲ್ಲವೆ ಅರಿವಿನ ಗುರುವಿನ
ಒಳನಾಡಿಗೆಲ್ಲಾ ಸಾಕ್ಷಿ ಬೆಲೆ
ನೀಕೊಟ್ಟ ಪ್ರೀತಿಯೆಂ ಬದುಕಿಗೆ ಬಾಗಿನ
ಮನೆಮುಂದಿಗೆಲ್ಲಾ ಮಂತ್ರಾಕ್ಷತೆ

ದಿಬ್ಬಣ ಕನಸಲ್ಲಿ ಮುಸ್ಸಂಜೆ ಮುಡಿಪಾಗಿ
ಸಾವಿನ ಅಚ್ಚರಿ ಹೆಚ್ಚಿಸಿದೆ
ಕಲಬೆರಕಿಲ್ಲದ ಸ್ವಾರ್ಥಕೆ ಜಗ್ಗದ
ಸಾವೊಂದೆ ಕಟುಸತ್ಯ ಲೋಕದಲಿ

—ಚಿ. ಶ್ರೀನಿವಾಸರಾಜು

ರಕ್ತ

ನನ್ನ ರಕ್ತ ಸಿಕ್ತ ಹಸ್ತಗಳ ಕಡೆಗೆ
ನಾನೊಮ್ಮೆ ನೋಡಿಕೊಂಡೆ ;
ಹೌದು, ಈ ಹಸ್ತಗಳು ನನ್ನವೇ
ಆದರೆ ಅವಕ್ಕಂಟಿಕೊಂಡ ರಕ್ತ
ನನ್ನದಲ್ಲ
ಆ ರಕ್ತ ನನ್ನದು ಹೇಗಾದೀತು ?
ನನ್ನ ಕೈಕಾಲುಗಳ ಬಣ್ಣ ನೀಲಿ ;
ಶರೀರ ನಿಸ್ತೇಜ ; ಕಣ್ಣುಗಳು ಹಸಿರು ;
ಹೀಗಿರುವಾಗ ಈ ರಕ್ತ ಹೇಗೆ ಇಷ್ಟೊಂದು ಕೆಂಪು ?
ನಿಜವಾಗಿಯೂ ನನ್ನದಲ್ಲ ಈ ರಕ್ತದ ಕಲೆ ;
ನಿಸ್ಸಂದೇಹವಾಗಿ ಇದು ಬೇರೆ ಯಾರದೋ.

ಇನ್ಯಾರದೋ ರಕ್ತ ನನ್ನ ಹಸ್ತದ ಮೇಲೆ
ಮೆತ್ತಿಕೊಂಡಿತು ಹೇಗೆ ;
ನನಗಿಲ್ಲ ಯಾರನ್ನಾದರೂ ಕೊಲ್ಲುವ ಅಗತ್ಯ ;
ಯಾರನ್ನಾದರೂ ಕೊಂದು ಪಡೆಯುವಂಥಾದ್ದು,
ಅಥವಾ ಕಿತ್ತುಕೊಳ್ಳುವಂಥಾದ್ದು ಏನಿದೆ ?
ಇಷ್ಟರ ಮೇಲೆ ಯಾರನ್ನಾದರೂ ಕೊಲೆ ಮಾಡುವಂಥ
ಶಕ್ತಿ—ಸಾಮರ್ಥ್ಯವೂ ನನ್ನಲ್ಲಿ ಎಲ್ಲಿದೆ ?

ಇನ್ನು ನಾನು ಯಾರನ್ನಾದರೂ ಕೊಂದೆನೆಂಬುದಕ್ಕೆ
ಎಲ್ಲಿದೆ ಪ್ರಮಾಣ ? ಕೋರ್ಟು, ಕಛೇರಿ, ಕಾನೂನು,
ಪೋಲೀಸು
ನನ್ನ ಬೆನ್ನಟ್ಟಿವೆಯೆ ?
ನಿರ್ದೋಷಿಯನ್ನೇ ನೇಣಿಗೆತ್ತುವ ನಮ್ಮ ಈ
ಪರಿಸರದಲ್ಲಿ,
ನಿಜವಾದ ದೋಷಿಯನ್ನವರು ಸುಮ್ಮನೆಯೆ
ಬಿಡುವ ಜನವೆ ?

ಕೊಂದವನು ನಾನಲ್ಲ ;
ಬೇರೆಯುವರೂ ಅಲ್ಲ ;
ಆದರೂ ನನ್ನ ಹಸ್ತಗಳ ಮೇಲೆ
ಹೇಗೆ ಬಂತಪ್ಪ ಈ ರಕ್ತದ ಕಲೆ ?
ಇದೇ ಇಲ್ಲಿ ನಿಜವಾದ ಆಶ್ಚರ್ಯ.
ನಾನು ಮತ್ತೂ ಒಂದು ಸಲ ಕಣ್ಣಿಟ್ಟು ನೋಡಿದೆ
ನನ್ನ ರಕ್ತ ಸಿಕ್ತ ಹಸ್ತಗಳ ಕಡೆಗೆ
ಅಂಟಿಕೊಂಡ ರಕ್ತವನ್ನೆ ಕುರಿತು ಪ್ರಶ್ನಿಸಿದೆ :
'ಯಾಕೆ ? ಓ ಯಾಕೆ ಹೀಗೆ ನನ್ನ ಹಸ್ತಗಳಿ—
ಗಂಟಿಕೊಂಡಿದ್ದೀಯೆ,
ಯಾರ ಖೂನಿಯ ರಕ್ತ ನೀನು ; ಹೇಳು
ಮಾತಾಡು'

ನನ್ನ ಕೈಗಂಟಿಕೊಂಡಿದ್ದ ರಕ್ತ ನನ್ನ ಕಡೆ ದಿಟ್ಟಿಸಿ
ಗಹಗಹಿಸಿ ನಕ್ಕಿತು.
ಹೇಳಿತು ನನಗೆ :
ಯಾಕೆ ? ನಿನಗಿನ್ನೂ ನನ್ನ ಗುರುತಾಗಲಿಲ್ಲವೆ ?
ನಾನು ಬರೀ ನಿನ್ನ ರಕ್ತ ಅಲ್ಲ ;
ನಿನ್ನ ಜೀವನದ ರಕ್ತ, ನಾನು.

ಪ್ರತಿಯೊಬ್ಬನೂ ಈ ಜೀವನದ ಶಿಲುಬೆಗೇರಿದ್ದಾನೆ,
ರಕ್ತಸಿಕ್ತವಾಗಿರುವ ತನ್ನ ಕೈಗಳಿಂದಲೇ
ಪ್ರತಿಯೊಬ್ಬನೂ ಈ ಶಿಲುಬೆಯನ್ನು ಹೊತ್ತು
ಸಾಗುತ್ತಾನೆ,
ಹೀಗೆ ಸಾಗುತ್ತಲೇ ಬದುಕುತ್ತಾನೆ.

ಕವಿ : ಕ್ರಿಷಿನ್ ರಾಹಿ
ಭಾಷೆ : ಸಿಂಧೀ
ಕನ್ನಡಕ್ಕೆ : ಜಿ. ಎಸ್. ಶಿವರುದ್ರಪ್ಪ

ಪ್ರಶ್ನೆ? (ಹಲವು ಪದ್ಯಗಳನ್ನು ಕಾಡುವ ಒಂದೇ ಪ್ರಶ್ನೆ.)

ಬಹುದಿನಗಳ ನಂತರ........

ಒಂದು ಪದ್ಯವನ್ನಾದರೂಬರೆಯೋಣವೆಂದರೆ
ಅಶಕ್ತ ಪದಗಳು ಅರ್ಥಹೀನ ವಾಕ್ಯಗಳನ್ನು ಹುಟ್ಟಿಸುತ್ತವೆ.
ಬಹುದಿನಗಳ ನಂತರದ
ಪದ್ಯದಲ್ಲಿ ಬರೆಯಬಹುದಾದುದಾದರೂ ಏನು ?
ದಲಿತರ ಕಾವ್ಯ ರೈತಚಳುವಳಿ
ಫಾಕ್‌ಲ್ಯಾಂಡ್ ಮೇಲೆ ಇಸ್ರೇಲಿ ದಾಳಿ ಅಥವ
ಸಂಬಳ ಕೊಡದ ಸಾಹುಕಾರ
ಹೆತ್ತೂ ಹೆಂಡತಿಯಾಗದ ಹುಡುಗಿ ಮತ್ತು
ಅಪ್ಪ ಈಗ ಬಂದಾನು ಸೇಬು ತಂದಾನು
ಎಂದು ಬಾಗಿಲಲ್ಲಿ ಕಾಯುತ್ತಾ ಕುಳಿತು
ನಗು ಮರೆತ ಮಕ್ಕಳು ಕಲೆಸಿಕೊಂಡರೆ....
ಬಹುದಿನಗಳ ನಂತರ ಬರೆಯುವ
ಪದ್ಯವನ್ನು ಬರೆಯುವುದಾದರೂ ಹೇಗೆ ?
ಇಲ್ಲ. ದಯವಿಟ್ಟು ಕ್ಷಮಿಸಿ.
ಬಹುದಿನಗಳ ನಂತರ ಬರೆಯುವ
ಪದ್ಯದಲ್ಲಿ ಹೀಗೆ ಸೂರ್ಯನನ್ನು ಕವಿದ
ಜೇಷ್ಠಮಾಸದ ಮೋಡಗಳಂತೆ
ಆವರಿಸಿಕೊಂಡ ಅನುಭವಗಳು.—
ಸ್ನೇಹಲತೆಗಿಂತ ಹೆಚ್ಚು ಆಘಾತ ನೀಡಿದ
ಅರಸು ಸಾವು ಮತ್ತು ಸಾವನ್ನು ಹೊತ್ತೇ
ಹುಟ್ಟಿದ ಗೋಕಾಕ್ ಚಳುವಳಿಯನ್ನು
ಕುರಿತು ಬರೆಯಲು ಅವಕಾಶ ನೀಡುವುದಿಲ್ಲ ;
ಆದರೆ ಬಹುದಿನಗಳ ನಂತರ
ಕವಿಸಮಯದಲ್ಲಿ ಹುಟ್ಟುವ ಪದ್ಯವೊಂದನ್ನು
ಕಾಡುವುದು ಏನು ? ಅಥವ ಮತ್ತು ಹೇಗೆ ?
ಎಂಬ ಪ್ರಶ್ನೆಗಳಲ್ಲ !
ಕಾಡಿ ಪ್ರೀತಿಸಿ ಕೊಂದು ಮುಗುಳ್ನಗುವ
ಪ್ರಶ್ನೆಯೊಂದೇ ಏಕೆ ?

ಯೆನ್. ಜಿ. ರಾವ್

ನವ್ಯ ಚಿತ್ರಕಲೆ—ಒಂದು ವಿವೇಚನೆ

—ಪಿ. ಆರ್. ತಿಪ್ಪೇಸ್ವಾಮಿ

ಸಿಂಬಲ್ ಮೂಲಕ ಭಾವನೆಗಳ ಅಭಿವ್ಯಕ್ತಿಯೇ ನವ್ಯಕಲೆ. ಪ್ರಾಚೀನ ಹೋಲಿಕೆಗಳನ್ನು ಬಳಸದೆ ಹೊಸ ವಿಷಯುಗಳನ್ನು ಬಳಸಿಕೊಳ್ಳುವುದೇ ನವ್ಯಕಲೆ. ಆಧುನಿಕ ಅಥವಾ ಇತ್ತೀಚಿನ ಪದ್ಧತಿ. ಹಳೆಯದು ಅಥವಾ ನಡುವಣಕಾಲ ಅಲ್ಲದ್ದೆ ನವೀನ ಕಲೆ. ನವ್ಯವೂ ಸೃಜನಾತ್ಮಕ. ಇಲ್ಲಿ ವ್ಯತ್ಯಾಸ ಕಡಿಮೆ.

ಸಿಂಬಲ್‌ಗಳನ್ನು ಸೃಜಿಸುವುದೇ ಸೃಜನಶೀಲ ಕಲೆ. ಹಳೆಯ ಸಾಂಪ್ರದಾಯ ತಂತ್ರ ಪದ್ಧತಿಯನ್ನು ಅಳವಡಿಸಿ ಹೊಸ ಹೊಸ ರೀತಿಗಳನ್ನು ಬೆಳೆಸಿಕೊಂಡು ಹೋಗುವ (ಹಳೆಯದನ್ನು ಉಳಿಸಿಕೊಂಡು ನವ್ಯವನ್ನು ಬಳಸಿಕೊಂಡವರೂ ಇದ್ದಾರೆ) ಎಲ್ಲ ಕಲೆಯೂ ಸೃಜನಾತ್ಮಕ ಕಲೆಯೇ.

ಯಾವುದೇ ಕಲೆ ಸಾಯುವುದಿಲ್ಲ. ಇಂದು ಎಲ್ಲ ಸಂಪ್ರದಾಯ ಕಲೆಗಳು ಪ್ರಚಲಿತವಾಗಿವೆ. ಅವುಗಳ ಜನಪ್ರಿಯತೆಯಲ್ಲಿ ಹೆಚ್ಚು ಕಡಿಮೆ ಇರಬಹುದು. ನಿಜವಾದ ಕಲಾವಿದನಾದಂಥವನು ಅವನವನ ಕಲಾಪ್ರಕಾರದಲ್ಲಿ (ನವ್ಯ ಆಗಬಹುದು ಅಥವಾ ಸಾಂಪ್ರದಾಯಿಕ ಆಗಬಹುದು) ತನ್ನ ಪ್ರತಿಭೆಯನ್ನು ಮೆರೆದೇ ಮೆರೆಯುತ್ತಾನೆ. ಅವೆಲ್ಲವೂ ಸಮಕಾಲೀನವೇ. ಸಮಕಾಲೀನ ಕಲೆಗಾರರು ಬಳಸತಕ್ಕ ವೈವಿಧ್ಯತೆಗಳು ಆಯಾ ಕಾಲಕ್ಕೆ ಇದ್ದು ಕಲಾವಿದ ಕಲೆಯಲ್ಲಿನ ಸಮಕಾಲೀನ ಅಥವಾ ತೌಲನಿಕ ಅಧ್ಯಯನ ಆಯಾ ಕಾಲಕ್ಕೆ ಅದು ಸಮಕಾಲೀನವಾಗುತ್ತದೆ. ಸಮಕಾಲೀನ ಕಲೆಯನ್ನು ನವ್ಯತೆಗೆ ಸೇರಿಸಬಾರದು. ವಿಲೀನಗೊಳಿಸಬಾರದು. ಆಯಾ ಕಾಲದಲ್ಲಿ ಬೆಳೆದುಬಂದ ಪಂಥಗಳು, ಅದು ನವ್ಯ ಆಗಬಹುದು, ಸೃಜನಾತ್ಮಕ ಆಗಬಹುದು ಅಥವಾ ಸಾಂಪ್ರದಾಯಿಕ ಕಲೆ ಆಗಬಹುದು. ನವ್ಯ ಕಲೆ ಸಮಕಾಲೀನ ಕಲೆ ಶಬ್ದ ಪ್ರಯೋಗಗಳು ಶಿಥಿಲ (ಲೂಸ್ ಯೂಸೇಜ್) ವಾದವು. ಇನ್ನೂ ಹೇಳುವುದಾದರೆ ಸಮಕಾಲೀನ ಕಲೆ ಯಾವುದಾದರೂ ಆಗಬಹುದು. ನವ್ಯದವರು ನವ್ಯವನ್ನು ಸಮಕಾಲೀನ ಕಲೆ ಎನ್ನಬಹುದು. ಸಾಂಪ್ರದಾಯದವರು ಆಯಾ ಕಾಲದಲ್ಲಿ ಸಮಕಾಲೀನ ಕಲೆ ಎನ್ನಬಹುದು. ಅವರವರ ದೃಷ್ಟಿಕೋನದಲ್ಲಿ ಬಳಸಿದಂತೆ ಹೋಗುತ್ತದೆ. ಆ ನವ್ಯದ ದೃಷ್ಟಿಯಿಂದ ಈಗ ನವ್ಯವೇ ಸಮಕಾಲೀನ ಕಲೆ. ನವ್ಯಕಲೆ ಎಂಬುದರ ಬಗ್ಗೆ ತಪ್ಪು ತಿಳುವಳಿಕೆ ಉಂಟಾಗಿರುವುದು, ಅದರ ಬಗ್ಗೆ ಅಲ್ಲಲ್ಲಿ ವಿರೋಧ

ಇರುವುದು ಈ ಪ್ರವೃತ್ತಿಗೆ ಕಾರಣ ಇರಬಹುದು. ಕೆಲವು ಕಲಾವಿದರು ಯಾವುದೇ ತಲೆಬರಹವನ್ನು (ಲೇಬಲ್) ಅಂಟಿಸಿಕೊಳ್ಳಲು ಇಷ್ಟಪಡುವುದಿಲ್ಲ. ತಮ್ಮ ಕೃತಿಯನ್ನು ಕಲೆ ಎಂಬ ದೃಷ್ಟಿಯಲ್ಲಿ ನೋಡಬೇಕೆಂದು ಅವರ ಉದ್ದೇಶ.

ಕ್ಯಾನ್ವಾಸಿನ ಮೇಲೆ ಯಾವುದಾದರೂ ಬಣ್ಣದ ಕಾಗದದ ಚೂರುಗಳನ್ನು ಬೇರೆ ಬೇರೆ ರೀತಿಗಳಲ್ಲಿ ಅಂಟಿಸಿ ರಚಿಸುವ ಕಲೆಯೇ ಕೋಲೇಜ್. ಎಂದು ಕರೆಯಲಾಗುತ್ತದೆ. ಇಲ್ಲಿ ನೀವು ಕೇಳುವಂತೆ ಕ್ಯಾನ್ವಾಸಿನ ಮೇಲೆ 5–6 ಇಂಚು ಗಾತ್ರ (ಎತ್ತರ) ವಿರುವ ಘನವಸ್ತುಗಳನ್ನು ಇಟ್ಟು ಸಂಯೋಜಿಸಿದಾಗ ಅದು ಆಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಇಂಥ ಕೃತಿ ನವ್ಯ ಶಿಲ್ಪದ ಸಮೀಪಕ್ಕೆ ಬರುತ್ತದೆ. ಇದರಲ್ಲಿ ಬಣ್ಣಕ್ಕೆ ಪ್ರಾಧಾನ್ಯತೆ ಇಲ್ಲದಿದ್ದರೆ ಶಿಲ್ಪವೇ ಎನಿಸಬಹುದು.

ನೂತನ ಕಲಾಪಂಥ ಇಪ್ಪತ್ತನೆಯ ಶತಮಾನದಲ್ಲಿ ಬೆಳೆದು ಬಂದಿದೆ. ಇಲ್ಲಿ ನವ್ಯ ಕಲಾವಿದನ ಮನೋಧರ್ಮ, ಕೃತಿಗಳ ಹಾದಿ ಬದಲಾಗುತ್ತಾ ಬಂದಿದೆ. ಕಲಾವಸ್ತುವಿನ ಆಯ್ಕೆ, ನಿರೂಪಣೆ, ಶೈಲಿ ನೂತನತೆ ಕಾಣಬಹುದಾಗಿದೆ. ಕಳೆದ ಮಹಾಯುದ್ಧಗಳ ನಂತರ ಉಂಟಾದ ಧಾರ್ಮಿಕ, ಸಾಮಾಜಿಕ ಮತ್ತು ಲೌಕಿಕ ಏರುಪೇರುಗಳು ನೂತನ ಕಲೆಯ ಮೇಲೆ ಪ್ರತಿಬಿಂಬಿತವಾಗಿದೆ. ಈ ಪ್ರಭಾವ ಸಮಕಾಲೀನ ಜಾಣ್ಮೆಯುಳ್ಳ ಸೂಕ್ಷ್ಮಮತಿಗಳಾದ ನವ್ಯ ಕಲಾವಿದರ ಮೇಲೂ ಗಾಢವಾಗಿ ಆವರಿಸಿತು. ಇದರಿಂದಾಗಿ ಕಲಾವಿದ ತನ್ನ ಬಯಕೆಗಳನ್ನು ಪ್ರತಿಬಿಂಬಿಸಲು ಹೊಸ ರೀತಿಯ ಶೈಲಿಯನ್ನು ಕಂಡುಕೊಳ್ಳಲು ಪ್ರಯತ್ನಿಸಿದನು. ಈ ದಾರಿಯಲಿ ನೂತನ ಕಲೆ ವ್ಯಕ್ತಿನಿಷ್ಠವಾಯಿತು. ಇದರಿಂದಾಗಿ (1) ಕ್ಯೂಬಿಸಂ (2) ಡಾಡಾಯಿಸಂ (3) ಫ್ಯೂಚರಿಸಂ (4) ಇಂಪ್ರೆಷನಿಸಂ ಮೊದಲಾದ ಪಂಥಗಳು ಹುಟ್ಟಿಕೊಂಡವು ಸೆಜಾನ್, ಮೆಟನಿ, ಮೋನೆ, ವಾನೆಗೋ ಮೊದಲಾದವರು ಇದನ್ನು ಸ್ವೀಕರಿಸಿದರು. ಇದು ಕ್ರಮೇಣ ಲೋಕಪ್ರಸಿದ್ಧಿಗೇರಿತು. ಪಾಶ್ಚಾತ್ಯ ದೇಶಗಳಲ್ಲಿ ನವ್ಯಕಲೆ ಬೆಳೆದಂತೆ ಭಾರತದಲ್ಲೂ ಸಾಕಷ್ಟು ಬೆಳೆಯತೊಡಗಿದೆ.

ಮಕ್ಕಳ ಕಲೆ ಇಲ್ಲವೆ ಆದಿಮಾನವರ ಕಲೆ ಇಂದಿನ ನವ್ಯಕಲೆಗೆ ಮೂಲ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಬಹಿರಂಗವಲ್ಲದ ಅಂತರಂಗಕ್ಕೆ ಸೇರಿದ ಯಾವುದೊ ಒಂದು ಚಿತ್ರ ಎಂದು ನಿಗೂಢ ರೂಪದಲ್ಲಿ ಒಡಮೂಡಿದರೆ ಅದು ನವ್ಯಕಲೆ ಎಂದಾಗುತ್ತದೆ, ಎಂದು ಹೇಳಲಾಗುತ್ತದೆ. ಅರ್ಥಪೂರ್ಣ ನವ್ಯಕಲೆಯಲ್ಲಿ ಸೌಂದರ್ಯದ ಅಭಿವ್ಯಕ್ತಿಯನ್ನು ನಿರೀಕ್ಷಿಸಲೂಬಹುದು ಇಲ್ಲಿ ಅನುಭಾವದಿಂದ ಸ್ಫೂರ್ತಿಗೊಂಡು ಹೊರಹೊಮ್ಮಿದ ಪ್ರಯೋಗ ನವ್ಯಕಲೆಯನ್ನು ಅರಿತು ಮೆಚ್ಚಲು ಕಲಾಪ್ರಜ್ಞೆ, ಸೂಕ್ಷ್ಮ ಸಂವೇದನೆ ಅಗತ್ಯವಾಗಿರಬೇಕಾಗಿದೆ.

ಆದಿಮಾನವ ತನ್ನ ಆಲೋಚನೆಗಳನ್ನು ಕೆಲವೊಮ್ಮೆ ಚಿಹ್ನೆಗಳಿಂದ ಅಭಿವ್ಯಕ್ತ

ಗೊಳಿಸಿದ್ದಾನೆ. ನವ್ಯ ಚಿತ್ರಕಾರ ತನ್ನ ಬಾಳಿನ ಎಲ್ಲ ಸಂಕೀರ್ಣತೆಗಳನ್ನು ಅವನು ನೂತನ ಮಾಧ್ಯಮದಲ್ಲಿ ಪ್ರೇಕ್ಷಕರಿಗೆ ಕಾಣಿಸುತ್ತಾನೆ. ಇವು ಕೆಲವರಿಗೆ ಬೇಗ ಅರ್ಥವಾಗಬಲ್ಲುದು. ಕೆಲವು ಸಾರಿ ನವ್ಯಚಿತ್ರದಲ್ಲಿ ಯಾವುದೇ ನಿರ್ದಿಷ್ಟ ವಸ್ತು ಇದ್ದಂತೆಯೇ ತೋರುವುದಿಲ್ಲ ಎಂಬ ನಿಷ್ಠುರ ಮಾತು ಒಪ್ಪುವಂತಹದು.

ಸಾಂಪ್ರದಾಯಿಕ ಕಲೆಯಲ್ಲಿ ತೋರಿಬರುವ ಸ್ಪಷ್ಟೀಕರಣ, ಧ್ಯೇಯ ನವ್ಯಕಲೆಯಲ್ಲಿ ತೋರಿಬರುವುದಿಲ್ಲ. ಅದಾಗ್ಯೂ ಅದು ಒಂದು ವಿಶೇಷ ಅನುಭವವನ್ನು ನಾವೀನ್ಯತೆಯನ್ನು ತಂದುಕೊಟ್ಟು ನೋಟಕನನ್ನು ಅಚ್ಚರಿಗೊಳಿಸುತ್ತದೆ. ನವ್ಯಕಲೆಯ ಮೌಲ್ಯ ಅಡಗಿರುವುದು ನಮ್ಮ ಜೀವನದ ಮೇಲೆ ಅದು ಉಂಟುಮಾಡಬಹುದಾದ ವಿಶೇಷವಾದ ಪರಿಣಾಮದಲ್ಲಿ. ನವ್ಯಕಲೆ ಎಷ್ಟು ಶಕ್ತಿಯುತವಾಗಿದೆ ಎಂಬುದರಲ್ಲಿ ಅದು ಚಲುವನ್ನು ಎಷ್ಟರಮಟ್ಟಿಗೆ ನೇರವಾಗಿ ನೀಡಬಲ್ಲುದು ಎಂಬುದರಲ್ಲಿ ಅಡಕವಾಗಿದೆ.

ಜಾಕ್‌ಸನ್ ಪೋಲಾಕ್ ಪ್ರಸಿದ್ಧ ನವ್ಯಕಲಾವಿದ. ತನ್ನ ಬಣ್ಣಗಳನ್ನು ಬಹಳ ಚಮತ್ಕಾರ ರೀತಿಯಲ್ಲಿ ಬಳಸುತ್ತಿದ್ದ. ತನ್ನ ಕ್ಯಾನವಾಸಿನ ಮೇಲೆ ಈತ ಬಣ್ಣಗಳನ್ನು ಧಾರಾಕಾರವಾಗಿ ಸುರಿಯುತ್ತಿದ್ದ. ಕೆಲವು ಸಾರಿ ಈತ ಬಣ್ಣದ ಮಡಕೆಗಳನ್ನು ಕ್ಯಾನವಾಸಿನ ಮೇಲೆ ಎರಚುತ್ತಿದ್ದ.

ಒಬ್ಬ ಕಲಾವಿದ ಗಾಲಿಗಳಿಗೆ ಬಣ್ಣ ಸವರಿದ ಬೈಸಿಕಲ್ ಅನ್ನು ಕ್ಯಾನ್ವಾಸಿನ ಮೇಲೆ ಓಡಾಡಿಸುತ್ತಿದ್ದ ಉದಾಹರಣೆಯೂ ಇದೆ. ಅನಿರೀಕ್ಷಿತ ಬಣ್ಣಗಳನ್ನು ತಂದು ಸೊಗಸನ್ನು ಕಣ್ಣಿಗೆ ಚುಚ್ಚುವಂತೆ ಮಾಡುವುದೇ ಇಂಥ ಕಲಾವಿದರ ಮುಖ್ಯ ಗುರಿ. ಇದನ್ನೇ ಈ ಕಲಾವಿದರು.......................................ಎಂದು ಕರೆಯುತ್ತಾರೆ. ಕೆಲವರು ಇಂಥ ಚಿತ್ರಗಳನ್ನು.... ....ಎನ್ನಬಹುದು. ಕಾರಣ, ಮಕ್ಕಳು ಸಹ ಮಾಡಬಹುದಲ್ಲ ಎಂದು ಅಂಥ ಚಿತ್ರಗಳು ಹಳೆಯ ಗೋಡೆಗಳಲ್ಲಿ ಕಾಣಬಹುದಲ್ಲ, ಇಲ್ಲವೇ ಬೀದಿಯ ಕಸದ ಡಬ್ಬದ ಮುಚ್ಚಳದಲ್ಲಿ ಕಾಣಬಹುದಲ್ಲ. ಮಕ್ಕಳ ಚಿತ್ರವಾಗಲೀ ಅಥವಾ ಕಸದ ಡಬ್ಬಗಳ ಮುಚ್ಚಳದ ಮೇಲಿನ ಆಕಾರವಾಗಲೀ ನೋಡಲು ಮೋಜು ಎನಿಸುತ್ತದೆ. ಚೈನಾದ ವಿದ್ವಾಂಸನೊಬ್ಬ ತಿಳಿಸುವಂತೆ "ಪ್ರತಿಯೊಂದೂ ಅದರದೇ ಆದ ಸೌಂದರ್ಯವನ್ನು ಹೊಂದಿರುತ್ತದೆ. ಆದರೆ ನೋಡುವವನ ದೃಷ್ಟಿ ಮುಖ್ಯ" ಎಂದಿದ್ದಾನೆ. ಯಾವುದೇ ಚಿತ್ರವಾಗಲಿ ಅದು ನಮ್ಮ ಕಲ್ಪನೆಯನ್ನು ನಮ್ಮ ವಿಚಾರಶೀಲತೆಯನ್ನು ಕೆರಳಿಸುವಂತಾಗಿರಬೇಕು. ಫ್ರೆಂಚ್ ಕಲಾವಿದ ಮ್ಯಾನ್ಸಿಯರ್‌ನ ಚಿತ್ರಗಳಲ್ಲಿ ವಸ್ತು ಎಂಬುದೇ ಕಾಣುವುದಿಲ್ಲ. ಇಲ್ಲಿ ಯಾವ ನಿರ್ದಿಷ್ಟ ಅರ್ಥವೂ ತೋರಿಸದೆ ವಿವಿಧ ಆಕಾರಗಳನ್ನು, ಬಣ್ಣಗಳನ್ನು ಕಣ್ಣಿಗೆ ಮನೋಹರವಾಗಿ ಕಾಣುವಂತೆ ಅಳವಡಿಸಿರುವ ಈತನ ರೀತಿ ಮೆಚ್ಚುವಂತಹದು. 70 ವರ್ಷದ ಹಿಂದೆ ತೀರಿ

ಕೊಂಡ ವ್ಯಾನಗಾಗ್ ಸಹ ತನ್ನ ಕಲೆಯಲ್ಲಿ ಹೊಸ ದೃಷ್ಟಿಯನ್ನು ಕಂಡುಕೊಂಡು ತನ್ನ ನವ್ಯ ಶೈಲಿಯನ್ನು ಜಗತ್ತಿಗೆ ನೀಡಿದ. ವಿಜ್ಞಾನ ದೃಷ್ಟಿಯಲ್ಲಿ ಹೊಸ ಹೊಸ ಸೃಷ್ಟಿಗಳೆಲ್ಲವೂ ಹೊಸದಲ್ಲ. ಹಿಂದೆ ಇದ್ದುದು ಮುಂದೆ ಯಾವಾಗಲಾದರೊಮ್ಮೆ ಬರಬಹುದು. 19ನೇ ಶತಮಾನದಲ್ಲಿ ಗಣಿತಶಾಸ್ತ್ರದಲ್ಲಿ ಇಂಥ ಒಂದು ಘಟನೆ ನಡೆಯಿತು. ಜಾಮಿತಿ ಶಾಸ್ತ್ರಜ್ಞರ ಗುಂಪು ಬೈಮನಿಕೋಲ್ ಇವರಿಬ್ಬರ ನೇತೃತ್ವದಲ್ಲಿ ಸಮಾನಾಂತರ ರೇಖೆಗಳು ಸಂಧಿಸುತ್ತವೆ. ಆದ್ದರಿಂದ ವಿರುದ್ಧವಾದ ಫಲಿತಾಂಶಗಳು ಕಂಡುಬಂದವು ಇದರಿಂದ ಅವರನ್ನು ಹುಚ್ಚರೆಂದು ಕರೆದರು. ಐನ್‌ಸ್ಟೀನ್ ಇದನ್ನು ಮುಂದೆ ಯಾಕೆ ಇರಬಾರದೆಂದು ಒಪ್ಪಿಕೊಂಡರು. ಇದು ಅವನು ಅನೇಕ ಅಂತ್ಯವಿಲ್ಲದ ಸಿದ್ಧಾಂತಗಳ ಅವಿಷ್ಕಾರಕ್ಕೆ ದಾರಿಯಾಯಿತು. ಮಾನವ ಅಸ್ತಿತ್ವದಲ್ಲಿರುವ ಸೃಷ್ಟ್ಯಾತ್ಮಕ ಕಲ್ಪನೆಗಳನ್ನು ಬಳಸಿಕೊಳ್ಳುವುದಿಲ್ಲ. ಕಾರಣ ಅವನು ಪ್ರತಿದಿನ ಬದಲಾಯಿಸುತ್ತಿರುತ್ತಾನೆ. ಅವನು ತನ್ನ ಸುತ್ತ ಹೊಸ ಸೌಂದರ್ಯವನ್ನು ಪ್ರಗತಿಯನ್ನು ಕಾಣುತ್ತಾನೆ. ಮಾನವನ ಹುಡುಕುವ ಪ್ರವೃತ್ತಿ ಸದಾ ಇದ್ದೇ ಇದೆ. ಅದನ್ನು ಕಂಡುಹಿಡಿಯುವ ತನಕ ಅವನ ಪ್ರಯತ್ನ ನಡದೇ ಇರುತ್ತದೆ. ಡಚ್ ದೇಶದ ಖ್ಯಾತ ಕಲಾವಿದ ವ್ಯಾನಗಾಗ್ ತನ್ನ ಪ್ರತಿಭೆಯನ್ನು ಕಂಡುಕೊಳ್ಳಲು ಅನೇಕ ವರ್ಷಗಳನ್ನು ಪ್ರಯತ್ನಗಳಲ್ಲಿಯೇ ಕಳೆದ. ಗೆಲಿಲಿಯೋ, ಮೈಕಲ್‌ಏಂಜಲ್ ಮುಂತಾದವರನ್ನು ಕಾಲವೇ ಮಹಾಪುರುಷರನ್ನಾಗಿ ಮಾಡಿದೆ. ಸಾಮಾನ್ಯ ಮನುಷ್ಯನು ಹೇಗೆ ಪ್ರಖ್ಯಾತಿ ಹೊಂದಬಹುದೆಂಬುದಕ್ಕೆ ಇವರು ಉದಾಹರಣೆಯಾಗಿದ್ದಾರೆ.

ಮಾನವ ಕೆಲವೊಮ್ಮೆ ನಿಸರ್ಗದ ಮೊರೆಹೋಗುತ್ತಾನೆ. ಕೆಲವು ಸಾರಿ ನಿಸರ್ಗಕ್ಕೆ ಹೆದರಿ ಅದನ್ನು ಎದುರಿಸುವುದನ್ನು ಕಲಿತುಕೊಳ್ಳುತ್ತಾನೆ. ಉದಾಹರಣೆಗೆ ಹುಲಿಗೆ ಬಲೆಹಾಕಿ ಹಿಡಿಯುವುದು ಸಾಧ್ಯವಿಲ್ಲದಿದ್ದಾಗ ಪೂಜಿಸುವುದು, ಹೀಗೆ ಪೂಜಿಸುವಾಗ ದುಷ್ಟ ಜಂತುಗಳ ಚಿತ್ರಗಳನ್ನು ಗುಹೆಗಳ ಗೋಡೆಗಳ ಮೇಲೆ ಬರೆದುಕೊಳ್ಳುತ್ತಾನೆ. ಇಂದಿನ ಸೃಷ್ಟಿಗಳು ಮುಂದಿನ ಸೃಷ್ಟಿಗಳ ಮೇಲೆ ಪ್ರಭಾವ ಬೀರುತ್ತದೆ. ಆಗ ಸೃಷ್ಟಿಕರ್ತನನ್ನು ಗೇಲಿ ಮಾಡಬಹುದು. ಆದರೆ ಅವನ ಸೃಷ್ಟಿ ಉಳಿದುಕೊಳ್ಳುತ್ತದೆ. ಅವನ ಅಭಿಪ್ರಾಯ ದೃಢವಾದುದಾದರೆ ಅವನ ನಗು ಕೊನೆಗೆ ಉಳಿಯುತ್ತದೆ. ಇಂಥ ಸೃಜನಶೀಲತೆಗೆ ಹಿಂದಿನ ಕೆಲಸಗಳ ಬಗ್ಗೆ ಕುರುಡು ನಂಬಿಕೆ, ಗೌರವಗಳಿರುವುದಿಲ್ಲ. ಆದರೆ ಹಿಂದಿನವುಗಳಿಂದ ಕಲಿಯಬೇಕೆಂಬುದು ಅವನಿಗೂ ಗೊತ್ತು. ಅವನಿಗೆ ಉತ್ತಮಗೊಳಿಸುವಿಕೆಯಲ್ಲಿ ಅವನಲ್ಲಿ ಅಸ್ಪಷ್ಟ ಅಭಿಪ್ರಾಯವುಂಟು. ಆ ಅಭಿಪ್ರಾಯಗಳಿಂದ ತನ್ನ ತನವನ್ನು ಮರೆಯುತ್ತಾನೆ, ನಮ್ಮನ್ನು ವಿಸ್ಮಯಗೊಳಿಸುತ್ತಾನೆ. ●

ಭಾಷೆ, ರಾಜಕೀಯ ಮತ್ತು ಪ್ರಸಕ್ತ ಬದುಕು

—ಯು. ಆರ್. ಅನಂತಮೂರ್ತಿ

ನಾನು ಹಿಂದೆ ಜಾತಿ ಬಗ್ಗೆ ತೊಗೊಂಡಿದ್ದ ನಿಲುವಿನಲ್ಲಿ ಮುಖ್ಯವಾದ ವ್ಯತ್ಯಾಸ ಏನೂ ಆಗಿಲ್ಲ. ನನ್ನ ಯೋಚನೆಯಲ್ಲಿ ಸಾಮಾನ್ಯವಾಗಿ ಜಗತ್ತಿನ ಎಲ್ಲ ಸಂಸ್ಕೃತಿಯಲ್ಲೂ ಇರುವ ಒಂದು ವ್ಯತ್ಯಾಸ ಇಂಡಿಯಾ ದೇಶದಲ್ಲೂ ಯಾವ ರೀತಿಯಲ್ಲಿ ವ್ಯಕ್ತಗೊಂಡಿದೆ ಅಂತ ಯೋಚಿಸಿ ನಾನು ಆ ವಿಚಾರವನ್ನ ಮುಂಡಿಸಿದ್ದೆ. ಈಗ ಇಂಗ್ಲೆಂಡ್‌ನಂತಹ ಒಂದು ಸಂಸ್ಕೃತಿಯಲ್ಲಿ ಒಂದು ಧೀಮಂತ ವರ್ಗ ಅಂತ ಇತ್ತು. ಬೌದ್ಧಿಕವಾಗಿ ಚಿಂತನೆ ಮಾಡುವವರದ್ದು, ಅಮೂರ್ತವಾಗಿ ಚಿಂತನೆ ಮಾಡುವವರದ್ದು. ಹಾಗೆಯೇ ಅದರ ಜೊತೆ ದಟ್ಟವಾದ ಜೀವನಾನುಭವವುಳ್ಳ ಕಾರ್ಮಿಕರು, ರೈತರು, ಸೈನಿಕರೆಲ್ಲ ಇರ್ತಾರೆ. ಈ ಇಪ್ಪತ್ತನೇ ಶತಮಾನದಲ್ಲಿ ರಸೆಲ್, ಕೇನ್ಸ್, ಹೀಗೆ ಕೇಂಬ್ರಿಡ್ ನಲ್ಲಿರುವ ಒಂದು ಗುಂಪು ಬಂತು. ಅವರ ಎದುರು ಲಾರೆನ್ಸ್ ಇದ್ದಾಗ ಅವರಿಗೇನೋ ಆಶ್ಚರ್ಯವಾಗ್ತಾ ಇತ್ತು. ಇವನಿಗೇನೋ ಅನುಭವವಿದೆ, ನಮಗೆ ಗೊತ್ತಿಲ್ಲದಿರೋದ್ದು ಏನೋ ಇವನಿಗೆ ಗೊತ್ತಿದೆ ಅಂತ. ಹಾಗೇನೇ ಅವರಲ್ಲಿ ಕೆಲವರು ಅನುಮಾನಿಸ್ತಾ ಇದ್ದರು. ಲಾರೆನ್ಸ್‌ಗೆ ನಮ್ಮನ್ನ ಕಂಡರೆ ಅಸೂಯೆ, ಈ ಥರದ ಒಳ್ಳೇ ನಿಕಷ ತನಗೆ ಸಿಗಲಿಲ್ಲ ಅನ್ನೋದು.

ಈ ತಾತ್ವಿಕರು, ಅಮೂರ್ತ ಚಿಂತಕರನ್ನ ಬ್ಲೂಮ್ಸ್ ಬೆರಿಗ್ರೂಪ್ ಅಂತಾರೆ. ಅವರಿಗೆ ಒಂದು ಥರಾ ಜೀವನದ ಅನುಭವ ಕಡಿಮೆ. ಅಮೂರ್ತತತ್ವಗಳಿದ್ದವು. ಲಾರೆನ್ಸ್‌ಗೆ ದಟ್ಟವಾದ ಅನುಭವ ಇತ್ತು. ಅವರಿಬ್ಬರು ಸಂಧಿಸಿದ್ದು ಒಂದು ರೀತಿಯ ಆಸ್ಫೋಟವಾಯ್ತು. ನಾನು ಇಂಡಿಯಾದಲ್ಲಿ ಅದನ್ನ ಗಮನಿಸಿದ್ದೆ. ನಾನು ಗಮನಿಸಿದ್ದಕ್ಕೂ ಒಂದು ಸಂಬಂಧ ಕಲ್ಪಿಸೋಕೆ ನೋಡಿದ್ದೆ. ಬ್ರಾಹ್ಮಣ ವರ್ಗ ಕುಶಲ ಕಲೆಗಳಿಂದ, ಕೈಗಾರಿಕೆಗಳಿಂದ, ರೈತಾಪಿ ಕೆಲಸಗಳಿಂದ ದೂರವಾಗಿ, ಅದು ಬ್ರಿಟಿಷರ ಕಾಲದಲ್ಲಿ ನೌಕರಿ ವರ್ಗಕ್ಕೆ ಬಂದು ಇಂಡಿಯಾದ ಶೂದ್ರವರ್ಗದ ಅನುಭವಗಳಿಂದ ದೂರವಾಗ ತೊಡಗಿದ್ದರಿಂದ ಒಬ್ಬ ಕಾದಂಬರಿಕಾರನಾಗಿ ನಾನು ಯೋಚನೆ ಮಾಡಿದರೆ, ಇವೆರಡೂ ಒಟ್ಟಾಗಿ ಹುಟ್ಟಿ ಬರದ ಹೊರತು ಸಮಗ್ರವಾದ ಚಿತ್ರ ಬರೋದಿಲ್ಲ ಅಂದರೆ ಶೂದ್ರರೂ ಅಪೂರ್ಣ, ಬ್ರಾಹ್ಮಣರೂ ಅಪೂರ್ಣ ಅನ್ನುವ ಚಿಂತನೆ. ಬ್ರಾಹ್ಮಣ ಯಾಕೆ ಅಪೂರ್ಣ ಅಂದರೆ, ಅವನಲ್ಲಿ ತಾತ್ವಿಕತೆ, ಚಿಂತನಾಶಕ್ತಿ ಎಲ್ಲ ಇರುತ್ತೆ ಆದ್ರೆ ಆದೊಂದು ರೀತೀಲಿ

ಟೊಳ್ಳಾಗ್ತಾ ಪೊಳ್ಳಾಗ್ತಾ ಹೋಗುತ್ತೆ. ಇನ್ನೊಬ್ಬನಿಗೆ ಹಾಗೇನೇ ಬೇಕಾದಷ್ಟು ಅನುಭವ ಇರುತ್ತೆ. ಆದರೆ ಆ ಅನುಭವದಿಂದ ಅಮೂರ್ತವಾಗಿ ಅದನ್ನ ತಿಳಕೊಳ್ಳೋದಕ್ಕೆ ಅವನಿಗೆ ಬರೋದಿಲ್ಲ. ಇವೆರಡೂ ಒಂದಾಗದೆ ನಮ್ಮಲ್ಲಿ ಒಂದು ಸಮಗ್ರವಾದ ವ್ಯಕ್ತಿತ್ವ ನಿರ್ಮಾಣ ಆಗಲ್ಲ.

ನಾನು ಸಂಸ್ಕಾರ ಬರೆದಾಗ ಈ ಕಥೆ, ನನ್ನ ಮಿಥ್ ಇಟೆಯಲ್ಲ-ಪರಾಶರ ಮತ್ತು ಮತ್ಸ್ಯಗಂಧಿ ಸೇರಿದಾಗ ವೇದವ್ಯಾಸ ಹುಟ್ತಾನೆ ; ಆ ವೇದವ್ಯಾಸ ಮಹಾಭಾರತವನ್ನ ಬರೀತಾನೆ. ಇದು ನನಗೆ ಒಂದು ರೀತಿಯ ಸಾಂಕೇತಿಕವಾದ ಕಥೆಯಾಗಿ ಕಾಣಿಸುತ್ತೆ. ನಾನು ಆ ನಿಲುವಿನಿಂದ ಇವತ್ತಿಗೂನೂ ಬೇರೆಯಾಗಿ ದೂರವಾಗಿ ಹೋಗಿಲ್ಲ. ಆದರೆ ಅನೇಕ ರೀತಿಯ ಸ್ಪಷ್ಟೀಕರಣಗಳು ಸೇರಿಕೊಂಡಿವೆ ಅಷ್ಟೆ.

ಸತ್ಯನಾರಾಯಣ* ಬರೆದ ನೋಟ್‌ನಲ್ಲಿ ಒಂದು ಗಮನಿಸಿದೆ. ನಮ್ಮಲ್ಲಿ ಜಾತಿಗಳೆಲ್ಲ ಬೇರೆ ಬೇರೆಯಾಗಿ ಬಿಟ್ಟಿರೋದರಿಂದ ಪ್ರತಿಯೊಂದು ಜಾತಿಯೂ ಒಂದು ಪುಟ್ಟ ವಿಶ್ವವೇ ಆಗಿರೋದರಿಂದ ಅವರ ಕರ್ಮಾಚರಣೆಗಳು ಮಾತಿನ ಕ್ರಮ, ಊಟದ ಕ್ರಮ ಪ್ರತಿಯೊಂದೂ ಬೇರೆ ಬೇರೆ ಆಗಿರೋದರಿಂದ, ಅದು ಉಳಿದ ಜಾತಿಗಳಿಗೆ ಗೊತ್ತಿಲ್ಲದೇ ಇರೋದರಿಂದ ಆ ವಿವರ ಬರೆದುಕೊಂಡೇ ಒಳ್ಳೆ ಕಾದಂಬರಿಯೆನ್ನುವ ಭ್ರಾಂತಿ ಪಡುವ ಸಾಧ್ಯತೆ ಇದೆ. ಚದುರಂಗರ 'ವೈಶಾಖದ' ಬಗ್ಗೆ, ಈ ಜನಗ ಜೀವನದ ವಿವರಗಳು ನಮಗೆ ಗೊತ್ತೇ ಇರಲಿಲ್ಲ, ಎಷ್ಟು ಚೆನ್ನಾಗಿ ಬರೆದರು. ಯಾಕೆ ಹಾಗೆ ಅಂದರೆ ನಮ್ಮ ವಿವಿಧ ಜಾತಿಗಳ ನಡುವೆ ಕೊಡುಕೊಳ್ಳುವ ಸಂಬಂಧಗಳು ಗ್ರಾಮೀಣ ಬದುಕಿನಿಂದ ಒಂದು ಹಂತಕ್ಕೆ ಬಂದ ನಂತರ ಕಡಿಮೆಯಾಗಿವೆ.

ಹಿಂದೆ ಹೀಗಿರಲಿಲ್ಲ. ನಾನು ಹುಡುಗನಾಗಿದ್ದಾಗ ನಮ್ಮೂರಿನ ಚಾವಡಿಯಲ್ಲಿ ನನ್ನಜ್ಜ, ಎದುರುಗಡೆ ನಮ್ಮ ಊರಿನ ಪಟೇಲರು, ಅಣ್ಣಪ್ಪ ನಾಯಕರು : ಇಬ್ಬರೂ ಕೂತಿದ್ದರೆ, ನಮ್ಮಜ್ಜನೂ ಕನ್ನಡ ಮಾತಾಡ್ತಾ ಇದ್ದೋರು ಸ್ವಲ್ಪ ಸಂಸ್ಕೃತ ಗೊತ್ತಿತ್ತು, ಅಣ್ಣಪ್ಪ ನಾಯಕರು ; ಅಷ್ಟೆ ಕನ್ನಡ ಮಾತಾಡ್ತಾ ಇದ್ದರು. ಅವರಿಬ್ಬರೂ ಮಾತಾಡ್ತಾ ಇದ್ದರೆ, ಅವರಿಬ್ಬರ ಪ್ರಪಂಚದಲ್ಲಿ ಜಾತಿಯ ವ್ಯತ್ಯಾಸಗಳು ಎಷ್ಟೇ ಇದ್ದರೂ ಸಮಾನವಾದ ಅಂಶಗಳು ಬಹಳ ಇರುತ್ತಿದ್ದವು. ಆದರೆ ಈಗ ಇಂಗ್ಲೀಷ್ ಮಾತಾಡ್ತಾ ಇರುವ ಪಟ್ಟಣಿಗ ಹಳ್ಳಿಯಲ್ಲಿ ಏನೂ ಇಂಗ್ಲಿಷ್ ಬರದ ಒಬ್ಬ ಬ್ರಾಹ್ಮಣೇತರ ಒಂದು ಚಾವಡಿಯಲ್ಲಿ ಕೂರುವ ಸಂದರ್ಭ ನಾನು ಕಲ್ಪಿಸಿಕೊಳ್ಳಲಾರೆ. ಅಂದರೆ ಅವರಿಬ್ಬರೂ ಸಾಮಾಜಿಕವಾಗಿ ಒಟ್ಟಿಗೇ ಸೇರುವ ಸಂದರ್ಭವನ್ನೇ, ನಾನು ಯೋಚಿಸಲಾರೆ. ಅಂತಹವನು ಒಬ್ಬ ಓದುಗ ಆದಾಗ, ಇವನ ಜೀವನದ ಬಗ್ಗೆ-ಬೇರೆ ದೇಶದ ಒಂದು ಕಾದಂಬರಿಯನ್ನ ಒಂದು ಸಾಮಾಜಿಕ ಕಾರಣಕ್ಕೆ, Anthropological ಆಗಿ ಓದಬಹುದು ಅಷ್ಟೆ. ಇಂಥ ಸ್ಥಿತಿಗೆ ನಾನು ಬಂದಿದ್ದೇನೆ. ಹಿಂದಿನ ಕಾಲದಲ್ಲಿ

* 'ಅಂಕಣ' ಏಪ್ರಿಲ್ 82.

ಅಮೂರ್ತತೆ–ಜಾತಿಯ ಸಂದರ್ಭದಲ್ಲೇ ಅಮೂರ್ತವಾಗಿರುವ ಚಿಂತಿಸಬಹುದಾಗಿದ್ದ ಸಾಧ್ಯತೆಯನ್ನ ಈಗ ಕಳಕೊಳ್ತಾ ಇದ್ದೀವಿ. ಯಾಕೆಂದರೆ ಜಾತಿಯ ಜೊತೆಗೆ ನಗರೀಕರಣ ಸಹ ಬಾಧಿಸ್ಬಿಟ್ಟಿದೆ. ನಾವು ಕೃತಿಗಳನ್ನೂ ಓದಿ ಆಸ್ವಾದಿಸುವ ಕ್ರಮದಲ್ಲೇ ಒಂದು ತೊಡಕು ಬಂದ್ಬಿಟ್ಟಿದೆ.

ಕನ್ನಡ ಇತ್ಯಾದಿ ಭಾಷೆಗಳು ಉಳಿದು ಜೀವಂತವಾಗಿರುವುದು ನಿರಕ್ಷರತೆಯಿಂದ, ಇದನ್ನ ಹಿಂದೆ ನನ್ನ ಒಂದು ಲೇಖನದಲ್ಲಿ ನಾನು ಹೇಳಿದ್ದೆ. ಎಲ್ಲರೂ ಅಕ್ಷರಸ್ಥರಾಗಿದ್ದರೆ ಆಳುವ ವರ್ಗದ ಭಾಷೆಯನ್ನ ಕಲಿತಿದ್ದರೆ ಎಲ್ಲರ ಭಾಷೆಯೂ ಸಂಸ್ಕೃತವಾಗಿರೋದು, ಇಂಗ್ಲಿಷ್ ಆಗಿರೋದು ಅಥವಾ ಪರ್ಷಿಯನ್ ಆಗಿರೋದು. ಆದ್ದರಿಂದ ಒಬ್ಬ ಲೇಖಕ ಎಷ್ಟೇ ನಗರೀಕೃತ ಆಗಿರಲಿ ಎಂಥಾ ಪಟ್ಟಣಿಗ ಆಗಿರಲಿ, ಅವನು ಕನ್ನಡದಲ್ಲಿ ಬರೆಯಬೇಕಾದರೆ ಒಂದೋ ಅವನು ತನ್ನ ಬಾಲ್ಯದ ಸಂಸ್ಕೃತಿಗಳಿಗೆ ಹೋಗಬೇಕಾಗುತ್ತೆ, ಅಥವಾ ತನ್ನ ಹಾಗೆ ವಿದ್ಯಾವಂತರಲ್ಲದವರ ಭಾಷೆಯಲ್ಲಿ ತಾನು ಕಲಿತ ಎಲ್ಲ ತತ್ವಗಳನ್ನೂ ಹೇಳಲೇಬೇಕಾಗುತ್ತೆ. ಇವೆರಡೂ ಒಟ್ಟಿಗೇ ಬರಬೇಕಾಗುತ್ತೆ.

ತನ್ನ ಮನಸ್ಸಿನ ಅಮೂರ್ತತೆಯನ್ನು ಮತ್ತು ಈ ಅಮೂರ್ತತೆಯನ್ನು ಪಡೆಯದೇ ಇರುವ ಜನರ ಭಾಷೆಯಲ್ಲಿ ಹೇಳಬೇಕಾಗಿ ಬಂದಾಗ, ಬೊಂಬಾಯಿಯಲ್ಲಿರುವ ಯಶವಂತ ಚಿತ್ತಾಲ ತನ್ನ ಹನೇಹಳ್ಳಿಯ ನೆನಪುಗಳನ್ನ ಹೇಳಬೇಕಾಗಿ ಬಂದಾಗ, ಅಥವಾ ಕೊಲ್ಹಾಪುರದಲ್ಲಿ ಯಾವುದೋ ಭಾಷೆಯ ಜನರ ನಡುವೆ ಇರುವ ಶಾಂತಿನಾಥ ದೇಸಾಯಿ ಮತ್ತೆ ತಮ್ಮ ಬಾಲ್ಯದ ಅನುಭವಗಳನ್ನೆಲ್ಲ ದುಡಿಸಿಕೊಳ್ಳಬೇಕಾಗಿ ಬಂದಾಗ, ಬಹಳ ವಿಚಿತ್ರವಾದ ಒಂದು ಘಟನೆ ನಮ್ಮ ಭಾರತೀಯ ಭಾಷೆಗಳಲ್ಲಿ ಆಗ್ತಾ ಇದೆ. ಯೂರೋಪಿನಲ್ಲಿ ಇದು ಆಗ್ತಾ ಇಲ್ಲ. ಆದ್ದರಿಂದ ಭಾರತೀಯ ಭಾಷೆಗಳನ್ನ ನಾನು ಜೀರ್ಣಾಗ್ನಿಗಳು ಅಂತ ಕರೆದಿದ್ದೇನೆ. ಒಂದೊಂದು ಭಾರತೀಯ ಭಾಷೆ ಒಂದೊಂದು ಜೀರ್ಣಾಗ್ನಿ. ಭಾರತೀಯ ಭಾಷೆಗಳು ಉಳಿದಿರೋದು ಒಂದು ದೃಷ್ಟಿಯಿಂದ ಶೂದ್ರರಿಂದ, ಕೆಲಸ ಮಾಡುವ ಜನರಿಂದ, ರೈತಾಪಿ ಕೆಲಸಗಳನ್ನು ಮಾಡುವುದರಿಂದ. ಇದರ ಜೊತೆ ಇನ್ನೊಂದು ವರ್ಗದ ಜನರನ್ನ ತರ್ತೀನೆ. ವೈದಿಕರು, ವೈದಿಕರು ಕೂಡ ಹಾಗೇನೆ ಈ ಭಾಷೆಗಳಿಗೆ ಹತ್ತಿರವಾಗಿದ್ದಾರೆ. ಬ್ರಾಹ್ಮಣರಲ್ಲಿ ಎರಡು ಥರಾ ಇದಾರೆ, ವೈದಿಕ ಬ್ರಾಹ್ಮಣರು, ಲೌಕಿಕ ಬ್ರಾಹ್ಮಣರು. ಕಾರಂತರಲ್ಲಿ ಆ ಸತ್ವ ಯಾಕೆ ಬರ್ತದೆ ಅಂದರೆ. ಅವರು ವೈದಿಕ ಬ್ರಾಹ್ಮಣರಿಗೆ ಹತ್ತಿರದವರು. ಲೌಕಿಕ ಬ್ರಾಹ್ಮಣರು ತಮ್ಮ ಹಾಗೇ ವಿದ್ಯಾವಂತರಾದ ಶೂದ್ರರಿಗೆ ಮಾತ್ರ ಹತ್ತಿರವಾಗಬಲ್ಲರು ಅಷ್ಟೆ. ಸೃಜನಾತ್ಮಕವಾಗಿ–ವೈದಿಕ ಬ್ರಾಹ್ಮಣ ಮತ್ತು ಶೂದ್ರರ ನಡುವಿನ ಸಂಬಂಧ ಇದೆಯಲ್ಲ ಅದು ಭಾಷೆಯನ್ನ ಪುಷ್ಟಿಗೊಳಿಸುವ ದೃಷ್ಟಿಯಿಂದ ಹೆಚ್ಚು ಅರ್ಥಪೂರ್ಣವಾದದ್ದು. ಇವತ್ತು ಹಾಗಲ್ಲ. ಆಗ ಎರಡು ಜನವರ್ಗಗಳ ನಡುವೆ

ಕೊಡುಕೊಳ್ಳುವ ಸಂಬಂಧ ಇತ್ತು. ಯಾವ ಥರ ಅಂದರೆ, ಈಗ ಟಾಲ್‌ಸ್ಟಾಯ್ ನೋಡಿ, ಅವನು ಬಹು ದೊಡ್ಡ ಜಮೀನುದಾರ ವರ್ಗಕ್ಕೆ ಸೇರಿದವನು. ಆದರೆ, ರಷ್ಯಾದ 19 ನೇ ಶತಮಾನದ ಕೊನೆಯಲ್ಲಿ ದೊಡ್ಡ ಜಮೀನುದಾರನಾಗಿರೋದು, ಸೃಜನಾತ್ಮಕವಾಗಿ ಒಂದು ಅನುಕೂಲವೇ ಆಗಿತ್ತು. ಯಾಕೆಂದರೆ, ಅವನಿಗೆ ರೈತರು ಗೊತ್ತಿತ್ತು. ಅವನ ಜಮೀನಿನಲ್ಲಿ ಕೆಲಸ ಮಾಡೋಕೆ ಬರುವ ರೈತರು ಹೇಗೆ ಬದುಕ್ತಾರೆ ಅನ್ನೋದು ಗೊತ್ತಿರುತ್ತಿತ್ತು. ಅವನಿಗೆ ಸೈನ್ಯದ ಜೊತೆಗೆ ಸಂಬಂಧ ಇರುತ್ತಿತ್ತು. ರಾಜನ ಆಸ್ಥಾನದ ಜೊತೆಗೆ ನೌಕರಶಾಹಿಯ ಜೊತೆಗೆ ಸಂಬಂಧ ಇರುತ್ತಿತ್ತು ; ಆದ್ದರಿಂದ ಸಮಾಜದ ಎಲ್ಲ ವರ್ಗಗಳ ಕೇಂದ್ರದಲ್ಲಿ ಜಮೀನುದಾರ ಇರ್ತಾ ಇದ್ದ. ದಾಸ್ತೊವಸ್ಕಿಯಲ್ಲಿ ಸಿಗದಂತಹ ಎಷ್ಟೋ ವಿವರಗಳು ಟಾಲ್‌ಸ್ಟಾಯ್‌ನಲ್ಲಿ ಸಿಗುತ್ತವೆ. ನಮ್ಮ ಹಳ್ಳಿಯ ವೈದಿಕ ಬ್ರಾಹ್ಮಣರಿಗೆ ಅನೇಕ ಅನುಕೂಲತೆಗಳು ಇರ್ತಾ ಇದ್ದವು. ಯಕ್ಷಗಾನದಂತಹ ಆಟದಲ್ಲಿ ಆಟ ಹೇಳಿ ಕೊಡುವವನು, ಭಾಗವತ ಬ್ರಾಹ್ಮಣ ಆಗಿರುತ್ತಾನೆ, ವೇಷ ಹಾಕುವವನು ಕ್ಷೌರಿಕನಾಗಿರುತ್ತಾನೆ. ಹೊಲೆಯರನ್ನು ಬಿಟ್ಟು ಬೇರೆ ಎಲ್ಲ ಜಾತಿಗಳೂ ಒಟ್ಟಿಗೇ ಸೇರುವಂತಹ ವೇದಿಕೆಗಳು ಹಳ್ಳಿಗಳಲ್ಲಿ ಅನೇಕ ಇರುತ್ತವೆ. ಈಗ ನಗರೀಕರಣ ಆಗಿರುವುದರಿಂದ ಇನ್ನೂ ತೊಡಕುಗಳು ಹೆಚ್ಚಾಗಿವೆ. ಒಟ್ಟು ಜೀವನವನ್ನು ನೋಡುವುದರಿಂದ ಅಮೂರ್ತವಾದ ಕೆಲವು ತತ್ವಗಳನ್ನು ಗ್ರಹಿಸುವ, ಪ್ರಕ್ರಿಯೆ ಎಲ್ಲ ಸಾಹಿತ್ಯದ ಪ್ರಕ್ರಿಯೆಯೂ ಅದೇ–ವಿವರಗಳನ್ನೆ ಕೊಡೋದಷ್ಟೆ ಅಲ್ಲ, ಆ ವಿವರಗಳನ್ನೆಲ್ಲ ಅರ್ಥಪೂರ್ಣ ವಿವರಗಳನ್ನಾಗಿ ಮಾಡುವುದು. ವಿವರಗಳು ಜೀವನದ ಕೇಂದ್ರದ ಒಂದು ತತ್ವವನ್ನು ಹೊಳೆಯಿಸುವಂತಹವು ಆಗಿರುತ್ತವೆ. ವಿವರಗಳೇ ಅಮೂರ್ತವಾದ ಜೀವನ ಗ್ರಹಿಕೆಯ ಕ್ರಮವನ್ನ ಹೇಳೋ ಶಕ್ತಿಯನ್ನ ಪಡೆಯಬೇಕಾಗಿತ್ತು.

ಒಬ್ಬ ಪತ್ರಕರ್ತರು, ಇತ್ತೀಚೆಗೆ ನನ್ನನ್ನ ನೋಡ್ಲಿಕ್ಕೆ ಬಂದಿದ್ದರು. ಅರ್ಧ ಗಂಟೆ ಸರ್. ಎಂ. ವಿಶ್ವೇಶ್ವರಯ್ಯನವರನ್ನ ನನ್ನ ಎದುರಿಗೆ ಹೊಗಳಿದರು. ಅವರು ಹೊಗಳ್ತಾ ಇದ್ದ ಹಾಗೇನೇ ನನಗನ್ನಿಸ್ತಿತ್ತು, ನಾನು ಬ್ರಾಹ್ಮಣ ಆಗಿರೋದರಿಂದಲೇ ನನ್ನನ್ನ ಸಂತೋಷ ಪಡಿಸೋಕೆ ಅವರು ವಿಶ್ವೇಶ್ವರಯ್ಯ ಅವರನ್ನು ಹೊಗಳ್ತಾ ಇದಾರೆ ಅನ್ನೋ ಅನುಮಾನ ನನಗೆ ಬಂತು. ಬಂದ ಕೂಡಲೇ, ನನ್ನಲ್ಲಿ ಕೃತಜ್ಞತಾ ಭಾವ ಮೂಡ್ತಾ ಇದ್ದ ಹಾಗೇ ಅವರಿಗೆ ಸಂತೋಷ ಆಗೋದಿಕ್ಕೆ ಯಾವ ಲಿಂಗಾಯತನನ್ನ, ನಾನು ಹೊಗಳಲಿ ಅಂತ ನಾನು ಯೋಚನೆ ಮಾಡೋಕೆ ಶುರು ಮಾಡಿದೆ. ನಾವಿಬ್ಬರೂ ಎಂ. ಎ. ಓದಿರೋರು. ಒಂದೇ ವರ್ಗಕ್ಕೆ ಸೇರಿದೋರು. ನನ್ನಜ್ಜನಿಗೂ ನಮ್ಮೂರ ಪಟೇಲರಿಗೂ ಈ ಸಮಸ್ಯೆಯೇ ಇರಲಿಲ್ಲ. ಇದು ಗೃಹೀತವಾದ ವಿಷಯವಾಗಿಬಿಟ್ಟಿತ್ತು. ಆದ್ದರಿಂದ ಒಂದು ರೀತಿಯ ಮನಸ್ಸಿನ ಕ್ಷೋಭೆ ಇದರಿಂದ ಹುಟ್ಟಿರಲಿಲ್ಲ. ಈಗ ನಾವು ಸಮಾನರು ಎಲ್ಲ ಒಂದೇ ರೀತಿಯ ಬಟ್ಟೆ ಹಾಕ್ಕೋತೀವಿ,

ಹಾಗಿದ್ರೂನೂ ಇದು ಮಾನಸಿಕವಾಗಿ ನಮ್ಮನ್ನು ಕಾಡುವ ಒಂದು ವಿಷಯವಾಗಿ ಬಿಟ್ಟಿದೆ. ಆದ್ದರಿಂದ ನಾವು ನಿಜವಾಗಿ ಹೃತ್ಪೂರ್ವಕವಾಗಿ ಉಳಿದವರ ಜೊತೆ ಒಡನಾಡುತ್ತೇವೆ ಅಂತ ಹೇಳೋಕ್ಕಾಗದೇ ಇರೋ ಹಾಗೆ ಆಗಿಬಿಟ್ಟಿದೆ. ಪ್ರತಿಯೊಬ್ಬನೂ, ಹೊಗಳಲಿಕ್ಕೆ ತನ್ನ ಜಾತಿಯ ಒಬ್ಬನನ್ನು ಇಟ್ಟುಕೊಂಡಿರ್ತಾನೆ. ಎಲ್ಲ ಜಾತಿಯವರೂ ಹೀಗೆ ಇಟ್ಟುಕೊಂಡಿರ್ತಾರೆ. ಯಾಕೆಂದರೆ, ಆಫೀಸುಗಳಲ್ಲಿ ನಾವು ಸೇರಿದಾಗ ನಮಗೊಂದು ಸೌಹಾರ್ದದ ವಾತಾವರಣ ಬೇಕು ಅನ್ನೋದನ್ನ ಕೃತಕವಾಗಿ ನಿರ್ಮಿಸಿಕೊಳ್ಳೋದಕ್ಕೆ ನಾವು ಹೀಗೆ ಮಾಡಿಕೊಂಡಿರ್ತೀವಿ.

ಯಾವ ಕಾರಣಕ್ಕಾಗಿ ಜಾತಿಗಳು ಹುಟ್ಟಿಕೊಂಡವೋ ಆ ಕಾರಣಗಳು ಈಗ ಮಾಯವಾಗಿದಾವೆ. ರಾಜಕೀಯವಾಗಿ ನಮ್ಮ ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳೋದಕ್ಕಾಗಿ, ವೋಟುಗಳಿಗಾಗಿ ನಾವು ಈ ಜಾತಿಗಳನ್ನು ನಾವು ಉಳಿಸ್ಕೊಂಡಿದೀವಿ. ಒಂದು ಕಡೆ ಅದು ಅಪ್ರಯೋಜಕವಾದದ್ದಾಗಿದೆ. ಇನ್ನೊಂದು ಕಡೆ ಅದು ಇನ್ನೂ ಉಳಿದಿದೆ. ಆದ್ದರಿಂದಲೇ ಅದು ನಮ್ಮಲ್ಲಿ ಒಂದು ವಿಧವಾದ ಪಾಪಪ್ರಜ್ಞೆಯಾಗಿ ನಮ್ಮಲ್ಲಿದೆ. ಉತ್ತರ ಭಾರತದ ಕೆಲವು ಲೇಖಕರು ಜಾತಿ ಅನ್ನೋದೇ ಇಲ್ಲ ಅಂತ ತೋರಿಸಿಕೊಳ್ಳೋದಕ್ಕೆ ತಮ್ಮ ಹೆಸರುಗಳನ್ನ ಬದಲಾಯಿಸಿಕೊಂಡುಬಿಟ್ಟಿದ್ದರು. ದೆಹಲಿಯ ಲೇಖಕರು ತಾವು ಯೂರೋಪಿಯನ್ ಲೇಖಕರ ಹಾಗೆ ಕಾಣಬೇಕು ಎನ್ನೊ ಒಂದು ಆಸೆಯಿಂದ ಜಾತಿ ಅನ್ನೊ ಒಂದು ಸಂಗತಿಯೇ ಇಲ್ಲದ ಹಾಗೆ ಬರೆದರು. ನಮ್ಮಲ್ಲಿ ಅಸಂಗತ ನಾಟಕಗಳೆಲ್ಲ ಬಂದವಲ್ಲ ಅವು ಅಂಥ ಒಂದು ಭ್ರಮೆಯಲ್ಲಿ ನಾವು ಒಳಗಾಗಿ ಬರೆದಂಥವು. ಜಾತಿ ಒಂದೇ ಇದೆ ಅಂತ ಭಾವಿಸಿದಾಗ ನಾವು ಮನುಷ್ಯ ಇದಾನೆ ಅನ್ನೋದನ್ನ ಮರೀತೀವಿ. ನಾವೆಲ್ಲ ಬರೀ ಮನುಷ್ಯರು ಅಂತ ತಿಳಿದರೆ, ನಮ್ಮನ್ನು ನಿತ್ಯ ಕಾಡುವಂತಹ, ಬೇಲಿಗಳಾಗಿ ನಮ್ಮನ್ನ ಬಂಧಿಸುವಂತಹ ಸಂಗತಿಗಳನ್ನ ಮರೀತೀವಿ. ಇದು ವಿಚಿತ್ರವಾದದ್ದು. ಒಬ್ಬ ಕಾದಂಬರಿಕಾರನಿಗೆ ಇವೆರಡೂ ಗೊತ್ತಿರಬೇಕು. ಒಬ್ಬ ಮನುಷ್ಯ ಕೇವಲ ಮನುಷ್ಯ ಎನ್ನುವುದು, ಆತ ಕೇವಲ ಮನುಷ್ಯ, ಎಲ್ಲ ಹೊತ್ತಿನಲ್ಲೂ ಆಗಿರಲಾರ ಅನ್ನೋದು. ಇದು Freedom and necessity ಅಂತ ಒಂದು ತತ್ವ ಹೇಳ್ತಾರಲ್ಲ. ಪ್ರತಿಯೊಬ್ಬನಿಗೂ ಸ್ವತಂತ್ರವಾದ ಒಂದು ವಲಯ ಇದೆ, ಮತ್ತು ಅವನ ಅಗತ್ಯಗಳಿಗಾಗಿ ಎಲ್ಲ ಮಿತಿಗಳನ್ನು ಹೊಂದಿರುವ ಇನ್ನೊಂದು ವಲಯ ಇದೆ. ನಮ್ಮಲ್ಲಿ ಈ ಮಿತಿಗಳನ್ನು ಹೊಂದಿರುವ ವಲಯ ಈ ಜಾತಿಗಳದ್ದೇ.

19 ನೇ ಶತಮಾನದ ಕೊನೆಯಲ್ಲಿ ಇಂಗ್ಲೆಂಡ್‌ನಲ್ಲಿ ತನ್ನ ಇಡೀ ಸಮಾಜದ ಒಟ್ಟು ಶಕ್ತಿ ಮತ್ತು ಅದರ ಊನಗಳನ್ನು ಅರ್ಥಮಾಡಿಕೊಳ್ಳೋದಕ್ಕೆ ಮ್ಯಾಥ್ಯೂ ಆರ್ನಾಲ್ಡ್ ವರ್ಗಗಳನ್ನ ಸಾಂಸ್ಕೃತಿಕವಾಗಿ ವಿಭಜನೆ ಮಾಡ್ತಾನೆ. ಶ್ರೀಮಂತ ವರ್ಗ

ವನ್ನ ಅವನು ಬಾರ್ಬೇರಿಯನ್ ಅಂತ ಕರೀತಾನೆ. ಮಧ್ಯಮವರ್ಗವನ್ನ ಫಿಲಿಸ್ಟೈನ್ ಅಂತ ಕರೀತಾನೆ. ಕೂಲೀಕಾರರ ವರ್ಗವನ್ನ ಪಾಪ್ಯುಲೇಸ್ ಅಂದ. ಈ ಬಾರ್‌ಬೇರಿಯನ್ಸ್‌ಗೆ ತುಂಬಾ ಸಭ್ಯ ನಡವಳಿಕೆ ಇರುತ್ತೆ. ಆದರೆ ಅವರ ಗಮನ ಎಲ್ಲ ಮನಸ್ಸಿನ ಕಡೆ ಅಲ್ಲ ; ಮನುಷ್ಯನ ಆತ್ಮದ ಉದ್ಧಾರದ ಕಡೆ ಅಲ್ಲ, ಒಳ್ಳೆ ದೈಹಿಕ ಬೆಳವಣಿಗೆ, ಒಳ್ಳೇ ಊಟ, ಒಳ್ಳೇ ನಡತೆ...ಇಂಥ ಕಡೆ ಮಾತ್ರ. ಆದ್ದರಿಂದ ಅವರು ದೇಶವನ್ನ ಆಳೋದಕ್ಕೆ ಅರ್ಹರಲ್ಲ ಅಂದ. ಹಾಗೇ ಮಧ್ಯಮ ವರ್ಗಕ್ಕೆ ಸಂಪಾದನೆ ಕಡೆ ಮಾತ್ರ ಗಮನ, ಪುಣ್ಯ ಸಂಪಾದನೆ ಮತ್ತು ಧನ ಸಂಪಾದನೆ. ತುಂಬಾ ಧಾರ್ಮಿಕರಾಗಿ, ನೈತಿಕವಾಗಿ ನಿಷ್ಠರಾಗಿ ಬದುಕೋದು. ಹೀಗೆ ನಿಷ್ಠರಾಗಿ ಬದುಕೋದು ಯಾಕೆಂದರೆ ತಮ್ಮ ಸಂಪಾಧನೆಯನ್ನ ಹೆಚ್ಚು ಮಾಡಿಕೊಳ್ಳೋದಿಕ್ಕೋಸ್ಕರ. ಆದ್ದರಿಂದ ಧಾರ್ಮಿಕ ನಿಷ್ಠೆಗೆ ಮತ್ತು ಧನಸಂಪಾದನೆಗೆ ಸಂಬಂಧ ಇತ್ತು. ಆದ್ದರಿಂದಲೇ ಅಮೆರಿಕವನ್ನು ಕಟ್ಟೋಕೆ ಸಾಧ್ಯ ಆಯಿತು. ಅವರಿಗೂ ಕೂಡ ಮನುಷ್ಯನ ಆತ್ಮದ ಬೆಳವಣಿಗೆಯಕಡೆ ನಿಜವಾದ ಗಮನ ಇಲ್ಲ. ಕೂಲಿಕಾರ ವರ್ಗ (Populace) ಇವರಿಗೆ ಸಮಾಜದಲ್ಲಿ ಯಾವ ಅನುಕೂಲತೆಯೂ (ವಿದ್ಯಾ ಅನುಕೂಲತೆ ಇತ್ಯಾದಿ) ಇಲ್ಲದ ಕಾರಣ ಇವರು ಮುಂದೆ ಬರೋಕೆ ಆಗಲೇ ಇಲ್ಲ. ಇವರು ಏನು ಆಗಬಹುದು ಅನ್ನೋದನ್ನ ತಿಳಿಯೋದು ಸಹ ಸಾಧ್ಯ ಇಲ್ಲ. ಇವರೊಂದು ಸಾಧ್ಯತೆಯಾಗಿ ಮಾತ್ರ ನಮ್ಮ ಸಮಾಜದಲ್ಲಿ ಇದ್ದಾರೆ. ಸದ್ಯಕ್ಕೆ ಏನು ಮಾಡಬೇಕು ಅಂದರೆ, ಒಂದು ರೀತಿಯ 'ಅನಾರ್ಕಿ' ಬೆಳೆಯದೇ ಇರುವ ಹಾಗೆ ಈ ದೇಶವನ್ನು ಕಾಪಾಡೋಕೆ ತೊಡಗಬೇಕೆಂದರೆ, ಈ ಮೂರು ವರ್ಗಗಳಲ್ಲೂ ಬೆಸ್ಟ್‌ಸೆಲ್ಫ್ ಅಂದರೆ ಅತ್ಯುತ್ತಮ ಜನ ಅಂತ ಇರ್ತಾರೆ. ತಮ್ಮ ವರ್ಗದ ಕೆಲವು ನ್ಯೂನತೆಗಳಿದ್ದರೂ ಅದನ್ನು ದಾಟಿರುವ ಕೆಲ ಮಂದಿ ಇರ್ತಾರೆ, ಇವರೆಲ್ಲ ಒಟ್ಟಾಗಿ ಕೂಡಿದರೆ ದೇಶದಲ್ಲಿರುವ ಅನಾಯಕ ಸ್ಥಿತಿ ಹೋಗಬಹುದು ಅಂತ. ಆಮೇಲೆ ಇಂಗ್ಲೆಂಡ್‌ನಲ್ಲಿ 20 ನೇ ಶತಮಾನದಲ್ಲಿ ಬಂದ ಲಾರೆನ್ಸ್ – ಈ ಮೂರು ರೀತಿಯ ವರ್ಗ ವಿಭಜನೆಯನ್ನು ವಿರೋಧಿಸಿ, ಹೌದು ಈ ಮೂರು ವರ್ಗಗಳು ಇವೆ, ಆದರೆ ಇಡೀ ದೇಶದ ಬಗ್ಗೆ ಮಾನವ ಕುಲದ ಬಗ್ಗೆ ಯೋಚನೆ ಮಾಡುವ ಕೆಲವು ಜನ ಇರ್ತಾರೆ, ಜವಾಬ್ದಾರಿಯುತವಾದ ವರ್ಗ ಅದು– ರೆಸ್ಪಾನ್ಸಿಬಲ್ ಕ್ಲಾಸ್ ಅಂತ ಹೇಳಿದ.

ಭಾರತದಲ್ಲಿ ಎಷ್ಟು ಜಾತಿಗಳಿದ್ದರೂ ಸಹ, ಸ್ವಾತಂತ್ರ್ಯಪೂರ್ವದ ಕಾಲದಲ್ಲಿ ಒಂದು ರೆಸ್ಪಾನ್ಸಿಬಲ್ ಕ್ಲಾಸ್ ಇತ್ತು. ಈ ವರ್ಗದ ಬಹಳ ಜನ, ರಾಜಾರಾಮ್ ಮೋಹನರಾಯ್ ಅವರ ಕಾಲದಲ್ಲಿ, ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಉತ್ತಮ ಜಾತಿಗೆ ಸೇರಿದವರಾಗಿದ್ದರು. ಆದರೆ ಅವರು ತಮ್ಮ ಜಾತಿಯ, ವರ್ಗದ ಬಗ್ಗೆ ಮಾತ್ರ ಯೋಚಿಸದೆ, ಇಡೀ ದೇಶದ ಹಿತದ ಬಗ್ಗೆ ಯೋಚನೆ ಮಾಡ್ತಾ ಇದ್ದರು. ಸ್ವಾತಂತ್ರ್ಯ ಚಳುವಳಿಯ ಕಾಲದ ಬ್ರಾಹ್ಮಣ ನಾಯಕರು ಕೇವಲ ಬ್ರಾಹ್ಮಣರ

ಏಳಿಗೆಯ ಬಗ್ಗೆ ಮಾತ್ರ ಯೋಚನೆ ಮಾಡ್ತಾ ಇದ್ದರು ಅಂತ ಹೇಳೋದು ಕಷ್ಟ. ಅವರು ಇಡೀ ದೇಶದ ಹಿತದ ಬಗ್ಗೆ ಸಹ ಯೋಚನೆ ಮಾಡ್ತಾ ಇದ್ದರು. ಇಂಥ ಜವಾಬ್ದಾರಿ ವರ್ಗ ಇದ್ದಿದ್ದರಿಂದಲೇ ಗಾಂಧೀಜಿಯವರಿಗೆ ದೊಡ್ಡದೊಂದು ಚಳುವಳಿಯನ್ನ ಕಟ್ಟೋಕೆ ಸಾಧ್ಯ ಆಯಿತು.

ಸ್ವಾತಂತ್ರ್ಯ ಬಂದ ನಂತರ ಏನಾಯ್ತು ಅಂದರೆ, ಈ ಜವಾಬ್ದಾರಿ ವರ್ಗ–ಪ್ರಾಯಶಃ ಅದರ ಕೊನೆಯ ಪ್ರತಿನಿಧಿ ಕೃಪಲಾನಿ–ಕ್ರಮೇಣ ಇಲ್ಲವಾಯಿತು. ಒಂದು ವರ್ಗದ ಹಿತದ ಬಗ್ಗೆ ಅಥವಾ ಜಾತಿಯ ಹಿತದ ಬಗ್ಗೆ ಮಾತ್ರ ಯೋಚನೆ ಮಾಡುವ ನಾಯಕತ್ವ ಶುರುವಾಯಿತು. ಅರ್ಧಂಬರ್ಧ ಬೆಳೆದ ದೇಶದಲ್ಲಿ ಕೇವಲ ವರ್ಗ ಹಿತವನ್ನು ಸಾಧಿಸುವುದರಿಂದಲೇ ದೇಶದ ಹಿತವನ್ನ ಸಾಧಿಸೋಕೆ ಆಗೋಲ್ಲ. ಯಾಕೆಂದರೆ, ಕಮ್ಯುನಿಸ್ಟ್ ಪಕ್ಷ ಕಾರ್ಮಿಕ ವರ್ಗದ ಹಿತ ಎಂದರೆ, ಈಗಾಗಲೇ ಸಂಘಟಿತರಾಗಿರುವ ಕಾರ್ಮಿಕ ವರ್ಗದ ಹಿತವನ್ನಷ್ಟೇ ನೋಡುತ್ತದೆ. ಜಾತಿಯ ಹಿತ ಎಂದರೆ, ಈಗಾಗಲೇ ಸಂಘಟಿತರಾಗಿರುವ ಕಾರ್ಮಿಕ ವರ್ಗದ ಹಿತವನ್ನಷ್ಟೇ ನೋಡುತ್ತದೆ. ಜಾತಿಯ ಹಿತ ಅಂದರೆ, ಒಂದೊಂದು ಜಾತಿಯ ಹಿತವಷ್ಟೇ ಆಗಿಬಿಡುತ್ತೆ ಚರಣ್‌ಸಿಂಗ್‌ನಂತಹ ಒಬ್ಬ ನಾಯಕ ಬರ್ತಾನೆ, ಅಥವಾ ಲಿಂಗಾಯತರ ಲೀಡರ್ ಬರ್ತಾನೆ. ಕೊನೆಗೆ ಬ್ರಾಹ್ಮಣರೂ ಕೂಡ ತಮ್ಮ ವರ್ಗದ ಜಾತಿಯ ಹಿತದ ಮಟ್ಟಿಗೆ ಮಾತ್ರ ಯೋಚನೆ ಮಾಡೋವರೆಗೆ ಬಂದರು. ಮೊನ್ನೆ ನಡೆದ ಹವ್ಯಕರ ಸಮ್ಮೇಳನದಲ್ಲಿ ನನಗೆ ಗೊತ್ತಿರೋ ಒಬ್ಬ ಹುಡುಗ–ಅವರ ಗುರುಗಳು ಹವ್ಯಕರನ್ನೂ ಒಂದು ಟ್ರೈಬ್ ಅಂತ ಪರಿಗಣಿಸಿ ಮೀಸಲಾತಿ ಕೊಡಬೇಕೆಂದು ಕೋರಿದ್ದನ್ನ ವಿರೋಧಿಸಿದ. ಹಿಂದೆ ಬ್ರಾಹ್ಮಣರಿಗಿದ್ದ Self Image ಯಾವುದೆಂದರೆ ತಾವು ಇಡೀ ದೇಶದ ಸಂಸ್ಕೃತಿಯ ಬಗ್ಗೆ ಯೋಚನೆ ಮಾಡೋರು, ಭಾರತೀಯ ಸಂಸ್ಕೃತದಲ್ಲಿ ಅತ್ಯುತ್ತಮವಾದದ್ದನ್ನ ಪ್ರತಿನಿಧಿಸೋರು, ತಮಗೆ ಯಾವ ಸ್ವಾರ್ಥವೂ ಇಲ್ಲ ಅನ್ನೋದು....ಈಗ ಆ Self Image ಕೂಡ ಇಲ್ಲ. ಅದು ಹೋಗಿಬಿಟ್ಟಿದೆ; ತಾವೂ ಕೂಡ ಒಂದು ಜಾತಿ, ಎಲ್ಲ ಜಾತಿಗಳ ಹಾಗೆ, ತಮಗೂ ಕೆಲವು ಅನುಕೂಲತೆಗಳು ಬೇಕು ಅಂತ ಕೇಳೋ ಮಟ್ಟಕ್ಕೆ ಬಂದ ಹಾಗೆ ಹಾಗಿದೆ. ಹಿಂದೆ ಒಬ್ಬ ಹಳ್ಳಿಗೌಡ ಅವನು ಪಟೇಲ್ ಆಗಿದ್ದಾನೆ ಅವನು ತಮ್ಮ ಹಳ್ಳಿಯ ಮರ್ಯಾದೆ ಕಾಪಾಡಬೇಕು ಅಂತ ಇರ್ತ ಇದ್ದ. ಹೀಗೆ ಒಂದು Responsible class–ಈಗ ಆಯಾಯಾ ಜಾತಿ ತನ್ನ ಹಿತದ ಬಗ್ಗೆ ಮಾತ್ರ ಯೋಚನೆ ಮಾಡೋಕೆ ಆರಂಭಿಸಿದ ಮೇಲೆ ಅಳಿಸಿ ಹೋಗ್ತಾ ಇದೆ. ತನ್ನ ಮಟ್ಟಿಗೆ ಬದುಕಲಿಕ್ಕೆ ತೊಡಗುತ್ತಿದೆ.

ಒಂದು ಐವತ್ತು ಮಾರ್ಕ್ಸ್ ಅತ್ತ ಕಡೆ ಇತ್ತ ಕಡೆ ಆಗುವ ಸಂದರ್ಭ.... ಸರಕಾರ ಹೇಳಿದ ಹಾಗೆ ಕೇಳಿದರೆ ಒಂದು ಐವತ್ತು ಮಾರ್ಕು ಕಡಿಮೆ ಆಗುತ್ತೆ,

ಚಳುವಳಿಗಾರರು ಹೇಳಿದ ಹಾಗೆ ಕೇಳಿದರೆ ಒಂದು ಐವತ್ತು ವರ್ಷ ಜಾಸ್ತಿ
ಆಗುತ್ತೆ....ಇದಕ್ಕೆ ಈ ದೇಶದಲ್ಲಿ ಒಂದು ದೊಡ್ಡ ಆಂದೋಲನ ನಡೀತಾ ಇದೆ....
ಇಡೀ ಊರು ಊರು ಹರಿಜನರನ್ನ ಸುಡ್ತಾ ಇದ್ರೂನೂ ಅಂಥ ಒಂದು ಪಾಪ್ಯು
ಲರ್ ಆಂದೋಲನ ನಡೆಯೋದಿಲ್ಲ. ಇದು ಈ ದೇಶದಲ್ಲಿ ಯಾಕೆ ಹೀಗಾಯಿತು
ಅಂತ ಯೋಚನೆ ಮಾಡಿದರೆ....ಈ ಕನ್ನಡಕ್ಕಾಗಿ ನಡೀತಾ ಇರುವ ಆಂದೋಲನವು
ಕೂಡ ಒಂದು ಜಾತಿಯ ಹಿತಾಸಕ್ತಿಯ ಮೇಲೆ ಅವಲಂಬಿಸಿರೋದರಿಂದ—ಆ ಜಾತಿ
ತನ್ನ ಮಟ್ಟಿಗೆ ಮಾತ್ರ ಯೋಚನೆ ಮಾಡ್ತಾ ಇದೆ....ತಾನು ಏನಾದ್ರೂ ಮತ್ತೆ ಅಧಿ
ಕಾರಕ್ಕೆ ಬರಬೇಕು ಅಂತ....ಅಂದ್ರೆ ಏನಾಯ್ತು ? ಒಂದು ಜವಾಬ್ದಾರಿಯುತ ವರ್ಗ
ಇವತ್ತು ಇಲ್ಲ. ಒಬ್ಬ ಬ್ರಾಹ್ಮಣನು ಅವನು ತಪ್ಪಾಗಿ ನಡಕೊಂಡ್ರೆ ಏನು ಹೇಳ್ತಾ
ಇದ್ರು ಅಂದ್ರೆ, 'ಏನಯ್ಯಾ ಅವನು ಬ್ರಾಹ್ಮಣನಾಗಿ ಹೀಗೆ ನಡಕೋತಿದಾನೆ' ಅಂತ
ಹೇಳೋದನ್ನ ನಾನು ಅನೇಕ ಸಾರಿ ಕೇಳಿಕೊಂಡಿದ್ದೇನೆ. ಅಂದರೆ, ಬ್ರಾಹ್ಮಣನಾದ
ವನು ಹೀಗೆ ಹೀಗೆ ನ್ಯಾಯವಾಗಿ ನಡಕೋಬೇಕು ಅಂತ....ಅನ್ನೋ ಒಂದು ಕಲ್ಪನೆ
ಇದೆ. ಹಾಗೇನೇ ಅವನೇನು ಗೌಡನೇನೋ ಅನ್ನೋದನ್ನ ನಾನು ಕೇಳಿದ್ದೇನೆ, ಒಬ್ಬ
ಗೌಡನಾದವನು ನಿಷ್ಠೆಯಿಂದ ನಡಕೋಬೇಕು ಇತ್ಯಾದಿ....ಅಂದ ಮೇಲೆ ಇಡಿ
ದೇಶದ, ಇಡೀ ಹಳ್ಳಿಯ ಇಡೀ ಊರಿನ ಜವಾಬ್ದಾರಿಯನ್ನ ಎಲ್ಲ ಜಾತಿಗಳೂ
ಹೊತ್ತಿವೆ ಅನ್ನೋವಿದ್ದಾಗ ಜಾತಿಗೆ ಒಂದು ಸೃಜನಶೀಲವಾದ ಗುಣಗಳಿದ್ದವು.
ಯಾಕೆಂದರೆ ಆಗ ಲಾರೆನ್ಸ್ ಹೇಳಿದ ಒಂದು ಜವಾಬ್ದಾರಿಯುತ ವರ್ಗಕ್ಕೆ ಇವರೆಲ್ಲರೂ
ತಮ್ಮ ತಮ್ಮ ಕೊಡುಗೆಯನ್ನ ಕೊಡ್ತಾ ಇದ್ದರು. ಈಗ ಅಂಥ ಒಂದು ಕ್ಲಾಸ್ ಇಲ್ಲ.
ಯಾವ ಚಳುವಳಿಯ ಹಿಂದೆ ಕೂಡಾನೂ ಯಾವುದೋ ಒಂದು ಜಾತಿಯ ಹಿತವೇ
ಅತ್ಯಂತ ಮುಖ್ಯವಾಗಿ ಅದನ್ನ ಸಾಧಿಸೋದಕ್ಕೇನೆ ಪ್ರಯತ್ನ ನಡೆಯುತ್ತೆ....ಆದ್ದರಿಂದ
ನಮ್ಮ ದೇಶದಲ್ಲಿ ಇಂಥ ಒಂದು ತನ್ನ ಜಾತಿಯ, ವರ್ಗದ ಹಿತವನ್ನೂ ಮೀರಿ
ಒಟ್ಟು ಸಮಾಜದ ಹಿತವನ್ನು ಜವಾಬ್ದಾರಿ ವರ್ಗ ಯಾವಾಗ ಹುಟ್ಟಿಕೊಳ್ಳುತ್ತವೆ ?

ನನಗೆ ಒಂದೊಂದು ಸಾರಿ ಸಾಹಿತಿಗಳು ಇಂತಹ ಜವಾಬ್ದಾರಿ ವರ್ಗವನ್ನ
ನಿರ್ಮಿಸಬಹುದು, ಆ ಜಾಗವನ್ನು ತುಂಬಬಹುದು ಅನ್ನಿಸುತ್ತಿತ್ತು....ಆದರೆ ಸಾಹಿತಿ
ಗಳೂ ಕೂಡ ರಾಜಕಾರಣಿಗಳಾಗಲಿಕ್ಕೆ ತೊಡಗಿದ್ದಾರೆ. ಅಥವಾ ವಿಶ್ವವಿದ್ಯಾಲಯ
ಗಳ ಧೀಮಂತರು ಈ ವರ್ಗವನ್ನು ನಿರ್ಮಿಸಬಹುದು, ಆ ಜಾಗವನ್ನು ನಿರ್ಮಿಸ
ಬಹುದು ಅಂತ ಯೋಚನೆ ಮಾಡಿದೆ....ಯಾಕೆಂದರೆ ಹಿಂದೆ ಅವರೆಲ್ಲ ವಿದ್ಯೆಯ
ಮುಖಾಂತರ ಮೇಲಕ್ಕೆ ಬಂದವರು ತಮ್ಮ ವಿದ್ಯೆಯನ್ನ ಹಾಗೇನೆ ಜನಗಳಿಗೆ ಹಂಚುವ
ಸಾಧ್ಯತೆ ಇದ್ದೇ....ವೇದೋಪನಿಷತ್ತುಗಳಲ್ಲಿದ್ದ ಆದರ್ಶಗಳೆಲ್ಲ ಹಾಗೇನೇ ಪುರಾಣ
ಗಳಲ್ಲಿ ಮೂಡಿ ಬಂತು ಅಂತ ಹೇಳ್ತಾರೆ. ಯಕ್ಷಗಾನದ ಮುಖಾಂತರ, ಕಲೆಯ
ಮುಖಾಂತರ ಪುರಾಣದಲ್ಲಿರುವ ಎಲ್ಲ ನೈತಿಕ ಮೌಲ್ಯಗಳೂ ಜನರನ್ನ ತಲುಪುತ್ತಾ,

ಇತ್ತು. ಅನಕ್ಷರಸ್ತರನ್ನೂ ಕೂಡ ಮುಟ್ಟಬಲ್ಲಂತಹ ತತ್ವ ಇತ್ತು ...ಅದೂ ಹೊರಟು ಹೋಗಿದೆ....ಹಿಂದೆ ಜಾತಿ ಒಳಗೇನೇ ಇದ್ದ ಜವಾಬ್ದಾರಿ ವರ್ಗದ ಅಂಶಗಳು ನಾನೂ ಸಹ ಎಲ್ಲರಿಗೂ ನ್ಯಾಯವಾಗಿ ಜವಾಬ್ದಾರಿಯಿಂದ ನಡಕೋಬೇಕು, ನನಗೂ ಒಂದು ಯಜಮಾನಿಕೆ ಇದೆ ಈ ಯಜಮಾನಿಕೆಯ ಕಾರಣ ನಾನೂ ಜವಾಬ್ದಾರಿ ಹೊಂದಿರುವವನು ಅಂತ...ಈಗ ನಮ್ಮ ಮುಂದಿರುವ ಪ್ರಶ್ನೆ—ಆ ಜಾಗದಲ್ಲಿ ಬರುವ ಗುಂಪು ಯಾವುದು ಅನ್ನೋದು....ನಮ್ಮಲ್ಲಿ ಈಗ ಸದ್ಯಕ್ಕಂತೂ ಈ ವರ್ಗವನ್ನು ತುಂಬ ತಕ್ಕತಂತಹ ಗುಂಪು ಕಾಣುತ್ತಾ ಇಲ್ಲ. ರಾಜಕೀಯ ಪಕ್ಷಗಳೂ ಸಹ ಕೇವಲ Debaters ತರಹ ಕೆಲಸ ಮಾಡ್ತಾ ಇರೋದರಿಂದ ಜವಾಬ್ದಾರೀ ವರ್ಗವಾಗಿ ಕೆಲಸ ಮಾಡ್ತಾ ಇಲ್ಲ ...ಗಾಂಧೀಜಿಯನ್ನ ಹಿಂಬಾಲಿಸಿದ ಸರ್ವೋದಯದಜನ....ಅವರು ಪಕ್ಷದ ಹಿತಕ್ಕಿಂತ ಮುಂದೆ ಯೋಚಿಸಬಲ್ಲವರು. ಅವರೂ ಸಹ ನಿಷ್ಕ್ರಿಯರಾಗಿ ಬಿಟ್ಟಿದ್ದಾರೆ....ಯೂನಿವರ್ಸಿಟಿ ಜನ ಆಧುನೀಕರಣದ ಎಲ್ಲ ಸೌಲಭ್ಯವನ್ನೂ ಹೊಂದಿರುವವರು.—ಅವರು ಇಡಿ ಸಮಾಜದ ಹಿತದ ಬಗ್ಗೆ ಯಾವ ಕಾಳಜಿಯನ್ನೂ ಹೊಂದಿರುವಂತೆ ಕಾಣೋದಿಲ್ಲ...

ಶೂದ್ರಕ್ಕಾಗಿ. ಮೇ ತಿಂಗಳ ಕೊನೆಯ ವಾರದಲ್ಲಿ ಅನಂತಮೂರ್ತಿಯವರಿಗೆ ಪ್ರಸ್ತುತ ವಿಷಯವನ್ನು ಕೊಟ್ಟು ಮಾತಾಡಲು ಕೇಳಿಕೊಂಡೆವು. ಅವರು ಶೂದ್ರದ ಮೇಲಿನ ಅಭಿಮಾನದಿಂದ ಮಾತಾಡಿದರು. ಟೇಪ್ ಮಾಡಿಕೊಂಡಿದ್ದ ಅವರ ಮಾತುಗಳನ್ನು ಲೇಖನ ರೂಪದಲ್ಲಿ ಕೊಡುತ್ತಿದ್ದೇವೆ. ಹಾಗೆಯೇ ಕೊನೆಯ ಮೂರು ಪುಟಗಳಷ್ಟು ಲೇಖನ ರೂಪಕ್ಕೆ ತೆಗೆದುಕೊಳ್ಳಲಾಗಲಿಲ್ಲ. ಕ್ಯಾಸೆಟ್ ಕೈಕೊಟ್ಟ ಕಾರಣ, ಆದ್ದರಿಂದ ಡಾ॥ ಅನಂತಮೂರ್ತಿಯವರ ಮತ್ತು ಓದುಗರ ಕ್ಷಮೆಯನ್ನು ಕೇಳುತ್ತಿದ್ದೇವೆ.

ಸಂ.

ಓ

ಋಜುವಾತು (ತ್ರೈಮಾಸಿಕ)

ಸಾಕ್ಷಿ (ತ್ರೈಮಾಸಿಕ)

ಅಂಕಣ (ದ್ವೈಮಾಸಿಕ)

ರತಿವಿಜ್ಞಾನ (ಮಾಸಿಕ)

ನಮ್ಮ ರಂಗಭೂಮಿ

ಸನ್ನಿವೇಶ : ಒಂದು ವಿಮರ್ಶೆ

—ಡಿ. ಆರ್. ನಾಗರಾಜ್

ಸೂಳೆಯುನ್ನು ಬಂಗಾರ ಹೃದಯದ ಹೆಣ್ಣನ್ನಾಗಿ ಮೆರೆಸುವುದು ತೀರಾ ಸರಳವಾದ ಮತ್ತು ಅಗ್ಗವಾದ ಸ್ಟಂಟ್. ಆಕೆಯ ಜೊತೆ ತಾದ್ಯಾತ್ಮ ಸಾಧಿಸುವುದರಿಂದ ಲೇಖಕ ತನ್ನ ಆತ್ಮ ಮರುಕಕ್ಕೆ ಆಹಾರ ಸಂಪಾದಿಸಿಕೊಳ್ಳುತ್ತಾನೆ. ಆಕೆಯ ಬಗ್ಗೆ ದೊಡ್ಡಸ್ತಿಕೆಯ ಔಧಾರ್ಯವನ್ನು ತೋರುವ ಮೂಲಕ ತನ್ನ ಮಾನವೀಯತೆಯನ್ನು ತಾನೇ ಅಭಿನಂದಿಸಿಕೊಳ್ಳುತ್ತಾನೆ. ಬೀದಿಯಲ್ಲಿ ಬಿದ್ದವಳೊಬ್ಬಳಲ್ಲಿ ನೊಂದ ಮಾಗ್ದಲೀನಳನ್ನು ಕಾಣುವ ಒಳನೋಟ ಆತನದು. ಆಕೆಯ ಬದುಕಿನ ಸನ್ನಿವೇಶಕ್ಕೆ ಸಕ್ಕರೆ ಲೇಪಿಸುವುದರ ಮೂಲಕ, ಭಾವುಕತೆಯ ಬಟ್ಟೆತೊಡಿಸುವುದರ ಮೂಲಕ ಫ್ರೆಂಚ್ ಟೂರಿಸ್ಟ್ ಇಲಾಖೆ ಆದನ್ನು ಮುಂದುವರಿಸುವಂತೆ ಈತನೂ ಮುಂದುವರಿಸುತ್ತಾನೆ. ಇಲ್ಲೆಲ್ಲಾ ಒಂದು ಬಗೆಯ ಪರಿಪೂರ್ಣತೆ ಇದೆ. ಈ ರೀತಿಯ ಪೇಟ್ರನೇಜ್ ತೋರಿಸುವ ಮೂಲಕ ಉದಾರವಾದಿ ಒಂದು ಬಗೆಯ ನೈತಿಕ ಹಕ್ಕು ಹುಡುಕಿಕೊಂಡಿದ್ದಾನೆ... ಮತ್ತು ಆಕೆಯ ಸಂಕಷ್ಟವನ್ನು ಗಮನಿಸಿದ ಬಗ್ಗೆ ತನ್ನ ಬಗ್ಗೆ ಪ್ರಶಂಸಿಸಿಕೊಳ್ಳುತ್ತಾ ಸೂಳೆಯನ್ನು ಸಂಭೋಗಿಸುತ್ತಲೇ ಇರುತ್ತಾನೆ.

–'ದಿ ಪ್ರಾಸ್ಟಿಸ್ಟ್ಯೂಷನ್ ಪೇಪರ್ಸ್'ಕೃತಿಯಲ್ಲಿ
ಒಬ್ಬ ಸೂಳೆಯ ಮಾತು. [ಲೇ : ಕೇಟ್ ಮಿಲೆಟ್]

1

ಹಾಗೆ ನೋಡಿದರೆ, ಈ ನಾಟಕದ ಮೊದಲ ಕೆಲವು ನಿಮಿಷಗಳು ಆಶಾದಾಯಕವಾಗಿಯೇ ಇತ್ತು. ರಾತ್ರಿಯಲ್ಲಿ ಇಬ್ಬರು ಪೋಲಿ ಗಿರಾಕಿಗಳ ಕೈಯಿಂದ ಸಾರ್ವಜನಿಕ ಸ್ಥಳವೊಂದರಲ್ಲಿ ಬೀದಿ ಸೂಳೆಯರಂತೆ ಕಾಣುವ ಬೇಬಿ ತಪ್ಪಿಸಿಕೊಂಡು ಓಡುವುದರಿಂದ ನಾಟಕ ಶಕ್ತವಾಗಿಯೇ ಪ್ರಾರಂಭವಾದರೂ ಕೆಲವು ನಿಮಿಷಗಳಲ್ಲಿ ತನಗೆ ಮಾರಕವಾದ ಸ್ವಯಂ ವಿರೋಧವೊಂದನ್ನು ಸೃಷ್ಟಿಸಿಕೊಳ್ಳುತ್ತದೆ. ಮುಂದೆ ಅವಳು ದಿಢೀರನೆ ಮನೆ ಸೂಳೆಯ ಹಾಗೆ ಕಾಣಿಸಿಕೊಂಡು ನಾಟಕದ ಪಾತ್ರರಚನೆ,

ರಚನೆ : ವೈಕುಂಠರಾಜು.
ಪ್ರಯೋಗ : ರಂಗಸಂಪದ. ನಿರ್ದೇಶನ : ವೈಕುಂಠರಾಜು, ಕೃಷ್ಣಸ್ವಾಮಿ. ದಿನಾಂಕ : ಜೂನ್ 6.

ಬಂಧದ ಗಟ್ಟಿತನದ ಬಗ್ಗೆ ಸಂಶಯ ಮೂಡಿಸಿಬಿಡುತ್ತಾಳೆ. ಅತ್ಯಂತ ಸಣ್ಣ ವಿವರಗಳು ಕೂಡಾ ತೀರಾ ಮುಖ್ಯವಾಗುವ ನಾಟಕ ಪ್ರಕಾರದ ಈ ಕೃತಿಯಲ್ಲಿ ಈ ಸಣ್ಣ ದೋಷ ಮುಂದೆ ಪ್ರೇಕ್ಷಕನಿಗೆ ಸಿಗುವ ಅನುಭವಕ್ಕೆ ಸ್ಯಾಂಪಲ್ ಅಷ್ಟೆ.

2

ಬಾಧೆ, ಪಾತ್ರರಚನೆ, ವಸ್ತು–ಈ ಮೂರೂ ಕ್ಷೇತ್ರಗಳಲ್ಲಿ ನಾಟಕಕ್ಕೆ ಅನೇಕ ಸಮಸ್ಯೆಗಳು ಕಾಡಿವೆ. ಈ ಮೂರೂ ಒಂದೇ ದ್ರವ್ಯದಿಂದ ರೂಪುಗೊಳ್ಳುತ್ತವೆ ಎಂಬುದನ್ನು ಬೇರೆ ವಿವರಿಸುವ ಅಗತ್ಯವಿಲ್ಲ ಎಂದುಕೊಂಡಿರುವೆ.

ಇದರ ವಿವರಣೆಗೆ ಬೇಬಿ ಪಾತ್ರದಿಂದಲೇ ಪ್ರಾರಂಭಿಸಬಹುದು. ಈ ವಿವರಣೆಗೆ ತನ್ನ ತಾರ್ಕಿಕ ಕೊನೆಯಲ್ಲಿ ನಾಟಕ ಬಂಧದ ಪ್ರಮುಖ ದೋಷದ ವಿವರಣೆಯೂ ಆಗುತ್ತದೆ. ವೈಕುಂಠರಾಜು ಅವರ ಪ್ರತಿಭೆಯ ದೊಡ್ಡ ದೌರ್ಬಲ್ಯಗಳು ತೀವ್ರವಾಗಿ ವ್ಯಕ್ತವಾಗಿರುವುದು ಇಲ್ಲಿಯೇ. ಈಕೆ ತುಂಬ ಸೂಕ್ಷ್ಮಮತಿಯಾದ, ಅಷ್ಟಿಷ್ಟು ಓದಿಕೊಂಡಿರುವ ಹುಡುಗಿ. ತುಂಬ ಚುರುಕಾಗಿ ಮಾತನಾಡುವ ಹುಡುಗಿ, ಈ ನಾಟಕದ ಇನ್ನೊಂದು ಮುಖ್ಯ ಪಾತ್ರವಾದ ಪತ್ರಕರ್ತ ಈಕೆಯನ್ನು ಮದುವೆಯಾಗುತ್ತಾನೆ; ಹಣ ಕೊಟ್ಟು ಕೊಂಡು ಮದುವೆಯಾಗುತ್ತಾನೆ. ನಾಟಕದ ತಾತ್ವಿಕತೆ ಮತ್ತು ಶಿಲ್ಪದ ದೃಷ್ಟಿಯಿಂದ ಅತ್ಯಂತ ನಿರ್ಣಾಯಕವಾದ ಭಾಗ ಇದು.

ಸೂಳೆಯ ಬದುಕಿನ ಅತ್ಯಂತ ಕ್ರೂರ ಸತ್ಯ ಎಂದರೆ ಆಕೆಯೊಂದು ವಸ್ತು ಎನ್ನುವುದು. ಅವರ ಪ್ರಜ್ಞೆಯ ಮೂಲಭೂತ ಸ್ಥಿತಿ ಎಂದರೆ ತಾವು ಮಾರಾಟದ ಸರಕು ಎಂಬುದು. ಆದ್ದರಿಂದಲೇ ಆಕೆಯ ದೇಹವನ್ನು ಕೊಳ್ಳುವವನು ಆಕೆಯ ಮೇಲೆ ನಿರ್ದಿಷ್ಟ ಕಾಲಕ್ಕೆ ಸಂಪೂರ್ಣ ಅಧಿಕಾರವನ್ನು ಕೊಂಡಿರುತ್ತಾನೆ. ಇಲ್ಲಿ ಮುಖ್ಯವಾದದ್ದೆಂದರೆ ಅಧಿಕಾರವೇ. ಇಲ್ಲಿಯ ತನಕ ಬುದ್ಧಿವಂತ ಹುಡುಗಿಯಾಗಿ ಕಾಣಿಸಿಕೊಂಡಿರುವ ಬೇಬಿಗೆ ಇಷ್ಟು ಅರ್ಥವಾಗಿಯೇ ಇರುತ್ತದೆ ಎಂದು ನಿರೀಕ್ಷಿಸುವುದು ಸಹಜ. ಅದು ಸೂಳೆಯ ಬದುಕಿನ ಮೂಲಭೂತ ಅರಿವು. ಇಲ್ಲಿ ಆಕೆಯ ದೃಷ್ಟಿಕೋನದಿಂದಲೇ ಪತ್ರಕರ್ತ 'ಕೊಂಡು' 'ಮದುವೆ'ಯಾದ ಸಂಗತಿಯನ್ನು ನೋಡಿದರೆ ಯಾವ ಅಂಶ ಹೊರಬೀಳುತ್ತದೆ? ಚರಾಸ್ತಿಯಾಗಿದ್ದ ಈಕೆ ಪತ್ರಕರ್ತನ ಸ್ಥಿರಾಸ್ತಿಯಾದಳು. ಬರೀ ಅಧಿಕಾರ ವರ್ಗಾವಣೆ. ಇದು ಸ್ವಾತಂತ್ರ್ಯಹೀನ ಸ್ಥಿತಿಯ ಇನ್ನೊಂದು ರೂಪ. ಆದ್ದರಿಂದ ಇಲ್ಲಿ ಆ ಬುದ್ಧಿವಂತೆಗೆ ತನ್ನ ಸ್ಥಿತಿಯ ಬಗ್ಗೆ ಅರಿವು ಇರಲೇಬೇಕು. ಅವರಿಬ್ಬರ ನಡುವೆ ಮೊದಲು ಪ್ರೇಮವೂ ಇಲ್ಲವಾದ್ದರಿಂದ, ಇಲ್ಲಿ ಆಕೆಗೆ ಸುಂದರ ಬದುಕಿನ ಯಾವ ಭ್ರಮೆಗಳೂ ಇರುವ ಸಾಧ್ಯತೆ ಇಲ್ಲ.

ಇಂಥ ಸ್ಪಷ್ಟ ಆಸ್ತಿ ವ್ಯವಹಾರದ ನಂತರವೂ ಅವರಿಬ್ಬರ ನಡುವೆ ಮಧುರವಾದ ಪ್ರೇಮದ ಕ್ಷಣಗಳು ಅರಳಬಲ್ಲವು ಎಂದು ನಂಬುವಷ್ಟು ದಡ್ಡತನ ವೈಕುಂಠರಾಜು ಅವರದು. ಅವರು ಹಾಗಿರಲಿ, ಪ್ರಜ್ಞೆಯನ್ನು ಪರಿಸರ ರೂಪಿಸುತ್ತದೆ ಎಂದು ನಂಬುವ ಮಾರ್ಕ್ಸ್‌ವಾದದ ವ್ಯಕ್ತಿಯಾದ ಕೃಷ್ಣಸ್ವಾಮಿ ಕೂಡಾ ಈ ಸುಳ್ಳನ್ನು ನಂಬಿ ಬಿಡುತ್ತಾರೆ. ಸರಿ, ರಂಗದ ಮೇಲೆ ಹಿಂದೀ ಸಿನೆಮಾ ಬೀರಿಸುವ ರೊಮ್ಯಾಂಟಿಕ್ ದೃಶ್ಯಗಳು ವಿಜೃಂಭಿಸತೊಡಗುತ್ತವೆ. ಇಲ್ಲಿಯ ನೆಳಲು ಬೆಳಕಿನಾಟದಲ್ಲಿ ಕಂಡದ್ದೇ ನೆಂದರೆ ನಾಟಕ ಮತ್ತು ನಿರ್ದೇಶಕರುಗಳ ಅಶಿಸ್ತಿನ ನಿರ್ವಹಣೆ ; ನಾಟಕದ ಚೂರಾಗುವಿಕೆ.

3

ನಾಟಕದ ಶಿಲ್ಪಕ್ಕೆ ಕಾಡಿರುವ ಇನ್ನಷ್ಟು ಸಮಸ್ಯೆಗಳ ಪರಿಚಯವಾಗಬೇಕಾದರೆ, ಈ ಕೃತಿಯ ಮೂಲ ಶೈಲಿಯನ್ನೇ ವಿಶ್ಲೇಷಿಸಬೇಕಾಗುತ್ತದೆ. ಈ ನಾಟಕದ ಬಹುಭಾಗ ಮೇಲುನೋಟಕ್ಕೆ ವಾಸ್ತವವಾದೀ ಮಾರ್ಗದಲ್ಲಿದೆ. ಆದರೆ ವಾಸ್ತವವಾದ ವಾಸ್ತವ ವಾದೀ ಮಾರ್ಗದ ಪ್ರಮುಖ ಸತ್ವಾಂಶಗಳು ಇಲ್ಲಿ ಕಾಣೆಯಾಗಿವೆ. ಸೃಷ್ಟಿಸುವ ಪಾತ್ರಗಳ ಹಿಂದೆ ಸಾಮಾಜಿಕ ಸತ್ವವಿರುತ್ತದೆ. ಲೇಖಕನ ವೈಯುಕ್ತಿಕ ತೆವಲು ಗಳು ಹಿಂದೆ ಸರಿದು ಆ ಕೃತಿಯ ಸಮಗ್ರ ಅನುಭವದಲ್ಲಿ ಸಾಮಾಜಿಕ ಸತ್ಯವೇ ಪ್ರಧಾನವಾಗಿರುತ್ತದೆ. ನಿರ್ದಿಷ್ಟ ಸಾಮಾಜಿಕ ಅನುಭವಗಳ ಕ್ರೋಢೀಕರಣ ಅಲ್ಲಿ ನಡೆದಿರುತ್ತದೆ. ಗಾರ್ಕಿ ಇದನ್ನೆ 'ಟೈಪ್' ಎಂದು ಕರೆಯುವುದು. ಅಂದರೆ, ಮಹತ್ವದ ವಾಸ್ತವವಾದೀ ಕೃತಿಗಳಲ್ಲಿ ವೈಯುಕ್ತಿಕ ಮತ್ತು ಸಾಮಾಜಿಕ ಸತ್ಯಗಳೆರಡೂ ಅಖಂಡವಾಗಿ ಮಿಳಿತವಾಗಿರುತ್ತದೆ. ವೈಯುಕ್ತಿಕಾಂಶ ಆ ಪಾತ್ರಕ್ಕೆ ವಿಶಿಷ್ಟವಾದುದು ಎಂದು ನಾವು ಕೈ ಬಿಟ್ಟರೂ ಅದರ ಸಾಮಾಜಿಕ ಸತ್ಯ ಮಾತ್ರ ತೀವ್ರ ಪ್ರಖರತೆಯಿಂದ ಕೂಡಿರುತ್ತದೆ. ಈ ಕಾರಣಕ್ಕಾಗಿಯೇ, ಶ್ರೇಷ್ಟ ವಾಸ್ತವವಾದೀ ಕೃತಿಗಳಲ್ಲಿ ಬರೀ ಮಾನವತೆಯೇ ತುಂಬಿ ಹೋದ ಜಮೀನ್ದಾರ ಕಾಣುವುದಿಲ್ಲ ; ಪೂರಾ ಕರುಣಾಮೂರ್ತಿ ಯಾದ ಮಾಲಿಕ ಕಾಣುವುದಿಲ್ಲ. ಈ ಎಲ್ಲ ಅಂಶಗಳು ಸಂಕೀರ್ಣ ಸೃಷ್ಟಿಯಾದ ವ್ಯಕ್ತಿಯಲ್ಲಿ ಇದ್ದರೂ, ಹೊರ ಜಗತ್ತಿನಲ್ಲಿ ಕಾಣುವ ಸರಳ ಸತ್ಯಗಳನ್ನು ಅವು ಸಮರ್ಥಿ ಸುತ್ತವೆ. ಈ ಕಾರಣದಿಂದಾಗಿಯೇ, 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿಯ ಜಮೀನ್ದಾರ ಗೌಡರಲ್ಲಿ ಮೇಲಿನ ಎಲ್ಲ ಗುಣಗಳು ತುಂಬಿದ್ದರೂ, ಅವರ ಕ್ರೌರ್ಯದ ಸಾಮಾಜಿಕ ಸತ್ಯ ಮರೆಯಾಗುವುದಿಲ್ಲ. ಅವರ ಬಾರುಕೋಲುಗಳು ಅಲ್ಲಿ ಮೆರೆಯು ತ್ತಲೇ ಇರುತ್ತವೆ. ಚೆಕೋವ್‌ನ ನಾಟಕಗಳು ಈ ರೀತಿಯ ಅಭಿವ್ಯಕ್ತಿಗೆ ಸ್ಪಷ್ಟ ಸಾಕ್ಷಿ. 'ಚೆರಿ ಆರ್ಚರ್ಡ್' ನಾಟಕದಲ್ಲಿ ಹೊಸ ಶ್ರೀಮಂತವರ್ಗದ ಪ್ರತಿನಿಧಿ ಸಹಜವಾಗಿ ಒರಟಾಗಿಯೇ ಇರುತ್ತಾನೆ. ಹಳೆಯ ವ್ಯವಸ್ಥೆಯ ಪ್ರತಿನಿಧಿ ತಮ್ಮೆಲ್ಲ ಸೂಕ್ಷ್ಮತನ ಗಳೊಂದಿಗೆಯೂ ಹಾರುವ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಇಷ್ಟೆಲ್ಲ ಹೇಳಿದ

ಕಾರಣವೆಂದರೆ, ವಾಸ್ತವವಾದಿಮಾರ್ಗದ ಕೃತಿಗಳು ಆಳದಲ್ಲಿ ಸ್ಥೂಲಸಾಮಾಜಿಕ ಸತ್ಯಗಳನ್ನು ಸಮರ್ಥಿಸುತ್ತಲೇ ಇರಬೇಕು. ಅದರ ಪ್ರಾತಿನಿಧಿಕ ಗುಣದ ಕಾರಣಕ್ಕಾಗಿಯೇ ಈ ಮಾರ್ಗ ಯಶಸ್ಸು ಸಾಧಿಸಿದೆ. ಈ ಮಾರ್ಗದ ಅತ್ಯಂತ ದೊಡ್ಡ ಅಪಾಯ ಕೂಡಾ ಇಲ್ಲೇ ಇದೆ. ವ್ಯಕ್ತಿ ವಿಶಿಷ್ಟತೆ ಇಲ್ಲದೆ ಬರೀ ಸರಾಸರಿ ಪಾತ್ರಗಳ ಕಥನವಾಗಿ ಕೃತಿಯೊಂದು ಮುಗಿದು ಹೋಗಿಬಿಟ್ಟರೆ, ಆ ಮಾರ್ಗದ ಸಾವಿರುವುದು ಅಲ್ಲೇ.

ಈ ದೃಷ್ಟಿಯಿಂದ, 'ಸನ್ನಿವೇಶ' ವಾಸ್ತವವಾದಿ ಮಾರ್ಗದ ಗುಣಗಳನ್ನು ಹೊಂದಿಲ್ಲ. ಸ್ಪಷ್ಟ ಉದಾಹರಣೆ ಎಂದರೆ, ಈ ಕೃತಿಯ ತಲೆ ಹಿಡುಕನ ಪಾತ್ರ. ಈ ಪಾತ್ರದಲ್ಲಿ ಸಾಮಾಜಿಕ ಸತ್ಯಪೂರ್ಣವಾಗಿ ಗೈರುಹಾಜರಾಗಿದೆ. ವಾಸ್ತವವಾಗಿ ತಲೆಹಿಡುಕ ಮತ್ತು ಸೂಳೆಯ ನಡುವಿನ ಸಂಬಂಧ ಹೊರಜಗತ್ತಿನ ಒಂದು ಸಣ್ಣ ಪ್ರತಿಮೆ. ಹಿಂಸೆ, ಕಿರುಕುಳ, ಶೋಷಣೆ, ಸೂಳೆಯೊಂದು ಸರಕು ಎಂಬ ಪ್ರಜ್ಞೆ— ಇಲ್ಲಿಯ ಸತ್ಯಗಳು. ನಾನು ಈ ಲೇಖನಕ್ಕೆ ಮುಕ್ತಕವಾಗಿ ಕೊಟ್ಟಿರುವ ಸಾಲುಗಳನ್ನು ಹೇಳಿದ ಹೆಂಗಸು ಆ ಪುಸ್ತಕದಲ್ಲಿ ತಲೆ ಹಿಡುಕರ ಪಾತ್ರವನ್ನು ವಿಸ್ತಾರವಾಗಿ ಚರ್ಚಿಸುತ್ತಾಳೆ. ಇಲ್ಲಿಯ ಒಂದು ಸ್ಪಷ್ಟ ಸತ್ಯವೆಂದರೆ, ಹೊರಗಿನ ದಬ್ಬಾಳಿಕೆಯ ಜಗತ್ತಿನ ಒಂದು ರೂಪ ಈ ತಲೆ ಹಿಡುಕ ಎಂಬುದು. ನನ್ನ ಈ ಪುಸ್ತಕ ಜ್ಞಾನಕ್ಕೆ ನೂರಾರು ಜನ ಬೆಂಗಳೂರಿನ ಸೂಳೆಯರನ್ನು ಕುರಿತು ತುಂಬ ಶ್ರದ್ಧೆಯಿಂದ ಅಧ್ಯಯನ ನಡೆಸುತ್ತಿರುವ ಶ್ರೀಮತಿ ಕುಸುಮಾ ಅವರಿಂದ ಸಮರ್ಥನೆ ಸಿಕ್ಕಿತು : ಹೊರಜಗತ್ತಿನ ಕ್ರೌರ್ಯದ ತತ್‌ಕ್ಷಣ ರೂಪ ತಲೆ ಹಿಡುಕ ಎಂಬುದು ಅವರ ಅಭಿಪ್ರಾಯ ಕೂಡಾ.

ಆದರೆ, 'ಸನ್ನಿವೇಶ'ದಲ್ಲಿ ಬರುವ ತಲೆಹಿಡುಕನ ಪಾತ್ರಕ್ಕೆ ಪೂರ್ತಿ ಸಕ್ಕರೆಯನ್ನು ಸವರಲಾಗಿದೆ. ಅದರಲ್ಲಿ ಒಂದು ಕಡೆ ಆತ ತನ್ನ ಆತ್ಮ ವೃತ್ತಾಂತವನ್ನು ಹೇಳುವಾಗಂತೂ ಹಾಸ್ಯಾಸ್ಪದವಾದ ಸನ್ನಿವೇಶ ನಿರ್ಮಾಣವಾಗುತ್ತದೆ. ಪಾತ್ರಗಳ ನಡುವಣ ವ್ಯತ್ಯಾಸ, ಪ್ರಜ್ಞೆಯಲ್ಲಿನ ವಿಶಿಷ್ಟತೆ ಪೂರ್ತಿ ಮಾಯವಾಗಿ ಲೇಖಕರ ತೆಳು ಉದಾರವಾದಿ ಗ್ರಹಿಕೆ ಸೋರಲು ಪ್ರಾರಂಭವಾಗುತ್ತದೆ. ರಾಜ್‌ಕಪೂರ್‌ನ 'ಬಾಬಿ'ಯ ಹಿಂದೆ ಕೆಲಸ ಮಾಡಿರುವ ಮನಸ್ಸು ಇಂಥದೇ. ಇಷ್ಟು ಭಾವುಕವಾಗಿ ಸುಳ್ಳು ಹೇಳುವುದರಿಂದಲೇ ಇದನ್ನು ಬೂರ್ಶ್ವಾ ಕಲೆ ಎನ್ನುವುದು.

ನಾಟಕ ಅರ್ಧದಿಂದಾಚೆಗೆ ಅಲ್ಲಿಯ ತನಕದ ತನ್ನ ವಾಸ್ತವಿಕ ಮಾರ್ಗದಿಂದ ಜಾರಿಬಿಡುತ್ತದೆ. ಮಾಧವರಾವ್, ಮೈಕೊ ಚಂದ್ರು ಅವರ ಪ್ರವೇಶದಿಂದಾಗಿ ಇದು ಪ್ರಾರಂಭ. ಆಗ ನಾಟಕ ಫಾರ್ಸ್ ರೂಪಕ್ಕೆ ಇಳಿದುಬಿಡುತ್ತದೆ. ನಾಟಕದ ಶೈಲಿಯ ಐಕ್ಯತೆ ಮೊದಲ ಬಾರಿಗೆ ನಾಶವಾಗುವುದು ಇಲ್ಲಿಯೇ. ಮುಂದೆ, ಎರಡು

ಪ್ರೈಮ್‌ಗಳು ಬರುತ್ತವೆ. ಪತ್ರಕರ್ತ ಮತ್ತು ನಾಯಕಿಗೆ ಎರಡು ದೀರ್ಘ ದೃಶ್ಯಗಳನ್ನು ಮೌನವಾಗಿ ನರಳಲು ಕೊಡಲಾಗಿದೆ. ದೃಶ್ಯ ಸಂಯೋಜನೆಯ ದೃಷ್ಟಿಯಿಂದ ಸಿನೆಮಾಟಿಕ್ ಆಗಿ ಕಾಣುವ ಈ ನರಳಾಟ ಪ್ರೇಕ್ಷಕರನ್ನು ಕೂಡಾ ನರಳಿಸುತ್ತದೆ. ಈ ಭಾಗಗಳು ಕೂಡಾ ರಿಯಲಿಸ್ಟ್ ಶೈಲಿಗೆ ಧಕ್ಕೆ ತರುತ್ತವೆ

ಉತ್ತರಾರ್ಧದಲ್ಲಿ ನಾಯಕ–ನಾಯಕಿಯರ ಬದುಕಿನಲ್ಲಿಯ ಘರ್ಷಣೆ ರಂಗ ಪ್ರತಿಮೆಯಾಗಿ ಬರುವುದೇ ಇಲ್ಲ. ಬರೀ ಗಾಸಿಪ್ ಆಗಿ ಬರುತ್ತದೆ. ಮುಕ್ತಾಯಕ್ಕಾಗಿ ನಾಟಕ ತಪತಪಿಸಿ ಓಡುತ್ತಿರುವುದು ಸ್ಪಷ್ಟವಾಗುತ್ತದೆ. ಎಂಥವೇ ಘರ್ಷಣೆಯಾದರೂ ರಂಗದ ಮೇಲೆ ಮಾನವೀಯ ಸನ್ನಿವೇಶಗಳಲ್ಲಿ ವಿಕಾಸಗೊಳ್ಳಬೇಕು, ರಂಗ ಪ್ರತಿಮೆಯಾಗಬೇಕು. ಸಮರ್ಥ ವಸ್ತು ಪ್ರತಿರೂಪದ ಕೊರತೆಯಿಂದಾಗಿ ನಾಟಕ ಅನಿವಾರ್ಯವಾಗಿ ಮೌನ ನರಳಾಟಗಳಿಗಾಗಿ ತೆಕ್ಕೆ ಬೀಳುತ್ತದೆ.

ಹೀಗಾಗಿ, ಪ್ರದರ್ಶನದಲ್ಲಿ ಕಾಣುವ ಎರಡು ಮೂರು ರಂಗ ಶೈಲಿಗಳ ಅಸಮರ್ಥ ಮಿಳನದಿಂದಾಗಿ ನಾಟಕ ತನ್ನ ಐಕ್ಯತೆ (ಯೂನಿಟಿ) ಯನ್ನು ಕಳೆದುಕೊಂಡಿತು. ನಾಟಕ ಕಡೆಯ ಭಾಗದಲ್ಲಿ ಮತ್ತೆ ವಾಸ್ತವ ಮಾರ್ಗಕ್ಕೆ ಹೊರಳುವ ಹೊತ್ತಿಗೆ ಪ್ರೇಕ್ಷಕನೂ ಸುಸ್ತಾಗಿರುತ್ತಾನೆ.

ಇಂಥ ಅಸಂಬದ್ಧ ನಾಟಕದಲ್ಲಿ ಸಾಕಷ್ಟು ಮಂದಿ ಒಳ್ಳೆಯ ನಟ, ನಟಿಯರಿದ್ದರು. ಪ್ರದರ್ಶನ ಸರಾಗವಾಗಿ ನಡೆದು ಹೋದದ್ದಕ್ಕೆ ಕಾರಣ ಈ ನಟ ನಟಿಯರೇ. ಸಾಕಷ್ಟು ಕಷ್ಟ ಬಿದ್ದಿರುವ ನಿರ್ದೇಶಕದ್ವಯರ ಶ್ರಮ ನಟರ ನಟನೆಯನ್ನು ಸಮರ್ಥವಾಗಿ ಬಳಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದೆ. ಬೇಬಿಯಾಗಿ ವೈಜಯಂತಿ ಅತ್ಯಂತ ತೀವ್ರ ಅಭಿನಯ ನೀಡಿದರು. ಜೊತೆಗೆ, ವಕೀಲನಾಗಿ ಲೋಕೇಶ್ ಮಧ್ಯಮ ವರ್ಗದ ಗೋಸುಂಬೆತನವನ್ನು ತುಂಬ ಯಶಸ್ವಿಯಾಗಿ ಅಭಿನಯಿಸಿದರು. ನಾಗೇಶ್‌ಕಶ್ಯಪ್, ರಾಮಮೂರ್ತಿ ಚಂದ್ರು, ಮಾಧವರಾವ್, ಮುಂತಾದವರು ತಮ್ಮ ಕೆಲಸವನ್ನು ತುಂಬ ಶ್ರದ್ಧೆಯಿಂದ, ಪ್ರತಿಭೆಯಿಂದ ನಿರ್ವಹಿಸಿದರು. ಕಾಕಾ ಅಂಗಡಿ, ಬಾರ್‌ಗಳ ಸಜ್ಜಿಕೆ ಜಾಣ್ಮೆ ಮತ್ತು ಕುಸುರಿ ಕೆಲಸದಿಂದ ಕೂಡಿತ್ತು. ಆದರೆ ಪತ್ರಕರ್ತ ಮತ್ತು ಬೇಬಿಯ ಮೊದಲ 'ಮನೆ'ಯ ಸೆಟ್‌ನ ರೂಪ ಮಾತ್ರ ತೀರಾ ಅಸ್ಪಷ್ಟವಾಗಿತ್ತು. ಅದರ ಬಗ್ಗೆ ಕೇಳಿದಾಗ 'ಅದು ಸ್ಟ್ರಕ್ಚರಲ್ ಸೆಟ್ ಕಣಯ್ಯ' ಎಂದು ನಿರ್ದೇಶಕ ಕೃಷ್ಣಸ್ವಾಮಿ ಈ ಲೇಖಕನ ಅಜ್ಞಾನವನ್ನು ಸೂಚಿಸಿದರು. ನನಗೆ ಮುಂದೆ ಮಾತೇ ಹೊರಡಲಿಲ್ಲ.

ಇನ್ನೂ ಈ ನಾಟಕದ ಬಗ್ಗೆ ಹೇಳಬೇಕಾದದ್ದು ಬೇಕಾದಷ್ಟಿದೆ. ಆದರೆ ಇಂಥ ನಾಟಕಗಳ ಮೇಲಿನ ವಿಮರ್ಶೆ ಬೆಳೆದಷ್ಟೂ ಭಾರವಾಗುತ್ತ ಹೋಗುತ್ತದೆ ; ಕೊನೆಗೊಂದು ಮಾತು. ಸಾಮಾಜಿಕ ಕಳಕಳಿಯನ್ನು ಹೊಂದಿರುವ ಈ ಕೃತಿಗಿಂತ ಬೇರೆ

ರೀತಿಯಲ್ಲಿ ವೇಶ್ಯೆಯನ್ನು ಚಿತ್ರಿಸುವ ಕೃತಿಗಳು ಏಕೆ ಆಕರ್ಷಕವಾಗಿ ಕಾಣುತ್ತವೆ? ಉದಾ: 'ಎವಿಲ್'ನಂತೆ ಕರಾಳ ಮಾದಕತೆಯನ್ನು ಹೊಂದಿರುವ ಬೋದಿಲೇರ್‌ನ ವೇಶ್ಯೆ ಹಾಗೆ ನೋಡಿದರೆ ಜೋಲಾನ 'ನಾನಾ' ಕೃತಿಯ ಹೆಂಗಸಿಗಿಂತ ಬೋದಿಲೇರ್‌ನ ಕಾವ್ಯದಲ್ಲಿ ಸುಳಿದಾಡುವ ಆ 'ಹಡಗು' ಹೆಚ್ಚು ಉದ್ವೇಗವನ್ನು ಹುಟ್ಟಿಸುತ್ತದೆ. ಸಾಹಿತ್ಯ ಕೃತಿ ಪ್ರತಿಕಾ ಬರವಣಿಗೆಗಿಂತ (ಅದು ಪ್ರಗತಿಪರವೇ ಆಗಿದ್ದರೂ) ಭಿನ್ನವಾದ, ಮೀರಿದ ಗುಣಗಳನ್ನು ಹೊಂದಿರಬೇಕು ಎಂದು ಇದು ಸೂಚಿಸುತ್ತದೆ, ಅಲ್ಲವೆ? ●

ನಾಟ್ಯದರ್ಪಣದ 'ಗುಳ್ಳೆನರಿ'

ಈ ತಂಡದ 'ಮಂಡೂಕ ರಾಜ್ಯ' ಪ್ರಯೋಗವನ್ನು ನೋಡಿ ಮರೆಯುವ ಮುನ್ನ 'ಗುಳ್ಳೆನರಿ' ಯನ್ನು ನೋಡಬೇಕಾಯಿತು. ಪ್ರಹಸನದ ನೆಪದಲ್ಲಿ ಗುಳ್ಳೆನರಿಯನ್ನು ನೋಡಿದರೂ ಸಂತೋಷವನ್ನು ಕೊಡದ ಪ್ರಯೋಗ. ನಗಬೇಕೆಂದೇ ಮನಸ್ಸನ್ನು ತೆರೆದಿಟ್ಟುಕೊಂಡು ಎಷ್ಟು ಸಮಯ ಕೂರಲು ಸಾಧ್ಯ?

ಬೆನ್‌ಜಾನ್‌ಸನ್ ತನ್ನ ನಾಟಕಗಳ ಮೂಲಕ ಪ್ರಹಸನದಲ್ಲಿ ಜೀವ ತುಂಬಿದ. ಆದರೆ ಇವನ 'ವಾಲ್‌ಫೋನ್' ನಾಟಕವನ್ನು ಆಧರಿಸಿ ರಚಿಸಿದ ನಾಟಕ ಎಂದು ಪ್ರಭು ಹೇಳಿಕೊಂಡು ನಿರ್ದೇಶಿಸಿದರೂ ; ಎಲ್ಲೂ ಜೀವನ ಸಂಬಂಧಗಳು ಗಾಢವಾಗದೆ 'ಗುಳ್ಳೆನರಿ' ಯ ಕೂಗನ್ನು ಕೇಳಿದವರಿಗೆ ಆದ ಅನುಭವವೇ ಆಯಿತು. ಬಡಬಡ ಎಂದು ಸಂಭಾಷಣೆಯನ್ನು ವಾಂತಿ ಮಾಡಿಸುವ ಪ್ರಭು, ಹ್ಯಾಮ್ಲೆಟ್‌ನಲ್ಲಿ ಅಥವಾ ಬೆಕೆಟ್‌ನಲ್ಲಿ ನಟನಾಗಿ ಗಂಭೀರನಾದಷ್ಟೇ ತನ್ನ ನಿರ್ದೇಶನದ ಪ್ರಯೋಗದಲ್ಲಿ ಪ್ರಹಸನದ ಹಿಂದೆಯೂ ಜೀವನದ ತುಡಿತ ತೀವ್ರ ರೂಪದಲ್ಲಿರಬೇಕಾಗುತ್ತೆ ಎಂಬುದನ್ನು ಅರಿಯುವುದು ಮುಖ್ಯ. ಈ ದೃಷ್ಟಿಯಿಂದ ಉದ್ಭವ, ಮಂಡೂಕ ರಾಜ್ಯ ಮತ್ತು ಗುಳ್ಳೆನರಿ ಒಂದೇ ಚೌಕಟ್ಟಿನಲ್ಲಿ ನರಳುವ ಪ್ರಯೋಗಗಳು.

ಪ್ರಹಸನಕ್ಕೆ ಬೇಕಾದ ಜೀವನದ ವೈವಿಧ್ಯತೆ ಹುಟ್ಟುವುದು ಅದರ ಅಂತರಾಳದಲ್ಲಿಯೇ ವಿನಹ ಅದರ ಬಾಹ್ಯ ಸ್ವರೂಪದಿಂದ ಅಲ್ಲ ಅಂದುಕೊಂಡಿದ್ದೇನೆ. ಇದರಿಂದ 'ಗುಳ್ಳೆನರಿ' ಎಂಬ ಕುತಂತ್ರಿ, ವ್ಯಕ್ತಿಯ ಸುತ್ತಲೂ ಕೂಗಾಡುವ ಯಾವ ಪಾತ್ರವೂ ಜೀವಂತ ಪಾತ್ರಗಳಲ್ಲ. ಆದರೆ ಆ ಪಾತ್ರಗಳ ಅಭಿನಯಕಾರರು ಜೀವಂತವಾದ್ದರಿಂದ ಸ್ವಲ್ಪ ಮಟ್ಟಿಗೆ ಪೂರ್ತಿ ನೋಡಿಕೊಂಡೇ ಹೋಗೋಣ ಎಂಬ ತಾಳ್ಮೆಗೆ ಕುಮ್ಮಕ್ಕು

ಕೊಟ್ಟಿತು. ಈ ಕುಮ್ಮಕ್ಕಿಗೆ ಮತ್ತೆ ಮತ್ತೆ ಟಾಂಗ್ ಕೊಡುತ್ತಿದ್ದುದೆಂದರೆ ಟಿ. ಎನ್. ನರಸಿಂಹನ್‌ರವರು ವಿಚಿತ್ರ ರೀತಿಯಲ್ಲಿ ಒಂದೇ ಸಮನೆ ಬಾಯಿ ಬಿಡುತ್ತ, ತೇಲು ಗಣ್ಣಿನ ದೃಷ್ಟಿ ಬೀರುತ್ತಿದ್ದುದು. ಆದರೆ ಗುಳ್ಳೇನರಿಯಾಗಿ ಶ್ರೀನಿವಾಸ್, ಕಾಕರಾಯ ನಾಗಿ ಸುಧೀಂದ್ರ ಮತ್ತು ಹದ್ದಪ್ಪನಾಗಿ ರಿಚರ್ಡ್‌ರವರು ಲವಲವಿಕೆಯಿಂದ ಕೂಡಿದ್ದ ರಿಂದ ಸಹಿಸಿಕೊಳ್ಳಲು ಸಾಧ್ಯವಾಯಿತು. ಹಾಗೆಯೇ ಇತ್ತೀಚೆಗೆ ಸಂಗೀತದ ಬಗ್ಗೆ ತಲೆ ಕೆಡಿಸಿಕೊಂಡಿರುವ ಬೆಳಕಿನ ರಾಮಮೂರ್ತಿಯವರು, ಮುದ್ದಣ್ಣ ಎಂಬ ಬಾಲಕ ನಿಗೆ ಬೆಳಕು ನೀಡಲು (ಚೆನ್ನಾಗಿತ್ತು) ಹೇಳಿ ತಾವು 'ಗುಳ್ಳೆನರಿ' ಗೆ ಕೇಳುವ ಸಂಗೀತ ವನ್ನು ಕೊಟ್ಟರು. ಎರಡೂಕಾಲು ಗಂಟೆಯ ಈ ನಾಟಕವನ್ನು ಪ್ರಭು, ಒಂದು ಗಂಟೆಯಲ್ಲಿ ಹೇಳಲು ತೊಡಗಿದ್ದರೆ ಗಿಮಿಕ್ಸ್‌ನ ದಾಳಿಯಿಂದ ಬಿಡುಗಡೆ ಹೊಂದ ಬಹುದಾಗಿತ್ತು. ಒಂದು ಹಂತದಲ್ಲಿ ಇದು ನೀಟಾದ ಪ್ರಯೋಗವಾಗಿತ್ತು.

—ಸಿದ್ಧಾರ್ಥ

ವಿವಾಹಿತರಿಗಾಗಿ 1982 ರ ಜನವರಿಯಲ್ಲಿ ಪ್ರಕಟಣೆ

ಕನ್ನಡದಲ್ಲಿ ಮೊತ್ತ ಮೊದಲ ಬಾರಿಗೆ

ಎನ್. ವಿಶ್ವರೂಪಾಚಾರ್ ಅವರ

ಸಚಿತ್ರ ಲೈಂಗಿಕ ಚಿಕಿತ್ಸಾ ಕೈಪಿಡಿ

ಪ್ರಕಟಣಾ ಪೂರ್ವ ಬೆಲೆ 10-00 ರೂಪಾಯಿ

ಹರೀಶ ಪ್ರಕಾಶನ

86, 6 ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು-10

ಕನಸಿಗೊಂದು ಕಣ್ಣು

ನೆನಪಿಗೆ ಯಾವುದು ಹಳೆಯದು ? ಯಾವುದು ಹೊಸದು?

ಇಪ್ಪತ್ತನೆಯ ಶತಮಾನದ ಕೊನೆಯ ಮೆಟ್ಟಿಲುಗಳ ಮೇಲೆ ಕೂತು ನೂರಾರು ಕನಸುಗಳನ್ನು ಕಟ್ಟಲಂತೂ ಸಾಧ್ಯವಿಲ್ಲ. ಆದರೆ ಕನಸುಗಳನ್ನು ಕಟ್ಟುವ ಕಾಲ ಪ್ರತಿಯೊಬ್ಬ ಮನುಷ್ಯನಲ್ಲಿ ಬಂದು ಹೋಗಬಹುದು. ಏನೂ ಆಗದೆ ಬಂದು ಹೋಗುವ ಇಂಥವು ಎಷ್ಟೋ ಒಂದು ಹಿಂದೆ ಸರಿದಿರುತ್ತವೆ. ನಮ್ಮ ಚಿಕ್ಕಂದಿನ ಯಾವ ನೆನಪೂ ಈಗ ಯಾಕೆ ಖುಷಿ ಕೊಡುವುದಿಲ್ಲ. ಅವು ಯಾಕೆ? ಬಡಿದು ನಮ್ಮೆಲ್ಲ ಪ್ರಜ್ಞೆಯನ್ನ ಚಿಂದಿ ಚಿಂದಿ ಮಾಡಿ ಹೋಗುತ್ತವೆ. ಅದೇ ಆದರ್ಶಗಳು ದಾರಕ್ಕೆ ಮಣಿಗಳನ್ನು ಪೋಣಿಸುವ ಇಲ್ಲವೇ ಒಂದೊಂದೇ ಮೊಗ್ಗನ್ನು ಪೋಣಿಸಿ ಹಾರ ಕಟ್ಟುವ ಸೊಗಸಿನಲ್ಲಿರುವ ಉನ್ಮಾದವನ್ನು ಕಳೆದುಕೊಂಡಿದ್ದೇವೆ ಯಾಕೆ ಎಲ್ಲವೂ ವ್ಯಸ್ತವಾಗಿರುವ ಘಳಿಗೆಗಳಿಗೂ ಅವ್ಯಸ್ತವಾಗಿರುವ ಘಳಿಗೆಗಳಿಗೂ ಮನುಷ್ಯನ ಸಂಬಂಧಗಳು ಪಡೆಯುವ ಒಂದೊಂದು ಅನುಭವವೂ 'ಪ್ರಾಣವಾಯು' ಅಂದುಕೊಂಡರೂ ಸಾಮಾನ್ಯ ವಿಷಯಗಳಿಗೂ ಚಿಲ್ಲರೆಯಾಗುವ ಅವರಿವರ ಪದಗಳನ್ನು ನೆಕ್ಕುವ ಮತ್ತೆ ಕುಡಿದಾಗ ವ್ಯಥೆಯಲ್ಲಿ ಕರಗಿಹೋಗುವ ಜನಾನ ನೋಡುತ್ತ ಬರುವಾಗ ಸಿಟ್ಟಂತೂ ಬರುವುದಿಲ್ಲ. ಆದರೆ ಮತ್ತೆ ಬೆಳಕಾದರೆ ಅದೇ ಮುಖಗಳನ್ನು ನೋಡಿ ನಮಗೆ ನಾಚಿಕೆಯಾಗಬಹುದು. ಇಲ್ಲವೇ, ಅಸಹ್ಯವೆನ್ನಿಸಬಹುದು. ಇದನ್ನೆಲ್ಲ ಮೀರಿದ ಪ್ರೇಮ ಸಂಬಂಧಗಳು ಗಾಢವಾಗಿ ಬೇರೂರಿರುವುದರಿಂದ ಮನುಷ್ಯ ಎಲ್ಲರನ್ನೂ ಕ್ಷಮಿಸಬಲ್ಲ. ಇದು ಯಾಕೆ ಎಂದು ನಾವೆಲ್ಲ ಕೇಳುತ್ತೇವೆ–ಉತ್ತರ ಸಿಗುವುದಿಲ್ಲ.

ಮೊನ್ನೆ ಒಬ್ಬ ಹುಡುಗಿಯನ್ನು (ಈಗ ಹೆಂಗಸಾಗಿದ್ದಾಳೆ) ಬಹಳ ವರ್ಷಗಳ ನಂತರ ಭೇಟಿ ಮಾಡಿದೆ. ಅದೂ ಆಕಸ್ಮಿಕವಾಗಿ, ಯಾವಾಗಲೂ ನಗುನಗುತ್ತಿರುವ ಹುಡುಗಿ. ಇವಳನ್ನು ಕಂಡು ಬಹಳ ಹುಡುಗಿಯರು ಅಸೂಯೆ ಪಟ್ಟುಕೊಳ್ಳಬೇಕಾದ ಹುಡುಗಿ. ಸ್ವಲ್ಪ ಸಮಯ ಏನೂ ಮಾತಾಡಲಾಗಲಿಲ್ಲ. ಅಲ್ಲಿಯೇ ಇದ್ದ ಹೋಟೆಲ್‌ಗೆ ಟೀಗೆ ಕರೆದೆ. ಬಂದಳು. (ಅವಳು ಅಲ್ಲಿಗೂ ಬರುತ್ತಿರಲಿಲ್ಲ. ಆದರೆ ಅವಳ ಗಂಡ ಅಲ್ಲಿಗೆ ಬರುವೆನೆಂದು ಹೇಳಿ ಹೋಗಿದ್ದನಂತೆ) ಸ್ವಾಭಾವಿಕವಾದ ನನ್ನ ಧ್ವನಿಯಲ್ಲಿ ಅವಳ ಬದುಕು ನಡೆಯುತ್ತಿರುವ ರೀತಿಯನ್ನು ಕೇಳಿದೆ. ಅವಳ ಸುಂದರವಾದ ಬೆರಳುಗಳಿಗೆ ಕಪ್ಪು ಮತ್ತು ಸಾಸರ್ ಮಾತಿಗೆ ಮುನ್ನ ಮಾಧ್ಯಮವಾಗಿತ್ತು ಎಂದು

ಕಾಣುತ್ತ, ಒಂದು ಕ್ಷಣ ಬಿಟ್ಟು ತಲೆಯೆತ್ತಿ ನೋಡಿದಳು. "How are you" ಎಂದಳು. ನಾನು ಯಾವಾಗಲೂ ಚೆನ್ನಾಗಿಯೇ ಇರುತ್ತೇನೆ ಎಂದು ಹಿಂದೆ ಹೇಳುತ್ತಿದ್ದ ಮಾತನ್ನು ಈಗ ಹೇಳಲಾಗಲಿಲ್ಲ. ಆದರೆ "ಚೆನ್ನಾಗಿದ್ದೇನೆ," ಅಂದೆ. "ಹಾಗಾದರೆ ನಾನು ಚೆನ್ನಾಗಿದ್ದರೆ ಅಲ್ಲವೇ ?" ಅಂದಾಗ ಮತ್ತೊಮ್ಮೆ ಅವಳ ಮುಖವನ್ನು ದಿಟ್ಟಿಸಿ ನೋಡಿದೆ. ಕಣ್ಣಿನ ಸುತ್ತ ಹೆಪ್ಪುಗಟ್ಟಿದ ಕಪ್ಪು ಮಡುಗಟ್ಟಿದ್ದರೂ, ನಗುವಿಗೆ ಕೊರತೆಯಿರಲಿಲ್ಲ. ಆದರೆ ಕೊರತೆ ಇದ್ದದ್ದು ಆ ನಗುವಿನ ಧ್ವನಿಯಲ್ಲಿ.

ಅವಳು ಚಿಟ್ಟನೆ ಚೀರಲಿಲ್ಲ. ಎಲ್ಲರಿಗೂ ಗೊತ್ತಾಗುವಂತೆ ಅಳಲಿಲ್ಲ. ಬಿಂಕದ ಸಿಂಗಾರಿಯಾಗಿ ಮೂಕವೇದನೆಯನ್ನ ಅನುಭವಿಸುತ್ತಿದ್ದುದರಿಂದ ಕಣ್ಣು ತುಂಬ ನೀರು ತುಂಬಿಕೊಂಡಿದ್ದಳು. ಅವಳ ಗೆಳೆಯ ಅವಳಿಗೆ ಮೋಸ ಮಾಡಿದಾಗ, ಅಂದು ಅವಳನ್ನ ಸಮಾಧಾನ ಪಡಿಸಲು ಫಿಲಂಗೆ ಕರೆದುಕೊಂಡು ಹೋಗಿದ್ದೆ. ಐಸ್‌ಕ್ರೀಮ್ ಕೊಡಿಸಿದ್ದೆ. ರಾತ್ರಿ ಎಂಟು ಗಂಟೆಯ ಸಮಯದಲ್ಲಿ ಎಂ. ಜಿ. ರಸ್ತೆಯಲ್ಲಿ ಗಾಂಧಿ ಪ್ರತಿಮೆಯ ಪಕ್ಕದಲ್ಲಿ ಕೂತು ಸಮಾಧಾನದ ಮಾತು ಹೇಳಿದಾಗ ; ಅವಳು ನಗುತ್ತ ಗಾಂಧಿಯು ಎಷ್ಟು ಜನರಿಗೆ ಸಮಾಧಾನ ಹೇಳಿದ್ದ ಅಲ್ಲವೇ ? ಈಗ ಆ ಮುದುಕ ಇದ್ದಿದ್ದರೆ ಅವನ ಹತ್ತಿರಕ್ಕೆ ಓಡಿಹೋಗುತ್ತಿದ್ದೆ ಅಂದಳು. ನಾನು ನಗುತ್ತ, ನೋಡು ಆ ಪ್ರತಿಮೆಯ ಮೇಲೆ ಪಕ್ಷಿಗಳು ಎಷ್ಟೊಂದು ಹೊಲಸು ಮಾಡಿದೆ. ಹೋಗಿ ಅದನ್ನೆಲ್ಲ ಕ್ಲೀನ್ ಮಾಡು ಅಂದೆ. ಅವಳು ಗಂಭೀರವಾಗಿ ನಮ್ಮ ಜನ ಗಾಂಧಿಯ ಹೆಸರಿನಲ್ಲಿ ಮಾಡುವ ಹೊಲಸನ್ನು ಹೋಗಲಾಡಿಸಲಾಗಿಲ್ಲ ಅಲ್ಲವೇ ಎಂದಾಗ ಅವಳ ಕಣ್ಣಿನ ತುಂಬ ನೀರು ತುಂಬಿತ್ತು.

ಇಂದು ಅಂದಿನ ಸಮಾಧಾನದ ಮಾತು ನನ್ನಿಂದ ಹೊರಡಲಿಲ್ಲ. ಅವಳ ಗಂಡ ಬಂದ. ನನ್ನನ್ನು ಪರಿಚಯ ಮಾಡಿಕೊಟ್ಟಳು. ಆತನನ್ನು ಮದುವೆಯ ದಿವಸ ನೋಡಿದ್ದು. ಮತ್ತೆ ನೋಡಿರಲಿಲ್ಲ. ನಿಮ್ಮ ಶ್ರೀಮತಿಯವರು ಆಕಸ್ಮಿಕವಾಗಿ ಸಿಕ್ಕಿದ್ದರು ಬಸ್ ಸ್ಟಾಪ್‌ನಲ್ಲಿ ಅಂದೆ. ಆತ ನಗುತ್ತ ಹೋಗಲಿ ಬಿಡಿ ನಾನು ಬರುವ ತನಕ ಕಂಪನಿಯಾದರೂ ಕೊಟ್ಟಿದ್ದೀರಿ, ಅದಕ್ಕೆ ನಾನು ನಿಮಗೆ ಥ್ಯಾಂಕ್ಸ್ ಹೇಳಬೇಕು ಅಂದರು. ಆ ಮಾತನ್ನು ಹೇಳುವಾಗ ಆತನ ಮುಖದಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಕಾಣಲು ತೊಡಗಿದ್ದೆ. ಆದರೆ ಅವಳ ಮುಖವನ್ನು ನೋಡಲಾಗಲಿಲ್ಲ. ಹೋಗುವ ಎಂದಳು. ಎದ್ದು ಹೊರಗೆ ಬಂದೆವು. ಅವರು ಹೋಗಿ ಕಾರಿನಲ್ಲಿ ಕೂತರು. ಅವರು ಉಳಿದುಕೊಂಡಿದ್ದ ಲಾಡ್ಜ್‌ಗೆ ನನ್ನನ್ನು ಕರೆಯಲಿಲ್ಲ. ಕಾರು ಚಲಿಸಿತು. ಅವಳು ಟಾ ಟಾ ಮಾಡಲಿಲ್ಲ. ಆದರೆ ಅವಳ ಕಣ್ಣಲ್ಲಿ ತುಂಬಿಕೊಂಡಿದ್ದ ಅವ್ಯಕ್ತ ವೇದನೆ ಯಾರಿಗೂ ಹೇಳಲಾಗದೆ ಈ ನನ್ನ ಖಾಸಗಿ ಪತ್ರದ ಜಾಗ ತುಂಬುತ್ತಿದ್ದೇನೆ ; ಇದು ಒಂದು ದೃಷ್ಟಿಯಿಂದ ಒಳ್ಳೆಯದಿರಬಹುದು ಕೆಟ್ಟದ್ದಿರಬಹುದು.

ಇದರಿಂದ ನನ್ನ ಮನಸ್ಸು ಹಗುರಗೊಳ್ಳುವಂತಿದ್ದರೆ ಬರೆದದ್ದು ಸರಿಯಿರಬಹುದು. ಆದರೂ ಅವಳನ್ನ ನಾನು ಕೇಳಬೇಕಾದ ಪ್ರಶ್ನೆಗಳು ಇನ್ನೂ ಇದ್ದುವು. ಅದು ಅವಳ ಮಕ್ಕಳ ಬಗ್ಗೆ (ಮಕ್ಕಳಾಗಿದ್ದರೆ) ಇರಬಹುದು. ಅಥವಾ ಆ ಗಂಡನ ವೈಯಕ್ತಿಕ ಬದುಕಿನ ಬಗ್ಗೆ ಇರಬಹುದು. ನನ್ನ ಯೋಚನೆಗೆ ತಾತ್ಕಾಲಿಕವಾಗಿ ವಿರಾಮ ಹೇಳಲು ಬಸ್ಸು ಬಂತು.

* * *

ಮೊನ್ನೆ ನನ್ನ ಸ್ನೇಹಿತರ ಮನೆಗೆ ಹೋಗಿ ಬಂದು ಬಸ್ಸಿಗೆ ಕಾಯುತ್ತಿದ್ದೆ. ಯಾವ ಬಸ್ಸನ್ನು ನಿಲ್ಲಿಸದೆ ಓಡಿಸಿಕೊಂಡು ಹೋಗುತ್ತಿದ್ದರು. ನನ್ನ ಹಾಗೆ ಜನ ಕಾಯುತ್ತಲೇ ಇದ್ದರು. ಎಲ್ಲಾ ಹಂತಗಳಲ್ಲೂ ಕಾಯುವುದೇ ಆಗಿರುವುದರಿಂದ ನೋವಿನಿಂದಲೋ ಸಮಾಧಾನದಿಂದಲೋ ಕಾಯುತ್ತಿರುತ್ತಾರೆ. ಈ ರೀತಿಯ ಕಾಯುವ ಸದಸ್ಯರ ಬಳಗಕ್ಕೆ ಸೇರಿಕೊಳ್ಳಲು ಸುಮಾರು ಇಪ್ಪತ್ತೈದು ವರ್ಷದ ಹೆಂಗಸು ಬಂದಳು. (ಆಕೆಯನ್ನ ತರುಣಿಯೆಂದು ಕರೆಯುವುದೇ ವಾಸಿ) ಆಕೆಯ ಕಂಕುಳಲ್ಲಿ ಮುದ್ದಾದ ಮಗುವೊಂದಿತ್ತು. ಜೊತೆಯಲ್ಲಿ ಮೂರು ಪುಟ್ಟಮಕ್ಕಳು, ಯೂನಿಫಾರಂ, ಹೆಗಲಿಗೆ ಒಂದು ಮಣ ಭಾರವಿರುವ ಪುಸ್ತಕಗಳ ಚೀಲ. ಸ್ಟಾಪಿನ ಹತ್ತಿರಕ್ಕೆ ಬಂದ ತಕ್ಷಣ ತಾಯಿಯಾದವಳು "ಹುಷಾರಾಗಿ ಹೋಗಬೇಕಮ್ಮ" ಎಂದಳು ತನ್ನ ತಾಯಿಗೆ ಸಹಜ ವಾದ ಗುಣದಲ್ಲಿ. ಆ ಮಕ್ಕಳು ತಾಯಿಗೆ ಕೈ ಬೀಸಿ ಮುಂದೆ ನಡೆದವು. ಆ ಮಕ್ಕಳು ಸುಮಾರು ಮೂವತ್ತು ಮಾರು ದೂರ ಹೋಗಿರಬಹುದು. ಒಂದು ಮಗು ಹಿಂದಕ್ಕೆ ಅಮ್ಮ ಅಮ್ಮ ಎಂದು ಓಡಿಬಂದಿತು. ಹತ್ತಿರ ಬಂದು ಅಮ್ಮ 'ಪಾಪ'ಗೆ ಒಂದು ಮುತ್ತು ಕೊಡ್ತೀನಮ್ಮ ಅಂದಳು. ಆ ತಾಯಿ ಬೇಡ ಬಿಡು ಮರಿ ಎನ್ನುತ್ತಲೇ ಮಗುವಿನ ಮಟ್ಟಕ್ಕೆ ಬಗ್ಗಿದಾಗ ಅದು ಮುತ್ತು ಕೊಟ್ಟು ಓಡಿತು. ನನಗೆ ಗೊತ್ತಿಲ್ಲದೆ "How nice this is" ಎಂದು ಗೊಣಗುಟ್ಟಿದೆ. ಅಕ್ಕಪಕ್ಕದವರು ಕೇಳಿಸಿ ಕೊಂಡಾರೆಂಬ ಪರಿವೆ ನನಗಿರಲಿಲ್ಲ.

15-7-82 —ಶೂದ್ರ ಶ್ರೀನಿವಾಸ್

ಬೆನಕ-ತಬರನ ಕಥೆ

ತೇಜಸ್ವಿಯವರ ಕಥೆಯ ಸತ್ವವನ್ನು ಕುಗ್ಗಿಸದೆ ರಂಗದ ಮೇಲೆ ತಂದ ನಾಗೇಶ್ ಚೋಮನ ದುಡಿಯ ನಂತರ ಮತ್ತೊಂದು ಉತ್ತಮ ಪ್ರಯೋಗ. ಮೊದಲನೆಯ (ಜುಲೈ 19, 20) ದಿನದಂದು ತುಂಬಿಕೊಂಡಿದ್ದ ಕೊರತೆಯನ್ನು ಎರಡನೆಯ ದಿನದ ಪ್ರದರ್ಶನದಲ್ಲಿ ಸರಿಪಡಿಸಿ ತಬರನ ದುರಂತ ಬದುಕಿನ ಮೇಲೆ ಹೆಚ್ಚು ಒತ್ತು ಬೀಳುವಂತೆ ಮಾಡಿದ್ದರಿಂದ ಒಂದು ಸ್ಮರಣೆಯ ಅನುಭವವನ್ನು ರಂಗದ ಮೇಲೆ ಕಂಡಂತಾಯಿತು.

ಸ್ವಾತಂತ್ರ್ಯೋತ್ತರ ಭಾರತದ ಅಧೋಗತಿಯನ್ನು ತಬರನ ಮೂಲಕ ಇಲ್ಲಿಯ ಅಧಿಕಾರಶಾಹಿ ಮತ್ತು ರಾಜಕೀಯ ವ್ಯವಸ್ಥೆ ತಾಳಿರುವ ಕ್ರೂರ ಸ್ವರೂಪವನ್ನು ಗಂಭೀರವಾಗಿ ಚಿತ್ರಿಸುತ್ತದೆ. ಮುನಿಸಿಪಾಲಿಟಿ ಅಧ್ಯಕ್ಷ ಈರೇಗೌಡ ಭ್ರಷ್ಟತೆಯ ಕೊನೆಯ ಮೆಟ್ಟಿಲು ಮೇಲೆ ನಿಂತು ಪರಿಸರವನ್ನು ಬಳಸುವ ಕ್ರಮ ಮುಂದಿನ ತಲೆಮಾರೂ ನರಳುವಂತೆ ಮಾಡಿಹೋಗುತ್ತಾನೆ. ತಬರನ ದುರಂತಮಯ ಬದುಕಿನ ಘರ್ಷಣೆಯನ್ನು ಅವನ ಹೆಂಡತಿಯ ಸಕ್ಕರೆ ರೋಗದಿಂದ ಆದ ಗಾಯದಿಂದ ತೀವ್ರಗೊಳ್ಳುತ್ತ ಹೋಗುತ್ತದೆ. ಆದರೆ ನೀಚರ ಸುತ್ತಲೂ ಅಧಿಕಾರ ನಡೆಯುತ್ತ ಹೋಗುವುದರಿಂದ ಇಲ್ಲಿಯ ತಬರ, ಬಂಟಪ್ಪ, ಡಾ॥ ಸಿಲ್ವ ಏನೇನೂ ಅಲ್ಲ. ಆದ್ದರಿಂದಲೇ ಇಲ್ಲಿ ಎಲ್ಲವೂ ನಡೆಯುತ್ತದೆ ಎಂಬುದನ್ನು ನಾಗೇಶ್ ರಂಗದ ಮೇಲೆ ಪರಿಣಾಮಕಾರಿಯಾಗಿ ತರುವುದರಲ್ಲಿ ಸೋಲಲಿಲ್ಲ. ತುಂಬ ಸರಳವಾದ ರಂಗಸಜ್ಜಿಕೆಯ ಮೇಲೆ ಒಟ್ಟು ಬದುಕಿನ ಕ್ರೌರ್ಯವನ್ನ ಸಮರ್ಪಕ ಬೆಳಕು ನೀಡುವುದರ ಮೂಲಕ ಚಂಕಂ ಸಿಂಗ್ ತಬರನ ಜೊತೆ ಸೇರಿಕೊಂಡರು.

ತಬರನಾಗಿ ನಾಗಾಭರಣ, ಗೌಡನಾಗಿ ಪೃಥ್ವಿರಾಜ್, ಆಚಾರಿಯಾಗಿ ಮಾಧವ ರಾವ್ ಮತ್ತು ತಹಶೀಲ್‌ದಾರನಾಗಿ ಕೃಷ್ಣಮೂರ್ತಿ ಎದ್ದು ಕಾಣುವಂತಿದ್ದರು. ಈ ನಾಟಕದ ಬಗ್ಗೆ ಹೇಳುವುದು ಎಷ್ಟೇ ಇದ್ದರೂ ರಾಷ್ಟ್ರೀಯ ಧ್ವಜದ ಸುತ್ತ ಮುಖವಾಡಗಳನ್ನು ಹಾಕಿ ಕಾಣಿಸುವುದರ ಮೂಲಕ ನಾಟಕಕ್ಕೆ ಅಂತ್ಯವನ್ನು ಕಾಣಿಸಿರುವ ಕ್ರಮ ಅಚ್ಚುಕಟ್ಟಾಗಿತ್ತು. ಆದರೆ ಶೆಟ್ಟಿಯಂಥ ಪಾತ್ರಗಳಿಗೆ ಅತಿರಂಜಕತೆ ಬೇಕಾಗಿರಲಿಲ್ಲ. ಇದು 'ಬೆನಕ' ದ ಕೊಡುಗೆ.

—ಎಸ್

ಮುಂದಿನ ಸಂಚಿಕೆಯಿಂದ

ಶೂದ್ರ ಶ್ರೀನಿವಾಸರ

'ನೀನಾರಿಗಾದೆಯೋ ಎಲೆಮಾನವ'

(ನಾಟಕ)

ಸೀರಿಯಲೈಸ್ ಮಾಡಲಾಗುವುದು.

ದೇವನೊಬ್ಬ ನಾಮ ಹಲವು

ಧರ್ಮಗಳು ಹಲವಾರು,
ಜಾತಿಗಳು ನೂರಾರು
ಒಂದೇ ಅರ್ಥದ ಬೇರೆ ಬೇರೆ ಶಬ್ದಗಳು
ಒಂದೇ ಗುರಿಗೆ ಬೇರೆ ಬೇರೆ ದಾರಿಗಳು

ಹಿಂದು, ಜೈನ, ಬೌದ್ಧ. ಮುಸ್ಲಿಮ್, ಕ್ರೈಸ್ತ, ಪಾರಸಿ ಧರ್ಮಗಳು ಬೇರೆ ಬೇರೆಯಾದರೂ ಸಮಾಜ ಒಂದೇ—ದೇಶ ಒಂದೇ. ಧರ್ಮದ ದೃಷ್ಟಿಯಲ್ಲಿ ಎಲ್ಲಾ ಜಾತಿ, ಮತ ಸರಿಸಮಾನ. ನಮ್ಮ ಧರ್ಮವು ನಮಗೆ ಪ್ರಿಯವಿದ್ದಷ್ಟೆ, ಇತರರ ಧರ್ಮವು ಅವರವರಿಗೆ ಪ್ರಿಯವಾದದ್ದು. ಒಂದೇ ದೇಶದಲ್ಲಿ, ಒಂದೇ ಸಮಾಜದಲ್ಲಿ ಒಂದು ಧರ್ಮದವರು ಮತ್ತೊಂದು ಧರ್ಮದವರಿಗಿಂತ ಉತ್ತಮರೆಂದು ನಡೆದುಕೊಳ್ಳುವುದು ಮನುಷ್ಯ ಜಾತಿಗೇ ದ್ರೋಹ ಬಗೆದಂತೆ. ಎಲ್ಲರೂ ಒಪ್ಪುವಂತಹ ಮಾತು ; ಒಪ್ಪಿದ್ದೇವೆ ; ಒಪ್ಪಿದ್ದಂತೆ ನಡೆದುಕೊಂಡರೆ, ನಮಗೂ ಕ್ಷೇಮ, ನಾಡಿಗೂ ಶ್ರೇಯಸ್ಸು

"ನನ್ನ ದೇವರು ಅನಂತ ರೂಪಿ ; ಒಮ್ಮೆ ಜಾತೀಯ ಐಕ್ಯದ ರೂಪದಲ್ಲಿ ಇನ್ನೊಮ್ಮೆ ಅಸ್ಪೃಶ್ಯತಾ ನಿವಾರಣೆಯ ರೂಪದಲ್ಲಿ ಅವನು ದರ್ಶನ ಕೊಡುವನು........

—ಗಾಂಧೀಜಿ.

ಪ್ರಕಟಣೆ :
ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ.
ಬೆಂಗಳೂರು—1

ಈಗ ಪ್ರಕಟವಾಗಿದೆ

ಪ್ರಿಂಟರ್ಸ್ ಪ್ರಕಾಶನದ ಮೊದಲ ಪ್ರಕಟಣೆ

ಚಂದ್ರಶೇಖರ ಕಂಬಾರರ ಕಾದಂಬರಿ

ಸಿಂಗಾರೆವ್ವ ಮತ್ತು ಅರಮನೆ

ಬೆಲೆ: ರೂಪಾಯಿ ಒಂಬತ್ತು

ನಮ್ಮ ಮುಂದಿನ ಪ್ರಕಟಣೆ

ಸಿದ್ಧಲಿಂಗಯ್ಯ ಬರೆದ

ಅವತಾರಗಳು

ಪ್ರಿಂಟರ್ಸ್ ಪ್ರಕಾಶನ
16, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು-560 001

ಮಾಲೀಕರು
ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್
ಬೆಂಗಳೂರು-560 001

F/NP/KRNU/72 No. M (2) PRB 211/73-74

ನಾನು ಸೃಜನಶೀಲ ಲೇಖಕ ಆದರೆ... ಅಲೆಗ್ಸಾಂಡರ್ ಸೋಲ್ಜೆನಿಟ್ಸನ್

ಇಂಕ್ ಡ್ರಾಯಿಂಗ್—ಶೀಲಾಗೌಡ



Printed at: Shalivahan Printers, Bangalore-53 Editor & Publisher
M. SRINIVAS